

ದುಡಿವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ ಸಂಪುಟ 3 ಸಂಚಿಕೆ 2 ಜನವರಿ 11, 2009 ರೂ.5/-



ಜಮ್ಮು-ಕಾಶ್ಮೀರ ಗೆದ್ದಿದ್ದು ಜನ



ಉಪ ಚುನಾವಣೆ

ಬಿಜೆಪಿ ಅಕ್ರಮಗಳಿಕೆ - ಜೆಡಿಎಸ್ ಪರ್ಯಾಯಕ್ಕೆ ಬಲಿ

ಮುಳಿಬಿನ್ಯಾರ್:

ಕ್ರೈಸ್ತ ಪ್ರಾರ್ಥನಾ ಮಂದಿರಕ್ಕೆ ಬೆಂಕಿ

ಬಾಬಾ ಬುಡನ್ ಗಿರಿ :

ಕ್ರಿಮಿನಲ್ ಮೊಕದ್ದಮೆ



ಪ್ಯಾಲೆಸ್ಟೈನ್ ಮೇಲೆ ಇಸ್ರೇಲ್ ಅತ್ಯಾಚಾರ

ಜನಶಕ್ತಿ ಕನ್ನಡ ವಾರಪತ್ರಿಕೆ

ನೋಟ



ಡಾ. ಜಿ. ಭಾಸ್ಕರ ಮಯ್ಯ

ಸಾಹಿತ್ಯದಲ್ಲಿ ಬದ್ಧತೆಯ ಪ್ರಶ್ನೆ ಮತ್ತು ಗೋರ್ಕಿ

ಸಾಹಿತ್ಯದ ಉದ್ದೇಶವೇನು? ಆತ್ಮತೃಪ್ತಿಗಾಗಿಯೋ, ಅದು ಸಮಾಜಕ್ಕಾಗಿಯೋ? ಸಾಹಿತಿಗೆ ಸಾಮಾಜಿಕ ಬದ್ಧತೆ ಬೇಕೆ? ಬೇಕಿದ್ದರೆ ಎಂತಹ ಬದ್ಧತೆ ಬೇಕು?

ಗೋರ್ಕಿಯವರು ಸಾಹಿತ್ಯದ ಕುರಿತು ಹೇಳಿದ ಮಾತು ಹೀಗಿವೆ:-'ಸಾಹಿತ್ಯವು ಜೀವನದ ಕನ್ನಡಿಯೇ' ಅಲ್ಲ. ಕನ್ನಡಿ ಮನೆಯಲ್ಲಿ ಇರಿಸಿಕೊಳ್ಳುವ ಒಂದು ವಸ್ತು. ಮುಖದ ಸೌಂದರ್ಯ ಹೆಚ್ಚಿಸಿಕೊಳ್ಳಲು, ಅಥವಾ ಮುಖದ ನೆರಿಗೆಗಳನ್ನು ಲೆಕ್ಕ ಹಾಕಲು ಅಥವಾ ಟ್ಯಾಪಿನ್ ಸರಿಪಡಿಸಿಕೊಳ್ಳಲು ಇರುವ ಒಂದು ಸಾಧನ. ನನ್ನ ದೃಷ್ಟಿಯಲ್ಲಿ ಸಾಹಿತ್ಯಕ್ಕೆ ಇಂಥ ಔದಾಸೀನ್ಯದ, ನಿಷ್ಕ್ರಿಯ ಪಾತ್ರವನ್ನು ನೀಡುವುದು ಖಂಡಿತವಾಗಿಯೂ ಸಾಹಿತ್ಯಕ್ಕೆ ಗೌರವ ತರುವ ವಿಚಾರವಲ್ಲ.

'ನೀವು ನನ್ನ ಮೇಲೆ ತಿರಸ್ಕಾರದ ಪ್ರಚಾರಕ ಎಂದು ಆರೋಪಿಸುತ್ತೀರಿ. ನನಗೆ ಪ್ರೀತಿ - ಪ್ರೇಮದ ಪ್ರಚಾರ ಮಾಡಲು ಸಲಹೆ ನೀಡುತ್ತೀರಿ. ಪ್ರಾಯಃ ನೀವು ಹೀಗೆ ಯೋಚಿಸುತ್ತಿರಬಹುದು. ನಾನು ಕಾರ್ಮಿಕರಿಗೆ ಹೀಗೆ ಹೇಳಬೇಕು - ನೀವು ಬಂಡವಾಳಗಾರರನ್ನು ಪ್ರೀತಿಸಬೇಕು; ಏಕೆಂದರೆ ಅವರು ನಿಮ್ಮ ಸತ್ವವನ್ನೇ ಹೀರುತ್ತಾರೆ! ನೀವು ಅವರನ್ನು ಪ್ರೀತಿಸಬೇಕು ಏಕೆಂದರೆ ಅವರು ನಮ್ಮ ನೆಲದ ಖಜಾನೆಯನ್ನೇ ಲೂಟಿ ಮಾಡುತ್ತಿದ್ದಾರೆ. ಅವರು ನಿಮ್ಮ ಕಬ್ಬಿಣದ ಭಂಡಾರದಿಂದ ಬಂದೂಕುಗಳನ್ನು ತಯಾರಿಸಿ ಅದರಿಂದಲೇ ನಿಮ್ಮನ್ನು ಕೊಂದು ಹಾಕಿಬಿಡುತ್ತಾರೆ. ನೀವು ಆ ಬದ್ಮಾಶ್‌ಗಳನ್ನು ಪ್ರೀತಿಸಿ; ಏಕೆಂದರೆ ಅವರಿಂದಾಗಿ ನಿಮ್ಮ ಮಕ್ಕಳು ಹಸಿವಿನಿಂದಾಗಿ ಸಾಯುತ್ತಾರೆ. ಬಂಡವಾಳಗಾರರನ್ನು ಖಂಡಿತವಾಗಿ ಪ್ರೀತಿಸಿ; ಏಕೆಂದರೆ ಅವರ ಚರ್ಚುಗಳು ನಿಮ್ಮನ್ನು ಅಜ್ಞಾನದ ಕತ್ತಲೆಗೆ ತಳ್ಳುತ್ತದೆ.

ಗೋರ್ಕಿ ಜಗತ್ತಿನ ಸಂಸ್ಕೃತಿಯ ನಿರ್ಮಾಪಕರಿಗೆ ಕೇಳಿದ ಪ್ರಶ್ನೆ:

'ಓ ಸಂಸ್ಕೃತಿಯ ನಿರ್ಮಾಪಕರೇ' ನೀವು ಯಾರ ಕಡೆಗಿದ್ದೀರಿ? ಯಾರಿಗೆ ಸಹಾಯ ಮಾಡುತ್ತೀರಿ? ಸಂಸ್ಕೃತಿಯನ್ನು ನಿರ್ಮಾಣ ಮಾಡುವ, ಜೀವನಕ್ಕೆ ಹೊಸರೂಪ ಕೊಡುವ ಶ್ರಮಜೀವಿಗಳ ಕಡೆಗಿರುತ್ತೀರೋ? ಅಥವಾ ತಲೆಯಿಂದ ಬುಡದವರೆಗೆ ಕೊಳೆತು ನಾರುವ, ಕೇವಲ ಜಡತ್ವದಿಂದ ಬದುಕು ಸಾಗಿಸುವ ಕೊಲೆಗಡುಕರ ಸಮುದಾಯವನ್ನು ಶಾಶ್ವತಗೊಳಿಸುವವರ ಕಡೆಗೆ ಇರುತ್ತೀರೊ?'



ಪ್ರೇಮಚಂದ್

ಇದು ಗೋರ್ಕಿಯವರ ನಿಲುವು. ತನ್ನ ಕಾಲದ ಸಾಮಾಜಿಕ ಜೀವನಕ್ಕೆ ಹೊಚ್ಚ ಹೊಸ ಗತಿಶೀಲತೆ, ಹೊಸ ದಿಕ್ಕನ್ನು ನೀಡಿದ ಯುಗ ನಿರ್ಮಾತೃ. ಗೋರ್ಕಿ ಭವಿಷ್ಯದ ದೃಷ್ಟಾರಾಗಿದ್ದಾರೆ. ಅವರೆಂದೂ ಕಲಾವಿದರ ತಟಸ್ಥ ನಿಲುವಿನಲ್ಲಿ ನಂಬಿಕೆಯಿಟ್ಟವರಲ್ಲ. ಜನರ ಸುಖದುಃಖದಲ್ಲಿ ಭಾಗಿಯಾದ ಕಲಾಕಾರರಾಗಿದ್ದರು. ಆದ್ದರಿಂದಲೇ ಅವರದ್ದು ಯಥಾರ್ಥವಾದಿ ನಿಲುವು. ಗೋರ್ಕಿಯವರ ಸಾಹಿತ್ಯವೆಂದರೆ ಅಂದಿನ ರಶ್ಯಾದ ಯಥಾರ್ಥ ಇತಿಹಾಸ. ಕೇವಲ ರಶ್ಯಾಕ್ಕೆ ಮಾತ್ರವಲ್ಲ; ಅವರು ಪ್ರಪಂಚದ ಶ್ರಮಜೀವಿವರ್ಗದ ಸಾಮಾಜಿಕ ಜೀವನದ ಪಥ ಅವರು ಪ್ರದರ್ಶಕರು; ಮುಂದೆ ದಾರಿ ತೋರುವ ದೀವಟಿಗೆ. ಆದ್ದರಿಂದಲೇ ಗೋರ್ಕಿ ಇಂದಿಗೂ ನಮಗೆ ಪ್ರಸ್ತುತ.

ಈ ಸಂದರ್ಭದಲ್ಲಿ ಪ್ರಸಿದ್ಧ ರಶ್ಯನ್ ವಿಮರ್ಶಕ Cingiz Aitimato ಹೇಳಿದ ಮಾತುಗಳನ್ನು ಉದ್ಧರಿಸಬಯಸುತ್ತೇನೆ:


'We are Gorky's followers, we see him as the artists moral yard stick, the most exalted example of militant humanism, love of mankind, and spiritual beauty. Moreover as regards new principles for portraying reality, aesthetic concepts arising from his methods, Gorky stands before us as a highly distinguished master of world realism. He is a writer of an uncompromisingly clear social stand a genuine writer of the people and a truly highly-cultured man, we are talking here about a culture which embraces the best of all that was generated in the past, a culture which thus wields such a mighty powerful and persuasive influence over us. Gorky's realism remains the criterion for modern realistic writing. We stand by Gorky's traditions, for these- traditions form part of our idea of literature?

'So long as poor, unfortunate, unhappy people continue to exist, in the world we would still need many writers like Gorky?

ಇದು ಮಹಾನ್ ಲೇಖಕ ಗೋರ್ಕಿಯವರ ಸಾಹಿತ್ಯದ ಬಗೆಗಿನ ಬದ್ಧತೆ ಕುರಿತು ಚಿಂತಿಸುವ ಮೊದಲು 'ಬದ್ಧತೆ' ಯೆಂದರೇನು?

ನಂಬಿಕೆ, ನಿಶ್ಚಿತ ನಿರ್ಣೀತ ಅಭಿಪ್ರಾಯ ಮತ್ತು ಬದ್ಧತೆ:

ನಂಬಿಕೆ ಮತ್ತು ನಿರ್ಣೀತ ಅಭಿಪ್ರಾಯ (faith and Conviction)ಗಳ ನಡುವೆ ಅಂತರವನ್ನು ನಾವು ಮನಗಾಣಬೇಕಾದ್ದು ಅತ್ಯಗತ್ಯ. ನಂಬಿಕೆ (faith) ನಮಗೆ ಕುಟುಂಬ, ಪರಂಪರೆ ಸುತ್ತಣ ಪರಿಸರದಿಂದ ನೀಡಲ್ಪಡುತ್ತದೆ. ಇಲ್ಲಿ ವ್ಯಕ್ತಿಗೆ ಚುನಾಯಿಸುವುದಕ್ಕೆ ಏನೂ ಉಳಿದಿರುವುದಿಲ್ಲ.



ಮ್ಯಾಕ್ಸಿಂ ಗಾರ್ಕಿ

ಇನ್ನೊಂದು ಬಗೆಯಲ್ಲಿ ಹೇಳುವುದಾದರೆ ಇದೊಂದು ಬಗೆಯ ತರ್ಕಹೀನ ಸ್ವೀಕೃತಿ: ಪ್ರಶ್ನಿಸದೆ ತನ್ನನ್ನು ತಾನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು. ಇದುವೆ (faith) ನಂಬಿಕೆ.

ಸಂಪೂರ್ಣ ನಾಗರಿಕತೆಯ ಇತಿಹಾಸವು Age of faith ನಿಂದ Age of Reason ಕಡೆಗೆ ಸಾಗಿದೆ. 'ನಂಬಿಕೆ' ನಮ್ಮನ್ನು ಭೂತದೆಡೆಗೆ ಕೊಂಡೊಯ್ಯುತ್ತದೆ. ಒಟ್ಟು ಜನ ಸಮುದಾಯದ ಬಹುದೊಡ್ಡ ವಿಭಾಗ 'ಪಶು ಪ್ರವೃತ್ತಿಯಲ್ಲಿರುತ್ತದೆ. ಅಂತವರು ವಿದ್ಯಾವಂತರಾದರೂ ಮಾಕ್ಸಿಂ ಗೋರ್ಕಿಯವರ 'ತಾಯಿ' ಅವರಿಗೆ ಏನೂ ಅರ್ಥವಾಗುವುದಿಲ್ಲ. ಅಂತವರಿಗೆ ಗೋರ್ಕಿ ಏಕೆ? ಏನೊಂದೂ- ವಿಕಾಸಜನ್ಯ- ವಿಕಾಸ-ಪ್ರಕ್ರಿಯೆ ತಿಳಿಯುವುದಿಲ್ಲ. ಇಂತಹ ಸಾಹಿತ್ಯಕಾರರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇವರು ಇನ್ನೂ ಪ್ರೇಮಗೀತೆ ಬರೆಯುತ್ತಾ, ಆಸ್ವಾದಿಸುತ್ತಾ ಸ್ವರತಿಯಲ್ಲಿ ಮಗ್ನರಾಗಿರುತ್ತಾರೆ. ಇವರ ಬಗ್ಗೆ ಮಾತನಾಡದಿರುವುದೇ ಕ್ಷೇಮ; ಏಕೆಂದರೆ ಮಳೆಗಾಲದ ಬುರುಜುಗಳಂತೆ ನೊರೆಗುಳ್ಳೆಗಳಂತೆ ಈ ನಡುಮನೆ, ನೆಲೆಮನೆ, ಚಾವಡಿ ಜಗುಲಿಯ ಸಾಹಿತಿಗಳು ಹೇಳ ಹೆಸರಿಲ್ಲದವರಾಗಿ ಕಾಲ ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಾರೆ.

ಇನ್ನು Conviction 'ಮನವರಿಕೆಯಾದದ್ದು'- ನಿರ್ಣೀತ ಅಭಿಪ್ರಾಯ. ಇದು faith ನಂತೆ ಜಡವಲ್ಲ; ಜೀವಂತವಾದುದು; Dynamic. ಆದರೆ, ಇದು ಜನಪರವಾಗಿರಬಹುದು; ಆದರೆ, ಜನಪರವಾಗಿಲ್ಲದಿರುವುದೇ ಹೆಚ್ಚು! ಕೆಲವೊಮ್ಮೆ ಸಾಹಿತಿಗಳ ನಿರ್ಣೀತ ಅಭಿಪ್ರಾಯ ಜನವಿರೋಧಿ-ಸಂಸ್ಕೃತಿವಿರೋಧಿ-ಹಾಗೂ ರಾಷ್ಟ್ರವಿರೋಧಿಯಾಗಿ ಮಾರ್ಪಡುತ್ತಿರುವುದನ್ನು ನಾವಿಂದು ಕಾಣುತ್ತಿದ್ದೇವೆ. ಈ ಬಗೆಯ ಜನರು ಇಂದು ASI (ಭಾರತದ ಪುರಾತತ್ವ ಇಲಾಖೆ)ಯಲ್ಲಿ ಸಾಕಷ್ಟು ಇದ್ದಾರೆ. ಅವರು ಬಾಬರಿ ಮಸೀದಿಯ ಕೆಳಗೆ ಎಂಬತ್ತು ಕಂಬಗಳ ಅತ್ಯಂತ ವಿಶಾಲವಾದ ರಾಮ ಮಂದಿರವನ್ನು ಪತ್ತೆ ಹಚ್ಚಿದ್ದಾರೆ! ಎ. ಎಸ್. ರಾವ್ ಎಂಬ ಕುಖ್ಯಾತ ಪುರಾತತ್ವ ಶಾಸ್ತ್ರಜ್ಞ ಮುಳುಗಿ ಹೋದ ಕೃಷ್ಣನ ದ್ವಾರಕೆಯನ್ನು ಹೊರ ತಂದಿದ್ದಾನೆ! ನಮ್ಮ ಕರ್ನಾಟಕದಲ್ಲೂ ಸೂರ್ಯನಾಥ ಕಾಮತ್, ಚಿದಾನಂದ ಮೂರ್ತಿ ಮೊದಲಾದ ಕೋಮುವಾದಿ Conviction ಇರುವ ಮಹಾಮಹಿಮರಿದ್ದಾರೆ. ಚಿದಾನಂದ ಮೂರ್ತಿಯವರಂತೂ ಬಾಬಬುಡಾನ್ ಗಿರಿಯ ಗೋರಿಯಲ್ಲಿ ಭಗವಾನ್ ದತ್ತಾತ್ರೇಯನ್ನು ಪ್ರತ್ಯಕ್ಷವಾಗಿ ಕಂಡಿರುತ್ತಾರೆ! ಇಂಥ Conviction ಇರುವ ಇನ್ನೊರ್ವ ಕನ್ನಡದ ಮಹಾನ್ ಕಾದಂಬರಿಗಾರ ಎಸ್. ಎಲ್. ಭೈರಪ್ಪನಂತೂ ಕೋಮು ವಿಷಜ್ವಾಲೆಯನ್ನು ಹರಡಲು ಇತಿಹಾಸವನ್ನು ತಿರುಚಿ ತಿರುಚಿ 'ಆವರಣ'ವೆಂಬ ಕುಂಭೀಪಾಕವನ್ನು ಸೃಷ್ಟಿಸಿದ್ದಾರೆ.

ಆದರೆ, ಇದಕ್ಕೆ ತದ್‌ವಿರುದ್ಧವಾಗಿ ನಿರಂಜನ, ಕಾರಂತ, ಮುಕ್ತಿಬೋಧ್, ನಿರಾಲಾ, ಪ್ರೇಮ್‌ಚಂದ್ ಮೊದಲಾದವರು ಪೀಡಿತ-ಶೋಷಿತ ಜನರ ಪರವಾಗಿ ನಿಲ್ಲುತ್ತಾರೆ. ಇವರ Conviction ಬದ್ಧತೆಯ ಶ್ರೇಣಿಯದು. ಇಂಥವರು ಗೋರ್ಕಿಯ ಮಾರ್ಗದಲ್ಲಿ ಸಾಗುತ್ತಾ ಮಾನವತೆಯ ಅಭ್ಯುದಯಕ್ಕಾಗಿ ಶ್ರಮಿಸುವ ಶ್ರೇಷ್ಠ ಲೇಖಕರು.

ಬದ್ಧತೆ (Commitment) ಎಂಬುದು Conviction ಗಿಂತ ಹೆಚ್ಚು ಬಲಶಾಲಿಯಾದ ಪ್ರಬುದ್ಧವಾದ ಪದ. 'ಬದ್ಧತೆ' ಎಂಬುದು ಯಾವುದಾದರೊಂದು ತತ್ವಕ್ಕೆ, ವಾದ ಪ್ರಣಾಳಿಗೆ, ಪಕ್ಷಕ್ಕೆ ಎಂಬಿತ್ಯಾದಿ ಅಭಿಪ್ರಾಯಗಳಿವೆ. ಹೀಗೆ 'ಬದ್ಧ'ವಾದ ಮನೋಧರ್ಮ ಸೋದ್ದೇಶಿತವಾದ ಕೃತಿಯನ್ನು ರಚಿಸುತ್ತದೆ. ಅಥವಾ ಸೋದ್ದೇಶಿತವಾದ ಕೃತಿ- ಕಾರ್ಯ- ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಇದು ಕೇವಲ ಬೇಜವಾಬ್ದಾರಿಯ ವರ್ತನೆಯಂತೂ ಖಂಡಿತಾ ಅಲ್ಲ. ಬದಲಿಗೆ ಆಧುನಿಕ ಯುಗದ ಫ್ಯಾಸಿಸ್ಟ್ ಮನೋವೃತ್ತಿ. ಉದಾತ್ತ Conviction ವುಳ್ಳ ರನ್ನ, ಜನ್ನ, ಪಂಪ, ಕುಮಾರವ್ಯಾಸ ತುಲಸಿದಾಸ ಎಲ್ಲರೂ ಸೋದ್ದೇಶಿತ ಕವಿಗಳೇ. ಅವರರವರು ಅವರರ ಮತಧರ್ಮಗಳಿಗೆ ಬದ್ಧರಾಗಿದ್ದೂ ಶ್ರೇಷ್ಠ ಕೃತಿಗಳನ್ನು ರಚಿಸುವಲ್ಲಿ ಸಮರ್ಥರಾದವರು. ಆದರೆ ಆ ಕೃತಿಗಳನ್ನು ತಮ್ಮ ಯುಗ ಧರ್ಮಕ್ಕೆ ಸೀಮಿತರಾಗಿರುವುದನ್ನು ಪರಿಲಕ್ಷಿಸಿಯೇ ಅವುಗಳನ್ನು ಮಹಾನ್ ಪರಂಪರೆಯ ಬದ್ಧ-ಅಬದ್ಧ ಲೇಖಕರ ಕೃತಿಗಳ ಬಳುವಳಿಯಾಗಿ ಸ್ವೀಕರಿಸಬೇಕು.

(ಮುಂದುವರಿಯುವುದು)

ಜನಶಕ್ತಿ ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕ್ರಿಮಿನಲ್ ಮೊಕದ್ದಮೆ ಹಿಂತೆಗೆತ : ದುಷ್ಟ ಕಾರ್ಯತಂತ್ರ

ಸೌಹಾರ್ದತೆ ಹಾಳುಗೆಡಹುವವರ ಮೇಲಿನ ಮೊಕದ್ದಮೆ ವಾಪಸು ತೆಗೆದು ಸೌಹಾರ್ದತೆಗೆ ಹೋರಾಡುತ್ತಿರುವವರ ಮೇಲಿನ ಮೊಕದ್ದಮೆ ಮುಂದುವರಿಸಿದ್ದು ಬಿಜೆಪಿ ಸರ್ಕಾರದ ದುಷ್ಟ ಕಾರ್ಯತಂತ್ರದ ಭಾಗ. ಬಹುಮತವಿದೆ ಎಂಬ ಅಹಂಮಿಕೆಯಲ್ಲಿರುವ ಬಿಜೆಪಿ ಇನ್ನು ಎಂತಹ ಅನಾಹುತಗಳನ್ನು ಮಾಡಲಿದೆಯೋ?

ಬಾಬಾಬುಡನ್‌ಗಿರಿಯಲ್ಲಿ ದರ್ಗಾ- ದತ್ತಪೀಠದ ವಿವಾದವನ್ನೇಬ್ಬಿಸಿ ಅಲ್ಲಿನ ಮತೀಯ ಸಾಮರಸ್ಯದ ವಿಭಿನ್ನ, ವಿಶಿಷ್ಟ ಸೂಫಿ ಪರಂಪರೆಯನ್ನು ನಾಶಗೊಳಿಸಲು ಸಂಘ ಪರಿವಾರ ನಡೆಸಿದ ಕಾನೂನು ಬಾಹಿರ ಕೃತ್ಯಗಳಿಗೆ 2000 ಇಸ್ವಿಯಿಂದ 2004 ರ ನಡುವೆ ಹಾಕಲಾಗಿದ್ದ ಎಲ್ಲಾ ಹನ್ನೊಂದು ಕ್ರಿಮಿನಲ್ ಮೊಕದ್ದಮೆಗಳನ್ನು ರಾಜ್ಯ ಸರ್ಕಾರದ ಸಚಿವ ಸಂಪುಟವು ಹಿಂತೆಗೆದುಕೊಂಡಿರುವುದು ಖಂಡನೀಯವಾಗಿದೆ.

ಮಂಗಳೂರು ತಾಲ್ಲೂಕು ಪಂಚಾಯ್ತಿ ಸದಸ್ಯೆ ದಮಯಂತಿಯ ಗೂಂಡಾವರ್ತನೆ ವಿರುದ್ಧ ಹೂಡಲಾಗಿದ್ದ ಮೊಕದ್ದಮೆ ವಾಪಸು ತೆಗೆದುಕೊಂಡಿರುವುದು ಕೇವಲ ಬಿಜೆಪಿ ಎಂಬ ಕಾರಣಕ್ಕೆ. ಆದರೆ ಇದೇ ಹೊತ್ತಿನಲ್ಲಿ ಕೋಮುಸೌಹಾರ್ದತೆಗಾಗಿ ಹೋರಾಡು ತ್ತಿದ್ದವರ ಮೇಲಿನ ಕೇಸ್ ಹಿಂತೆಗೆಯದಿರುವುದು ಬಿಜೆಪಿಯ ಸಾಮರಸ್ಯ ವಿರೋಧಿ ನಿಲುವಿಗೆ ಸಾಕ್ಷಿಯಾಗಿದೆ.

ಸಂಘ ಪರಿವಾರದ ಅಂಗ ಸಂಘಟನೆಗಳಾದ ಭಜರಂಗದಳ, ವಿಶ್ವ ಹಿಂದೂ ಪರಿಷತ್, ಶ್ರೀರಾಮಸೇನೆಗಳು, ಶಾಸಕರಾಗಿದ್ದ ಸಿ.ಟಿ. ರವಿ, ಸುನಿಲ್‌ಕುಮಾರ್ ಮುಂತಾದವರು ಬಹಿರಂಗವಾಗಿಯೇ ನ್ಯಾಯಾಲಯದ ಆದೇಶಗಳನ್ನು, ಉಲ್ಲಂಘಿಸಿದ್ದಲ್ಲದೇ ಕಾನೂನು, ಸುವ್ಯವಸ್ಥೆಯನ್ನು ಹಾಳುಗೆಡಹುವ ಹಲವಾರು ಭಯ ಉತ್ಪಾದನೆಯ ಕೃತ್ಯಗಳಲ್ಲಿ ತೊಡಗಿದ್ದವು, ತೊಡಗಿವೆ. ದತ್ತಜಯಂತಿ, ದತ್ತಯಜ್ಞ, ದತ್ತ ಮಾಲೆಜ್ಞಾನ, ಅನಸೂಯಯಾಗ ಶೋಭಾಯಾತ್ರೆ, ಇತ್ಯಾದಿಗಳು ಹಿಂದೆಂದೂ ಇಲ್ಲದ ಹೊಸ ಆಚರಣೆಗಳು. ಮಾತ್ರವಲ್ಲ ಉಚ್ಛ ನ್ಯಾಯಾಲಯದ ಆದೇಶಕ್ಕೂ ಕೇಂದ್ರ ಸರ್ಕಾರದ ಪೂಜಾ ಸ್ಥಳಗಳ ಯಥಾಸ್ಥಿತಿ ಕಾಯ್ದುಕೊಳ್ಳುವ ಬಗೆಗಿನ ಶಾಸನಕಕ್ಕೂ ವಿರುದ್ಧವಾಗಿದೆ. ಹೀಗಾಗಿ ಪ್ರತಿವರ್ಷವೂ ಸಂಘ ಪರಿವಾರವು ಪರಂಪರೆ, ಕಾನೂನು, ಸಂವಿಧಾನವನ್ನು ಉಲ್ಲಂಘಿಸುತ್ತಲೇ ಬಂದಿದೆ. ಅಲ್ಲದೇ ದತ್ತಜಯಂತಿ ಮೂಲಕ ದತ್ತ ವಿಗ್ರಹ ಪೂಜೆ, ಗುಹೆಯ ಬಳಿ ಯಜ್ಞ ಇತ್ಯಾದಿಗಳು ಅತಿಕ್ರಮದ ಆಚರಣೆಗಳಾಗಿವೆ ಈ ಕಾರ್ಯಕ್ರಮಗಳನ್ನು ಜನತೆಯಲ್ಲಿ ಕೋಮುದ್ವೇಷ ಕೆರಳಿಸಲು ಆ ಮೂಲಕ ಜನತೆಯನ್ನು, ಸಮಾಜವನ್ನು ಒಡೆಯುವ ಕೃತ್ಯಗಳಿಗೂ ಕೈ ಹಾಕಲಾಗಿದೆ. ಶೋಭಾಯಾತ್ರೆ ಬಹಿರಂಗ ಸಭೆಗಳಲ್ಲಿ ಬಹಿರಂಗವಾಗಿ ಘೋಷಣೆ ಹಾಗೂ ಭಾಷಣ ಮುಸ್ಲಿಂ ಅಲ್ಪಸಂಖ್ಯಾತರ ವಿರುದ್ಧ ಅತ್ಯಂತ ಅವಹೇಳನಕಾರಿಯಾದ ಅಸಹ್ಯ ಭಾಷೆಯಲ್ಲಿ ಮಾತನಾಡಿರುವುದು ದಾಖಲೆಯಲ್ಲಿವೆ. ದಾಳಿಗಳೂ ನಡೆದಿವೆ. ಹೀಗಾಗಿಯೇ ಬಿಜೆಪಿ ಶಾಸಕರ, ಸಂಘ ಪರಿವಾರದ ಇಂತಹ ಕೃತ್ಯಗಳ ವಿರುದ್ಧ ಮೊಕದ್ದಮೆ ಹೂಡಲಾಗಿತ್ತು. ಈ ಮೊಕದ್ದಮೆಗಳನ್ನು ಸಹ ಹೂಡಿದ್ದು, ಹಲವು ಅನಾಹುತ ಸಂಭವಿಸಿದ ಬಳಿಕವೇ, ಪ್ರಗತಿಪರರ ಒತ್ತಾಯ ಹಾಗೂ ಮಿತಿ ಮೀರಿದ ವರ್ತನೆಗಳ ನಂತರವೇ. ಇದೂ ಸಹ ಕಾಂಗ್ರೆಸ್‌ನ ಮೃದು ಹಿಂದುತ್ವದ ಪರಿಣಾಮವೇ.


ಹೀಗೆ ಅಂತಹುದೇ ಚಟುವಟಿಕೆಗಳನ್ನು ಈಗಲೂ ಇದೇ ಸಂಘ ಪರಿವಾರ ಮುಂದುವರಿಸುತ್ತಿರುವಾಗ ಬಿಜೆಪಿ ಸರ್ಕಾರದ ಈ ನಿರ್ಧಾರ ಆ ಶಕ್ತಿಗಳಿಗೆ ಇನ್ನಷ್ಟು ಕುಮ್ಮಕ್ಕೂ ನೀಡಲಿದೆ. ಈ ಮೂಲಕವು ಇನ್ನೂ ಹೆಚ್ಚಿನ ಧಾಳಿಗಳಿಗೆ ಅವಕಾಶವನ್ನು ನೀಡಲಿದೆ.

ಇಂತಹ ನಿರ್ಧಾರವು ಯಡಿಯೂರಪ್ಪನವರ ಸರ್ಕಾರ ಕಾನೂನು ಸಂವಿಧಾನ ಕಾಯಲು ಸಿದ್ಧವಿಲ್ಲದ, ಸಂಘ ಪರಿವಾರದ ಕೋಮುವಾದಿ ಫ್ಯಾಶಿಸ್ಟ್ ಅಜೆಂಡಾವನ್ನು ಜಾರಿ ಮಾಡುವುದೇ ಪರಮಗುರಿ ಎಂದು ಸಾರಿದೆ.

ಈ ಹಿಂದೆಯೂ ಬಿಜೆಪಿಯು ಜೆಡಿ(ಎಸ್) ಜೊತೆಗೆ ಸರ್ಕಾರದಲ್ಲಿದ್ದಾಗ ಮಂಗಳೂರಿನಲ್ಲಿ ಕೋಮುಗಲಭೆಗಳಿಗೆ ಪ್ರಚೋದನೆ ನೀಡಿ ಗಲಭೆಯೆಬ್ಬಿಸಿ ಅಪಾರ ಪ್ರಮಾಣದ ಆಸ್ತಿ-ಜೀವಹಾನಿಗೆ ಕಾರಣವಾಗಿದ್ದ ಹಲವು ಕೋಮುಗಲಭೆಯ ಮೊಕದ್ದಮೆಗಳನ್ನು ಹಿಂತೆಗೆದು ಬಿಜೆಪಿ ಶಾಸಕರು, ನಾಯಕರು, ಭಜರಂಗದಳದ ಕಾರ್ಯಕರ್ತರನ್ನು ಖುಲಾಸೆ ಮಾಡಿತ್ತು.

ಪುಟ 4ಕ್ಕೆ

ಅರಳಿದ ಮನಗಳ ಹಿಂದಿನ ದುಗುಡಗಳು



ಗೆಳೆಯರೇ, 2008ಕ್ಕೇ ವಿದಾಯ, 2009ಕ್ಕೆ ಸ್ವಾಗತ ಹೇಳುವ ಹಲವು ಕಾರ್ಯಕ್ರಮಗಳನ್ನು ತಮ್ಮದೇ ವೈವಿಧ್ಯ ವಿಶೇಷತೆಯಲ್ಲಿ ನಡೆದವು. ಇಂತಹ ಕಾರ್ಯಕ್ರಮಗಳು ನಡೆಯುವಾಗ ಅರಳಿದ ಮನಗಳ ಹಿಂದೆ ದುಗುಡವೂ ಇತ್ತು. ಭಯೋತ್ಪಾದನೆಯ ಬೆದರಿಕೆ, ಕೋಮುವಾದಿಗಳ ಆಕ್ರಮಣ, ಆರ್ಥಿಕ ತೀವ್ರ ಹಿಂಜರಿತದ ದುಷ್ಪರಿಣಾಮಗಳು... ನಿತ್ಯದ ಬದುಕಿನ ಸಂಕಷ್ಟಗಳು... ಹೀಗೆ ಹಲವು ಹನ್ನೊಂದು. ಇಂತಹ ಸ್ಥಿತಿಯಿಂದ ಹೊರಬರಬೇಕು, ಸಾಮರಸ್ಯ, ಸೌಹಾರ್ದತೆಯಿಂದ ಬದುಕಬೇಕು ಎಂಬ ಹಂಬಲ. ಹೊಸ ವರ್ಷದಲ್ಲಿ ಅಂತಹ ಬೆಳವಣಿಗೆಗಳ ನಿರೀಕ್ಷೆ, ಎಲ್ಲರಲ್ಲೂ. ಇಂತಹ ಅಂತರಾಳದ ಅನಿಸಿಕೆ ಸಾಧ್ಯವಾಗಬೇಕಾದರೆ, ಸಾಧಿಸುವ ಸಂಕಲ್ಪವಾಗಬೇಕು. ಹೀಗೆ ಇದರತ್ತ ಎಲ್ಲರ ತುಡಿತ ಮಿಡಿತಗಳೂಬೇಕು.

ಶಾಂತಿಗೆ ಬೆಂಕಿ

ಆಶಯ ನಿಜವೇ. ಆದರೆ ವಾಸ್ತವ ಹೇಗಿದೆ? ಅಲ್ಲಿ ಜನವರಿ 1ರಂದೇ ಅಸ್ಸಾಂನಲ್ಲಿ ಬಾಂಬ್‌ಗಳು ಸಿಡಿದು ಅಮಾಯಕರು ಸತ್ತಿದ್ದಾರೆ. ಇಲ್ಲಿ ಹೊಸ ಆಚರಣೆಯ ಮುಗಿಲು ಮುಟ್ಟಿತ್ತಿರುವಾಗಲೇ ಜನವರಿ 1 ರ ಮಧ್ಯರಾತ್ರಿ ಕಳೆದು 2ನೇ ತಾರೀಖಿನ ಬೆಳಗಿನ 1-30 ರ ಸುಮಾರಿಗೆ ಹರಿಹರ ತಾಲ್ಲೂಕಿನ ಮಳೆಬೆನ್ನೂರಿನ ಕ್ರೈಸ್ತ ಪಾದ್ರಿ ಗಂಗಾಧರ್‌ರವರ ಮನೆಗೆ ಬೆಂಕಿ ಬಿದ್ದಿದೆ. ಅದು ತಡಿಕೆಯ ಮನೆ, ಪ್ರಾರ್ಥನಾ ಮಂದಿರವೂ ಆಗಿದ್ದು, ಸುಟ್ಟು ಹೋಗಿದೆ. ಹಲವು ವಸ್ತುಗಳೂ ಅಗ್ನಿಗಾಹುತಿಯಾಗಿವೆ. ಅದೃಷ್ಟವಶಾತ್ ಅಂದು ಪಾದ್ರಿ ಕಾರ್ಯನಿಮಿತ್ತ ಬೆಂಗಳೂರಿಗೆ ಬಂದಿದ್ದರು. ಅವರ ಪತ್ನಿ ನಿರ್ಮಲ, ಅವರ ಮಗಳ ಬೇರೊಬ್ಬರ ಮನೆಯಲ್ಲಿ ತಂಗಿದ್ದರು. ಒಂದು ವೇಳೆ ಅವರು ಈ ಮನೆಯಲ್ಲೇ ಮಲಗಿರುತ್ತಿದ್ದರೆ. ಎಂತಹ ಅನಾಹುತ ಸಂಭವಿಸುತ್ತಿತ್ತು! ಒರಿಸ್ಸಾದಲ್ಲಿ ಗ್ರಹಂ ಸ್ಟೈನ್ಸ್ ಹಾಗೂ ಮಕ್ಕಳನ್ನು ಜೀವಂತವಾಗಿ ಸುಟ್ಟಂತಹ ಧಾರುಣ ಘಟನೆ ಇದಾಗಿ ಬಿಡುತ್ತಿತ್ತೆ! ಅಂದರೆ ಈ ಬೆಂಕಿ ಹೇಗೆ ಹೊತ್ತಿಕೊಂಡಿತು?

'ಸತ್ಯಶೋಧನೆ'ಯ ತುಂಡುಗಳೆಂದೇ ವಾದಿಸುವ ಕೆಲವು ಪತ್ರಿಕೆ, ಟಿ.ವಿ.ಗಳು 'ಇದು ಕೆಲವು ಕಿಡಿಗೇಡಿಗಳ ಕೃತ್ಯ' ಎನ್ನುತ್ತಿವೆ. ಇನ್ನು ಕೆಲವರು ಪಕ್ಕದಲ್ಲೇ ಹುಲ್ಲಿನ ಬಣವೆ ಇದ್ದು ಇದು ವಿದ್ಯುತ್‌ನ ಶಾರ್ಟ್ ಸರ್ಕ್ಯೂಟ್‌ನಿಂದ ಸಂಭವಿಸಿರಬಹುದು ಎಂದೂ ಜೋಡಿಸುತ್ತಿವೆ. ಇದು ಮೊದಲಿನದಕ್ಕಿನ್ನ ಅತ್ಯುತ್ತಮ ನೆಪ!; ಅಲ್ಲಿ ಕನಿಷ್ಟ 'ಕಿಡಿಗೇಡಿಗಳಾದರೂ ಇದ್ದಾರೆ! ಇಲ್ಲಿ ನಿಸರ್ಗವೇ ಮುನಿದು ನೇರವಾಗಿ ಪಾದ್ರಿಯ ಮನೆ ಪ್ರಾರ್ಥನಾ ಮಂದಿರವನ್ನು ದಹಿಸುತ್ತಿದೆ! ಇಂತಹ 'ಸುದ್ದಿ ಶೂರರ' ಒಳಗೆ ಏನು ಇಳಿದಿದೆ ಎಂಬುದು ಅರಿಯುವುದು


ಮಳೆಬೆನ್ನೂರು : ಬೆಂಕಿಯಲ್ಲಿ ಮನೆ ಭಸ್ಮವಾದ ಬಳಿಕ ಸಂದಿಸಲು ಬಂದ ಕರ್ತವ್ಯನಿಷ್ಠರು

ಕಷ್ಟವೇನಲ್ಲ. ಇಲ್ಲಿ ಬೆಂಗಳೂರಿನ ಯಡವನಹಳ್ಳಿ ಚರ್ಚ್‌ಗೆ ಹಿಂದೆ ಬೆಂಕಿ ಹಚ್ಚಿ ಅದು ಶಾರ್ಟ್‌ಸರ್ಕ್ಯೂಟ್ ಎನ್ನಲಿಲ್ಲವೇ? ಮರಿಯಣ್ಣಪಾಳ್ಯದಲ್ಲಿ ಹಿಂಬಾಗಿಲು ಮುರಿದು ಪರಮ ಪವಿತ್ರ ಪ್ರಸಾದ, ಉಡುಪು, ಸಲಕರಣೆಗಳನ್ನು ಹಾಳುಮಾಡಿ 'ಯಾರೋ ಕಳ್ಳರು ಮಾಡಿದ ಕೃತ್ಯ' ಎನ್ನಲಿಲ್ಲವೇ? ಅಂದರೆ ಪೋಲೀಸರಿಗೆ, ಮಾಧ್ಯಮದವರಿಗೆ 'ಕಿಡಿಗೇಡಿಗಳು' ಕಳ್ಳರ ಕೃತ್ಯ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಅವರು ಯಾರು

ಪುಟ 4 ಕ್ಕೆ

ಅಕ್ರಮ ಗಣಿಗಾರಿಕೆ ತನಿಖೆ ಪೂರ್ಣವಾಗಲಿ, ಸಮಗ್ರ ಕ್ರಮವೂ ಇರಲಿ

ರಾಜ್ಯದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯ ಬಗ್ಗೆ ಕರ್ನಾಟಕ ಲೋಕಾಯುಕ್ತ ನ್ಯಾ. ಎನ್.ಸಂತೋಷ್ ಹೆಗ್ಡೆಯವರು ನೀಡಿರುವ ವರದಿಯು 2000 ದಿಂದ 2006ರವರೆಗಿನ ಕೆಲವು ವಿದ್ಯಮಾನಗಳನ್ನು ಹೊರಗಿಟ್ಟಿದೆ. ಅವರ ವರದಿಯಲ್ಲಿ ಹೇಳಿದಂತೆ ಇದರಲ್ಲಿ ಅಂದಿನ ಸರ್ಕಾರಗಳ ಮುಖ್ಯಮಂತ್ರಿಗಳು, ವಿಶೇಷವಾಗಿ ಕೃಷ್ಣ, ಧರಂ ಸಿಂಗ್, ನಂತರ 12 ಹಿರಿಯ ಅಧಿಕಾರಿಗಳ ಪಾತ್ರವನ್ನು ಉಲ್ಲೇಖಿಸಲಾಗಿದ್ದು ಇದರಿಂದಾಗಿ ಒಟ್ಟು 745.56 ಕೋಟಿ ರೂಪಾಯಿಗಳು ಬೊಕ್ಕಸಕ್ಕೆ ನಷ್ಟ ಸಂಭವಿಸಿದೆ ಎಂದು ಗುರುತಿಸಿದೆ. ಇವು ಗಮನಿಸಬೇಕಾದ ಸಂಗತಿಗಳು. ಹಾಗೆಯೇ ಇದು ಕೇವಲ 10 ಗಣಿಗಳಿಗೆ ಸಂಬಂಧಿಸಿದ್ದು, ಇನ್ನೂ 150 ಗಣಿಗಳ ವ್ಯವಹಾರದ ವರದಿ ಹೊರಬರಬೇಕಿದೆ.

ಈ ವರದಿಯನ್ನು ಸಮಗ್ರವಾಗಿ ಪರಿಶೀಲಿಸದೇ ಹಾಗೂ ಜನತೆಯೆದುರು ಮುಕ್ತವಾಗಿ ತೆರೆದಿಟ್ಟು ವಿಧಾನಸಭೆಯಲ್ಲೂ, ಸಾರ್ವಜನಿಕವಾಗಿಯೂ ಚರ್ಚಿಸದೇ ಮುಖ್ಯಮಂತ್ರಿ ಯಡಿಯೂರಪ್ಪ ಕೆಲವರ ಮೇಲೆ ಮಾತ್ರ ಗೂಬೆ ಕೂರಿಸಲು ಮುಂದಾದದ್ದು ಅವರ ಸಂಕುಚಿತ ರಾಜಕೀಯ ಹಿತಾಸಕ್ತಿಗೆ ಬಳಸುವ ಹೊಣೆಗೇಡಿತನದ ನಡತೆ ಎನ್ನಬೇಕಾಗುತ್ತದೆ. ವಸ್ತುಸ್ಥಿತಿಯ ಪೂರ್ಣ ಪರಿಶೀಲನೆ ಇಲ್ಲದೇ ಕ್ರಮವೂ ಇಲ್ಲದೇ ಮಾತನಾಡುವಲ್ಲಿ ದುರುದ್ದೇಶವಿದೆ. ಹಾಗೆಯೇ ಲೋಕಾಯುಕ್ತರ ವರದಿಯನ್ನು ಪರಿಶೀಲಿಸಲು ಮುಖ್ಯ ಕಾರ್ಯದರ್ಶಿ ಜೊತೆಗೆ ಮೂವರು ಕಾರ್ಯದರ್ಶಿಗಳ ಸಮಿತಿ ರಚಿಸಿದ್ದು ಸಹ ಅಕ್ರಮ ಗಣಿ ಹಣದ ಸರ್ಕಾರ ಎಂದು ಖ್ಯಾತಿಯಾಗಿರುವ ಯಡಿಯೂರಪ್ಪನವರು ನಿಜಕ್ಕೂ ಏನು ಮಾಡಬಯಸಿದ್ದಾರೆ ಎಂಬುದನ್ನು ಬಯಲಿಗಿಟ್ಟಿದೆ. ಅದನ್ನು ತಮ್ಮ ಅನುಕೂಲಕ್ಕೆ ಬಳಸುವ ಅಕ್ರಮ ಲೂಟಿಕಾರರನ್ನು ರಕ್ಷಿಸುವ ಯತ್ನಕ್ಕೆ ಯಡ್ಡಿ ಇಳಿದಿರುವುದು ಖಂಡನೀಯ. ಯಾವುದೇ ನಿಲುವು ಪ್ರಕಟಿಸುವ ಮೊದಲು ಸಾರ್ವಜನಿಕವಾಗಿ ಚರ್ಚೆಯಾಗಲಿ, ಆ ವರದಿ ಎಲ್ಲರಿಗೂ ಸಿಗುವಂತಾಗಲಿ, ನಂತರದಲ್ಲಿ ಕ್ರಮಗಳನ್ನು ಕೈಗೊಳ್ಳಲಿ. ಈಗಿನ ವರದಿಯು ಕೆಲವು ಪೂರ್ವಗ್ರಹದಿಂದ ಕೂಡಿದೆ ಎಂಬ ಟೀಕೆಗಳು ಕೇಳಿವೆ. ಉಳಿದ ತನಿಖೆಯೂ ನಿಷ್ಪಕ್ಷಪಾತವಾಗಿ ನಡೆಯಲಿ, ರೈತರ, ಕಾರ್ಮಿಕರ ಹಾಗೂ ರಾಜ್ಯದ ಹಿತರಕ್ಷಿಸುವ ದಿಕ್ಕಿನಲ್ಲಿ ವರದಿ ಬೆಳಕು ಚೆಲ್ಲಲಿ.

ಪುತ್ತೂರು

ದುಡಿವವರ ಒಗ್ಗಟ್ಟೇ ಬಿಜೆಪಿಗೆ ಮಗ್ಗುಲ ಮುಳ್ಳು !

ಪುತ್ತೂರಿನ ಕಾರ್ಮಿಕ ವರ್ಗ ಜಾಗೃತಗೊಂಡಿದೆ. ಅನ್ಯಾಯ, ಶೋಷಣೆ, ದಬ್ಬಾಳಿಕೆ ವಿರುದ್ಧ ಕಾರ್ಮಿಕ ವರ್ಗ ಒಂದಾಗುತ್ತಿದೆ. ಎಡ ಕಾರ್ಮಿಕ, ಸಂಘಟನೆಯ ಬೆಳವಣಿಗೆಯಿಂದ ಬಂಡವಾಳಶಾಹಿ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ಸಿಗರ ಕಪಟ ರಾಜಕೀಯ ಬಯಲಾಗುತ್ತಿದೆ. ಇಂತಹ ಸಂದರ್ಭದಲ್ಲಿ ಸಿಐಟಿಯುಗೆ ಸೇರಿದ ಕಾರ್ಮಿಕ ಸಂಘಟನೆಯನ್ನು ಒಡೆಯಲು ಬಿಜೆಪಿ ಪ್ರೇರಿತ ಬಿಎಂಎಸ್ ತುದಿಗಾಲಲ್ಲಿ ನಿಂತಿದೆ. ಕಾರಣವಿಷ್ಟೆ, ಇದು ಬಿಜೆಪಿಯ ರಾಜ್ಯಾಧ್ಯಕ್ಷ ಡಿ.ವಿ.ಸದಾನಂದಗೌಡರ ಊರು. ರಾಜ್ಯ ಸರ್ಕಾರದ ಏಕೈಕ ಮಹಿಳಾ ಮಂತ್ರಿಯಾಗಿ ಒಂದು ರೀತಿ ಸರ್ಕಾರದ 'ಕಂಟ್ರೋಲರ್' ಆಗಿರುವ ಶೋಭಾ ಕರಂದ್ಲಾಜೆಯವರ ತವರು. ಇಷ್ಟಾದರೂ ಬಿಜೆಪಿ ಪಕ್ಷದ ಬಂಡವಾಳವಾಗಿದ್ದ ಹಳ್ಳಿ ಪ್ರದೇಶದ ಕಾರ್ಮಿಕ ವರ್ಗ ಬಿಜೆಪಿ ಪಕ್ಷದಿಂದ ದೂರ ಸರಿಯುತ್ತಿದೆ. ಐದಾರು ವರ್ಷಗಳ ಹಿಂದೆ ಪುತ್ತೂರಿನಲ್ಲಿ ಬೀಡಿ ಕಾರ್ಮಿಕರ ಬವಣೆ ಹೇಳತೀರದಾಗಿತ್ತು. ಕೇವಲ ಅರ್ಧಕ್ಕರ್ಧ ಬೀಡಿ ಮಜೂರಿ, ಬೋನಸ್, ಅವೈಜ್ಞಾನಿಕವಾದ ನಷ್ಟ ವಸೂಲಿ ಹೀಗೆ ಹಲವಾರು ಸಮಸ್ಯೆಗಳು ಕಾರ್ಮಿಕರ ಪಾಲಿಗೆ ಉಚಿತವಾಗಿತ್ತು. ಆಗ ಇಲ್ಲಿ ಬಿಎಂಎಸ್ ಎಂಬ ಕಾರ್ಮಿಕ ಸಂಘಟನೆ ಬಲವಾಗಿ ಬೇರೂರಿತ್ತು.

ಆಶಾಕಿರಣ

ಇಂತಹ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಎಡಕಾರ್ಮಿಕ ಸಂಘಟನೆ ಸಿಐಟಿಯು ಇಂದು ಕಾರ್ಮಿಕ ವರ್ಗದ ಆಶಾಕಿರಣವಾಗಿ ಬೆಳೆದು ನಿಂತಿದೆ. ಬೀಡಿ ಕಾರ್ಮಿಕರಿಗೆ ತಮಗಾಗುತ್ತಿರುವ ಮೋಸ, ವಂಚನೆಯ ಅರಿವು ಮೂಡಿ ಸಿಐಟಿಯುನ ಮೂಲಕ ಹೋರಾಟ ಮಾಡುತ್ತಾ ಶೋಷಣೆಯ ವಿರುದ್ಧ ಧ್ವನಿ ಎತ್ತಿ ನ್ಯಾಯಪಡೆಯುವಲ್ಲಿ ಸಫಲರಾಗುತ್ತಿದ್ದಾರೆ.

ಸಿಐಟಿಯು ಹೋರಾಟದ ಮೂಲಕ ಬಾಕಿ ತುಟ್ಟಿಭತ್ಯೆ ಬೀಡಿ ಕಾರ್ಮಿಕರಿಗೆ ದೊರಕುವಂತೆ ಮಾಡಿದ ಮೇಲೆ ಮೈಮೇಲೆ ಇರುವೆ ಬಿಟ್ಟುಕೊಂಡವರಂತೆ ಎಚ್ಚೆತ್ತ ಬಿಜೆಪಿ ನಾಯಕರುಗಳು ಏನಾದರೂ ಮಾಡಿ ಸಿಐಟಿಯು ಸಂಘವನ್ನು ಒಡೆಯಬೇಕೆಂದು ರಾಜಕೀಯ ಸರ್ಕಸ್ ಆರಂಭಸಿದ್ದಾರೆ. ಇದರ ಮುಂದುವರಿದ ಭಾಗವೇ



ಪುತ್ತೂರಿನಲ್ಲಿ ನಡೆದ ಸೌಹಾರ್ದ ಕರ್ನಾಟಕ ಜಾಥಾ ಚಿತ್ರ

ಬಿಎಂಎಸ್‌ನ ಮರು ರಂಗಪ್ರವೇಶ ಡಿಸೆಂಬರ್5 ರಂದು ಕಾರ್ಮಿಕ ಸಚಿವ ಬಚ್ಚೇಗೌಡ ಪುತ್ತೂರಿಗೆ ಬರ್‍ತಾರೆ, ಬೀಡಿ ಕಾರ್ಮಿಕರಿಗೆ ಮನೆ ಕೊಡ್ತಾರೆ, ನಿವೇಶನ ರೇಷನ್ ಕಾರ್ಡ್ ನೀಡ್ತಾರೆ, ಅಸಂಘಟಿತ ಕಾರ್ಮಿಕರಿಗೆ ಬಿಪಿಎಲ್ ಕಾರ್ಡ್ ಕೊಡ್ತಾರೆ, ಎಂದು ಹೇಳಿ ಕಾರ್ಮಿಕ ವರ್ಗವನ್ನು ಮೋಸ ಮಾಡಿ 50 ಸಾವಿರ ಜನ ಸೇರಿಸಲು ಹೊರಟ ಬಿಎಂಎಸ್‌ನ ಕಾರ್ಮಿಕ ಸಮಾವೇಶಕ್ಕೆ ಬಂದವರ ಸಂಖ್ಯೆ 1000 ದಾಟಲಿಲ್ಲ. ಬಂದವರಲ್ಲಿ ಅರ್ಧ ಜನ ಬಿಜೆಪಿ ಕಾರ್ಯಕರ್ತರು!

ಈ ಮಧ್ಯೆ ಸಿಐಟಿಯುನ ನೇತೃತ್ವದಲ್ಲಿ ಡಿಸೆಂಬರ್ 19ರಂದು 'ಜಾತಿ ಬಿಡಿ ಮತಬಿಡಿ, ಮಾನವತೆಗೆ ಜೀವ ಕೊಡಿ' ಎಂದು ಜಗತ್ತಿಗೆ ಸಾರಿದ ನಾರಾಯಣಗುರು ಸಭಾಭವನದಲ್ಲಿ 'ಐಕ್ಯ ಕಾರ್ಮಿಕರ ಸಮಾವೇಶ ಮತ್ತು ಸೌಹಾರ್ದ ಕರ್ನಾಟಕ ಜಾಥಾದ ಸ್ವಾಗತ ಸಮಾವೇಶ' ನಡೆಯಿತು. ಆ ಮೂಲಕ ಪುತ್ತೂರಿನ ಕಾರ್ಮಿಕ ವರ್ಗ ಆಮಿಷಗಳಿಗೆ ಬಲಿ ಬೀಳದು ಎಂಬುದನ್ನು ಸಾರಿ ಹೇಳಿತ್ತು. ಡಿಸೆಂಬರ್ 19 ರಂದು ಬೆಳಿಗ್ಗೆ 10 ಗಂಟೆಗೆ ಪುತ್ತೂರು ನಗರದಲ್ಲಿ ಸಿಪಿಐ(ಎಂ) ನೇತೃತ್ವದ ಸೌಹಾರ್ದ ಕರ್ನಾಟಕ ಜಾಥಾವನ್ನು ಸ್ವಾಗತಿಸಿ ಪುತ್ತೂರು ನಗರದಾದ್ಯಂತ ಮೆರವಣಿಗೆ ನಡೆಸಲಾಯ್ತು. ಕೆಂಬಾವುಟವನ್ನು ಸೂರೆಗೊಂಡ ಮೆರವಣಿಗೆಯಲ್ಲಿ ಸಾವಿರಾರು ಮಹಿಳಾ ಕಾರ್ಮಿಕರು ಭಾಗವಹಿಸಿದ್ದು ವಿಶೇಷ.

ಬಳಿಕ ನಡೆದ ಸಮಾವೇಶವನ್ನುದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ:ಜಿ.ಎನ್.ನಾಗರಾಜ್, ಮಾತನಾಡಿ ಭಯೋತ್ಪಾದನೆಯಲ್ಲಿ ತೊಡಗುವ ಮುಸ್ಲಿಮರು ಮುಸ್ಲಿಮರೇ, ಅಲ್ಲ ಎಂದು ಮುಸ್ಲಿಂ ಧರ್ಮಗುರುಗಳು ಪತ್ವ ಹೊರಡಿಸಿರುವಾಗ ಸಂಘ ಪರಿವಾರದ ಮಠಾಧೀಶರು, ಸ್ವಾಮೀಜಿಗಳು ಹಿಂದುತ್ವವಾದಿ ಉಗ್ರರನ್ನು ಖಂಡಿಸುವ ಧೈರ್ಯ ಪ್ರದರ್ಶಿಸಲಿ ಎಂದು ಸವಾಲು ಹಾಕಿದರು. ರಾಜ್ಯದ ಬಿಜೆಪಿ ರಾಜ್ಯಾಧ್ಯಕ್ಷ ಡಿ.ವಿ.ಸದಾನಂದಗೌಡ ಮುಖ್ಯಮಂತ್ರಿ ಯಡಿಯೂರಪ್ಪ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದು, ಬಿಜೆಪಿ ಪಕ್ಷ ಗಣಿ, ಭೂ ಲಿಕ್ಕರ್ ಮಾಫಿಯಾಗಳ ಪಕ್ಷವಾಗಿದೆಂದು ಬಿಜೆಪಿಯ ಹಿರಿಯ ಮುಖಂಡ ಉರಿಮಜಲು ರಾಮಭಟ್ಟರು ಆರೋಪಕ್ಕೆ ಉತ್ತರಿಸಲು ಡಿ.ವಿ. ಹಿಂಜರಿಯುವುದೇಕೆ? ಎಂದು ಪ್ರಶ್ನಿಸಿದ ಜಿ.ಎನ್.ನಾಗರಾಜ್ ಸಂಸದರಾಗಿ ಡಿ.ವಿ.ಸದಾನಂದಗೌಡ ಮಾಡಿರುವ ಅಭಿವೃದ್ಧಿ ಕೆಲಸವಾದರೂ ಏನು? ಬೆಂಗಳೂರು-ಮಂಗಳೂರು ಹಗಲ ರೈಲು ಓಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವ ಬದಲು ಬಾಯಲ್ಲಿ ರೈಲು ಓಡಿಸುವುದನ್ನೇ ಹವ್ಯಾಸ ಮಾಡಿಕೊಂಡಿದ್ದಾರೆಂದು ಗೇಲಿ ಮಾಡಿದರು.

ಸಿಐಟಿಯು ರಾಜ್ಯಾಧ್ಯಕ್ಷರೂ, ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿಗಳೂ ಕಾಂ:ಬಿ.ಮಾಧವ, ಉ.ಕ.ಜಿಲ್ಲಾ ಕಾರ್ಯದರ್ಶಿ ಕಾಂ:ಶಾಂತರಾಮ್ ನಾಯಕ್, ದ.ಕ. ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ಕಾಂ: ವಸಂತ ಆಚಾರಿ, ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ನ್ಯಾಯವಾದಿ ದ.ಕ.ಜಿಲ್ಲಾ ಅಧ್ಯಕ್ಷ ಮುನೀರ್ ಕಾಟಿಪಳ್ಳ, ಉಪಸ್ಥಿತರಿದ್ದರು. ಸಿಪಿಐ(ಎಂ)ನ ಪುತ್ತೂರು ತಾಲ್ಲೂಕು ಕಾರ್ಯದರ್ಶಿ ನ್ಯಾಯವಾದಿ ಕಾಂ:ಪಿ.ಕೆ.ಸತೀಶನ್ ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಕೊನೆಯಲ್ಲಿ ತಾಲ್ಲೂಕು ಬೀಡಿ ಕಾರ್ಮಿಕ ಸಂಘದ ಕಾರ್ಯದರ್ಶಿ ಲೀಲಾವತಿ ಸರ್ವ... ವಂದಿಸಿದರು..ಜಾಥಾ ತಂಡದಿಂದ ಕೋಮುವಾದ ಭಯೋತ್ಪಾದನೆಗಳ ಕರಾಳತೆಯನ್ನು ಬಿಂಬಿಸುವ ಬೀದಿನಾಟಕವನ್ನು ಪ್ರದರ್ಶಿಸಲಾಯಿತು ಮತ್ತು ಕ್ರಾಂತಿ ಗೀತೆಗಳನ್ನು ಹಾಡಲಾಯಿತು.

■ ಸವಿತಾ, ಸುಭಾಷಿಣಿ, ಪುತ್ತೂರು

ಕ್ರಿಮಿನಲ್ ಮೊಕದ್ದಮೆ ಹಿಂತೆಗೆತ ....

ಪುಟ 3 ರಿಂದ

ಈಗಾಗಲೇ ಸರ್ಕಾರ ಹಂತಹಂತವಾಗಿ ದರ್ಗಾ ಪೀಠದಲ್ಲಿರುವ ಗುಹೆಯಲ್ಲಿ ವಿಕೃತಿಗಳನ್ನು ನಡೆಸಲು ಅವಕಾಶ ಕಲ್ಪಿಸುವ ಕ್ರಮಗಳನ್ನು ಕೈಗೊಂಡಿದೆ. ಗುಹೆಯ ಹತ್ತಿರದಲ್ಲಿಯೇ ಈ ಬಾರಿ ದತ್ತ ಜಯಂತಿ, ಹವನ, ಹೋಮ, ವಿಗ್ರಹ ಪೂಜೆಗೆ ಅವಕಾಶ ಕಲ್ಪಿಸಿತ್ತು. ಜಿಲ್ಲಾಡಳಿತ ಕೋರ್ಟ್ ಆದೇಶ ಜಾರಿಗೊಳಿಸದೇ ನಿರ್ಲಕ್ಷಿಸಿ ಸಂಘ ಪರಿವಾರದ ಆಚರಣೆಗೆ ಅವಕಾಶ ಕಲ್ಪಿಸಿತು. ಮತ್ತು ಹಲವು ತಿಂಗಳು ಕಳೆದರೂ ಕುಸಿದಿರುವ ಗುಹೆಯ ಪುನರ್ ನಿರ್ಮಾಣಕ್ಕೆ (ಮಳೆಯಿಲ್ಲದ ಈ ಅವಧಿಯಲ್ಲಿ) ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಹಲವು ಅನುಮಾನಗಳಿಗೂ ಕಾರಣವಾಗುತ್ತಿದೆ. ಇದು ಗಂಭೀರವಾದ ವಿಷಯ.

ಸಂಘ ಪರಿವಾರದ, ಸೌಹಾರ್ದ ಪರಂಪರೆಯ ವಿರೋಧಿ. ಕಾನೂನು-ಸಂವಿಧಾನ ವಿರೋಧಿ ಅಪ್ರಜಾಸತ್ತಾತ್ಮಕ ಚಟುವಟಿಕೆಗಳಿಗೆ ಕಡಿವಾಣ ಹಾಕದೆ ಸರ್ಕಾರ ಪ್ರೋತ್ಸಾಹಿಸುತ್ತಿರುವುದು ಭಾರಿ ಅನಾಹುತಕಾರಿ ಬೆಳವಣಿಗೆಗಳಿಗೆ ಕಾರಣವಾಗಲಿದೆ. ಜನತೆಯ ಹಿತ ಕಾಯಲು, ಪ್ರಜಾಸತ್ತಾತ್ಮಕ ಚಳವಳಿಗಳನ್ನು ದಮನಿಸಲು ಮೊಕದ್ದಮೆ ಹೂಡಿದ್ದಲ್ಲಿ ಅವುಗಳನ್ನು ಸರ್ಕಾರ ಹಿಂತೆಗೆದುಕೊಳ್ಳುವ ರೂಢಿ ಇತ್ತು. ಸಾರ್ವಜನಿಕ ಹಿತದ ಪ್ರಶ್ನೆಗಳು ಅಲ್ಲಿರುತ್ತಿದ್ದವು. ಆದರೆ ಸರ್ಕಾರಕ್ಕಿರುವ ಈ ಅವಕಾಶವನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆ. ಮೊಕದ್ದಮೆಗಳನ್ನು ಹಿಂಪಡೆವ ನಿರ್ಧಾರವನ್ನು ಸರ್ಕಾರ ಕೈಬಿಟ್ಟು, ಅದನ್ನು ರದ್ದುಗೊಳಿಸಬೇಕು. ಮೊಕದ್ದಮೆಗಳನ್ನು ಎದುರಿಸದೇ ಹಿಂತೆಗೆದುಕೊಂಡು ಪರಿವಾರ ತನ್ನ ಸೋಲನ್ನು ಒಪ್ಪಿಕೊಂಡಿದೆ. ಈ ದಿಶೆಯಲ್ಲಿ ನ್ಯಾಯಾಲಯ ಮುಕ್ತವಾದ ನಿರ್ಧಾರ ಕೈಗೊಳ್ಳಲು ಅವಕಾಶ ಕಲ್ಪಿಸಬೇಕು. ಇಂತಹ ಮಧ್ಯಪ್ರವೇಶ ನಿಲ್ಲಬೇಕು. ಸಂಘ ಪರಿವಾರದ ಪುಂಡಾಟಿಕೆಗಳಿಗೆ ಸರ್ಕಾರವೇ ಪ್ರೋತ್ಸಾಹಿಸುವ, ಬೆಂಬಲಿಸಿ ರಕ್ಷಿಸುವುದನ್ನು ನಿಲ್ಲಿಸಬೇಕು. ಇದು ಮುಂದಿನ ಅನಾಹುತಗಳ ಎಚ್ಚರಿಕೆಯ ಗಂಟೆಯಾಗಿದೆ. ○

ಅರಳಿದ ಮನಗಳ ದುಗುಡಗಳು....

ಪುಟ 3ರಿಂದ

ಎಂದು ಹೇಳುವಾಗ ನಾಲಿಗೆ ತೊದಲಿ, ನೆನಪು ಹಾರುತ್ತದೆ!

ಮಳೆ ಬೆನ್ನೂರಿನ ಕಥೆಯೂ ಇದೆ. ಈಗಾಗಲೇ ದಾವಣಗೆರೆ ಬಾಡ ಚರ್ಚ್ ಮೇಲಿನಿಂದ ಧಾಳಿ ಆರಂಭಗೊಂಡು ಅಲ್ಲಿನ ಇತರೆ ಚರ್ಚ್-ಪ್ರಾರ್ಥನಾ ಮಂದಿರಗಳ ಮೇಲೆ ದಾಳಿ ನಡೆಯಿತು. ನಂತರ ಬೀಗ ಹಾಕಲಾಯಿತು. ಪ್ರಾರ್ಥನೆಯನ್ನು ನಿಲ್ಲಿಸಲಾಯಿತು. ನ್ಯಾ.ಸೋಮಶೇಖರ ಆಯೋಗ ನಿರ್ಬಂಧಗಳ ಆಜ್ಞೆ ಪಾಸ್ ಮಾಡಿದ ಬಳಿಕ, ನ್ಯಾಯಲಯವು ಮಧ್ಯಪ್ರವೇಶಿಸಿ ಪ್ರಾರ್ಥನೆಗೆ ಅವಕಾಶ ಕಲ್ಪಿಸಿತು. ಆ ಮೂರು ಚರ್ಚ್‌ಗಳಲ್ಲಿ ಈ ಮಳೆಬೆನ್ನೂರಿನದ್ದು ಒಂದು ಈ ಬಗ್ಗೆ ಭಜರಂಗದಳ, ವಿಹಿಂಪ, ಬಿಜೆಪಿ ಎಷ್ಟೆಲ್ಲಾ ರಂಪ ಮಾಡಿ ಹಲ್ಲೆ ನಡೆಸಿದ್ದವು ಎಂಬುದು ಕಣ್ಣೆದುರೇ ಇವೆ. ಈ ಹಿನ್ನೆಲೆಯಲ್ಲಿ ಇಲ್ಲಿ ಜನವರಿ 4 ರವರೆಗೆ ಪ್ರಾರ್ಥನೆಗೆ ಅವಕಾಶ ನೀಡಲಾಗಿತ್ತು. ಇಷ್ಟನ್ನು ಸಹಿಸಲು ಸಿದ್ಧರಿಲ್ಲದೇ, ನ್ಯಾಯಾಲಯವು ನೀಡಿದ್ದರೂ ಲೆಕ್ಕಿಸದೆ ಶಕ್ತಿಗಳ ಲೆಕ್ಕಾಚಾರದ ಧಾಳಿಯಾಗಿದೆ. ಇದೇ ರೀತಿ ಇನ್ನೊಂದು ಪ್ರಾರ್ಥನಾ ಮಂದಿರದ ಫಾಸ್ಟರ್ ರಾಜಶೇಖರ ಮನೆ ಮುಂದೆ ಗಲಾಟೆ ಮಾಡಿದ್ದಲ್ಲದೇ ಅವರ ಮೇಲೆಯೇ ಒಂದು ಕ್ರಿಮಿನಲ್ ಕೇಸ್ ಹಾಕಿರುವುದು ಜಮೀನಿಗೆ ಅಲೆದಾಡುತ್ತಿರುವುದು ಬೆಳಕಿಗೆ ಬಂದಿದೆ. ಅಂತಹ ಶಕ್ತಿಗಳ ಧಾಳಿಗೆ ಸರ್ಕಾರದ, ಆಡಳಿತ ಯಂತ್ರದ ಸಕ್ರಿಯ ಬೆಂಬಲವೂ ಕಾಣುತ್ತಿದೆ.

ಅಂದರೆ ರಾಜ್ಯದ ಜನತೆ ಶಾಂತಿ, ಸುವ್ಯವಸ್ಥೆ, ಸೌಹಾರ್ದತೆ ಬಯಸುತ್ತಿದ್ದರೆ ಸಂಘ ಪರಿವಾರ, ಬಿಜೆಪಿ ಸರ್ಕಾರ ಅದರ ವಿರುದ್ಧ ಹೋಗುವ ಅಜೆಂಡಾ ಪ್ರಕಟಿಸುತ್ತಿದೆ. ಜನರ ಆಶಯ ನಾಶ ಮಾಡುವುದನ್ನು ಮೌನವಾಗಿ ಸಹಿಸಿಕೊಂಡಿರಬೇಕೆ ಅಥವಾ ಪ್ರಜಾಸತ್ತಾತ್ಮಕವಾದ ಪ್ರತಿಭಟನೆಗೆ ಇಳಿಯಬೇಕೇ?

ಇಂತಹ ಶಕ್ತಿಗಳೊಂದಿಗೆ ಮುಖಾಮುಖಿಯಾಗುವುದೇ ಹೊಸ ವರುಷದ ಹೊಸ ಸಂಕಲ್ಪವಾಗಬೇಕು.

ಪಕ್ಷಾಂತರ ರಾಜಕೀಯದಲ್ಲಿ ಬಿಜೆಪಿ ಹೊಸ ಮಾಡೆಲ್ ಸೃಷ್ಟಿಸಿದೆ. ರಾಜಕೀಯ ಎಂದರೆ ಈಗ ಕೇವಲ ಮತ ಚಲಾವಣೆ ಎಂದಾಗಿದೆ. ಅದೊಂದು ದೊಡ್ಡ ಉದ್ಯಮವಾಗಿ ಬೆಳೆದಿದೆ, ಜನಗಳ ದೃಢ ಹೋರಾಟಗಳು ಮಾತ್ರವೇ ಈ ಪರಿಸ್ಥಿತಿಯನ್ನು ಬದಲಿಸಲು ಸಾಧ್ಯ, ಭಿನ್ನ ಫಲಿತಾಂಶಗಳನ್ನು ಪಡೆಯಲು ಸಾಧ್ಯ ಎನ್ನುತ್ತಾರೆ ಸಿಪಿಐ(ಎಂ) ರಾಜ್ಯಕಾರ್ಯದರ್ಶಿಗಳು.

ಬಿಜೆಪಿ-ಅಕ್ರಮ ಸಂಪಾದನೆ, ಜೆಡಿ(ಎಸ್) ಮೂರನೇ ಪರ್ಯಾಯಕ್ಕೆ ತುಂಬಿದ ಬಲ

ಉಪ ಚುನಾವಣೆಗಳ ನಂತರ

ವಿ.ಜೆ.ಕೆ.ನಾಯರ್

ಕರ್ನಾಟಕ ಈಗ ಹೊಸ ಪ್ರವೃತ್ತಿ ಸೃಷ್ಟಿಸುವಲ್ಲಿ ಕುಖ್ಯಾತಿ ಪಡೆಯುತ್ತಿದೆ. ಈ ಹಿಂದೆ ನಮ್ಮದೇಶದಲ್ಲಿ ಸಂಸದೀಯ ಪ್ರಜಾಪ್ರಭುತ್ವ ಹಲವು ಪಕ್ಷಾಂತರಗಳನ್ನು ಕಂಡಿದೆ. ಆದರೆ ಬಿಜೆಪಿಯ ಆಪರೇಷನ್ ಕಮಲ ಮಾತ್ರ ಏಕಮೇವಾದ್ವಿತೀಯ! ಇದೊಂದು ಹೊಸ ಪ್ರವೃತ್ತಿ. ಹಿಂದೆ 1967ರಲ್ಲಿ ಹರ್‍ಯಾಣಾ ಆಯಾರಾಂ/ಗಯಾರಾಂ ಮಾಡೆಲ್ ಬಿಂಬಿಸಿದ ಕುಖ್ಯಾತಿಗೆ ಪಾತ್ರವಾಗಿತ್ತು. ಒಂದು ಪಕ್ಷದಿಂದ ಆರಿಸಿಹೋದ ಶಾಸಕ ಇನ್ನೊಂದಕ್ಕೆ ಪಕ್ಷಾಂತರ ಮಾಡಿ ಸರಕಾರ ರಚನೆಯಾಗುತ್ತದೆ. ನಂತರ ಇಂತವರು ಇನ್ನೊಂದು ಗುಂಪಿಗೆ ಪಕ್ಷಾಂತರ ಮಾಡುತ್ತಾರೆ. ಈ ಪ್ರಕ್ರಿಯೆಯಲ್ಲಿ ಆ ಆಯಾರಾಂ-ಗಯಾರಾಂಗಳು ಜನರ ಹಿತವನ್ನು ಬಲಿ ಹಾಕಿ ದುಡ್ಡು ಮಾಡಿಕೊಳ್ಳುತ್ತಾರೆ.

ಬಿಜೆಪಿ ಸ್ಥಾಪನೆಯಾದಾಗ ತಾನು ಭ್ರಷ್ಟಾಚಾರದ ಕಡು ವಿರೋಧಿ ಎಂದು ಬಹಳವಾಗಿ ಹೇಳಿಕೊಳ್ಳುತ್ತಿತ್ತು. ಆದರೆ ಈಗ ಸ್ವಚ್ಛ ವಾತಾವರಣದ ಮಾತೇ ಇಲ್ಲ. ಪಕ್ಷೇತರ ಶಾಸಕರನ್ನು ಖರೀದಿಸಲು, ನಂತರ ಚುನಾವಣಾ ಪ್ರಕ್ರಿಯೆಯಲ್ಲಿ ಪಕ್ಷಾಂತರ ಮಾಡಿದವರನ್ನು ಮತ್ತೆ ಆ ಸೀಟುಗಳಲ್ಲಿ ಗೆಲ್ಲಿಸಲು ನೂರಾರು ಕೋಟಿ ರೂಪಾಯಿಗಳನ್ನು ಸುರಿಯಲಾಗಿದೆ.

ಉಪಚುನಾವಣೆಗಳಲ್ಲಿ

ಆಪರೇಷನ್ ಕಮಲದಲ್ಲಿ ನಾಲ್ವರು ಜನತಾ ದಳ(ಎಸ್) ಶಾಸಕರು ಪಕ್ಷಾಂತರಿಗಳಾದರು. ಅವರಲ್ಲಿ ಇಬ್ಬರು, ಅರಭಾವಿಯ ಬಾಲಚಂದ್ರ ಜಾರಕಿಹೊಳಿ ಮತ್ತು ಹುಕ್ಕೇರಿಯ ಉಮೇಶ ಕತ್ತಿ ಬೆಳಗಾವಿ ಜಿಲ್ಲೆಯ ಪಾಳೆಯಗಾರೀ ಪ್ರದೇಶದವರು. ಇನ್ನೊಬ್ಬರು ದೇವದುರ್ಗದವರು. ಅವರಿಗೆ ಈ ಫಲಿತಾಂಶ ತಂದುಕೊಟ್ಟದ್ದು ಅವರ ವೈಯಕ್ತಿಕ ಶಕ್ತಿ, ಅವರು ಸದ್ಯಕ್ಕೆ ಮಂತ್ರಿಗಳಾಗಿರುವುದು ಮತ್ತು ಬಿಜೆಪಿ



ಹುಚ್ಚು ಹೊಳೆಯಾಗಿ ಹರಿದ ಅಕ್ರಮ ಹಣ, ಆಮಿಷಗಳು

ಯಾವ ನಾಚಿಕೆಯೂ ಇಲ್ಲದೆ ಹಣಬಲದ ಪ್ರಯೋಗ ಮಾಡಿದ್ದು, ಜತೆಗೆ ಅಧಿಕಾರಿಗಳ ದುರುಪಯೋಗ. ... ಮಂತ್ರಿಗಳು ಕೇವಲ ಆರು ತಿಂಗಳ

ಹಿಂದೆ ಬಿಜೆಪಿಯನ್ನು ಸೋಲಿಸಲು ನೆರವಾಗಿದ್ದರು. ಈಗ ಅದೇ ಬಿಜೆಪಿಯಲ್ಲಿ ತಮ್ಮ ಸೀಟುಗಳನ್ನು ಉಳಿಸಿಕೊಂಡಿದ್ದಾರೆ.

ನಾಲ್ಕನೇ ಜನತಾ ದಳ(ಎಸ್)ದ ಪಕ್ಷಾಂತರಿ ಶಾಸಕ ಮಧುಗಿರಿಯವರು. ಅಲ್ಲಿ ಹಣಬಲ ನಡೆಯಲಿಲ್ಲ. ಜನತಾ ದಳ(ಎಸ್) ಅನಿತಾ ಕುಮಾರಸ್ವಾಮಿಯುವರನ್ನು ಕಣಕ್ಕಿಳಿಸಿ ಈ ಸ್ಥಾನವನ್ನು ಉಳಿಸಿಕೊಂಡಿದೆ. ಇಲ್ಲಿ ಮತದಾರರು ಪಕ್ಷಾಂತರಿಯನ್ನು ಮೂರನೇ ಸ್ಥಾನಕ್ಕೆ ಇಳಿಸಿ ತಾವು ಸಾರ್ವಭೌಮರು ಎಂದು ತೋರಿಸಿ ಕೊಟ್ಟರು.



ಹಿರಿಯ ನಾಯಕ ಮಾದೇಗೌಡ ದವಡೆಗೆ ಮೂಲವಾದ 'ಸ್ವ'ಪಕ್ಷೀಯರ ಸಿಟ್ಟು

ಕಾರವಾರದಲ್ಲಿ ಪಕ್ಷಾಂತರಗೊಂಡ ಕಾಂಗ್ರೆಸ್ ಶಾಸಕ ತನ್ನ ಸ್ಥಾನವನ್ನು ಉಳಿಸಿಕೊಂಡರು, ಈ ಬಾರಿ ಬಿಜೆಪಿಗಾಗಿ. ಆತನನ್ನು ಇನ್ನೇನು ಅಲ್ಲಿನ ಚುನಾವಣಾಧಿಕಾರಿ ಅನರ್ಹಗೊಳಿಸಲಿದ್ದರು. ಅಷ್ಟರಲ್ಲಿ ಆ ನೇರನಡೆಯ ಅಧಿಕಾರಿಯ ವರ್ಗಾವಣೆ ಮಾಡಿ ಬಿಜೆಪಿ ಸರಕಾರ ಆತನನ್ನು ರಕ್ಷಿಸಿತು. ಮೃದು ಹಿಂದುತ್ವ ಪ್ರದರ್ಶಿಸುತ್ತಿದ್ದ ಕಾಂಗ್ರೆಸಿಗೆ ಅಲ್ಲಿ ಸಂಘ ಪರಿವಾರದ ಕಟ್ಟಾ ಹಿಂದುತ್ವವನ್ನು ಎದುರಿಸಲಾಗಲಿಲ್ಲ.

ತುರುವೇಕೆರೆಯಲ್ಲಿ ಶಾಸಕನಾದ ನಟ ಜಗ್ಗೇಶ ಸ್ಥಾನದಲ್ಲಿ ಬೇರೆಯವರನ್ನು ನಿಲ್ಲಿಸಿ ಗೆಲ್ಲಲು ಬಿಜೆಪಿ ಶತಪ್ರಯತ್ನ ಪಟ್ಟರೂ ಅದನ್ನು ಉಳಿಸಿಕೊಳ್ಳಲಾಗಲಿಲ್ಲ. ಕಾಂಗ್ರೆಸ್ ಮತ್ತು ಬಿಜೆಪಿ ಎರಡನ್ನೂ ಸೋಲಿಸಿ ಜನತಾದಳ(ಎಸ್) ಈ ಸೀಟು ಗೆದ್ದಿತು.

ಬಿಜೆಪಿ	5
ಜೆಡಿ(ಎಸ್)	3
ಕಾಂಗ್ರೆಸ್	0

ಮದ್ದೂರಿನಲ್ಲಿ ದಿವಂಗತ ಸಿದ್ದರಾಜುರವರ ಪತ್ನಿಯನ್ನು ಕಣಕ್ಕಿಳಿಸಿ ಜನತಾದಳ(ಎಸ್) ತನ್ನ ಸೀಟನ್ನು ಉಳಿಸಿಕೊಂಡಿತು. ಇಲ್ಲಿ ಬಿಜೆಪಿ ಇನ್ನೊಬ್ಬ ಪಕ್ಷಾಂತರಿಯನ್ನು ನಿಲ್ಲಿಸಿ, ಇನ್ನೂ ಹಲವು ಪಕ್ಷಾಂತರಗಳನ್ನು ಮಾಡಿಸಿ ಮಂಡ್ಯದೊಳಗೆ ಕಾಲೂರುವ ಬಗ್ಗೆ ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿತ್ತು. ಮಾಜಿ ಸಂಸದ ಮಾದೇಗೌಡರು ಮತ್ತು ಗಾಂಧಿ ಭವನದ ಮೇಲೆ ದಾಳಿಗಳಲ್ಲಿ ಅವರ ಸಿಟ್ಟು ಪ್ರದರ್ಶನಗೊಂಡಿತು.

ರಾಜಕೀಯ ಎಂದರೆ....

ಸಂಸದೀಯ ವ್ಯವಸ್ಥೆಯಲ್ಲಿ ಬಿಜೆಪಿ ಸೃಷ್ಟಿಸಿರುವ ...

ಪರಿಶೀಲಿಸಬೇಕು. ಯಾವುದೇ ಪಕ್ಷ, ಅಲ್ಪಮತದಲ್ಲಿದ್ದರೂ, ಇಂತಹ ಕಾರ್ಯಾಚರಣೆ ನಡೆಸಿ ಪ್ರತಿಪಕ್ಷಗಳ ಶಾಸಕರನ್ನು ಖರೀದಿಸಬಹುದು, ಅವರಿಗೆ ಅಧಿಕಾರಸ್ಥಾನ ಕೊಡುವುದಾಗಿ ಹೇಳಿ, ಆ ಅಧಿಕಾರದ ಬಲದಿಂದಲೇ ಅವರನ್ನು ಆಳುವ ಪಕ್ಷದ ಟಿಕೇಟಿನಲ್ಲಿ ಮತ್ತೆ ಗೆಲ್ಲಿಸಬಹುದು.

ಹಲವು ಹಂತಗಳಲ್ಲಿ ಮತದಾನ ನಡೆಯುವಾಗ, ಹಿಂದಿನ ಹಂತಗಳ ಮತದಾನದ ಫಲಿತಾಂಶ ನಂತರದ ಹಂತಗಳಲ್ಲಿ ಮತದಾರರ ಮೇಲೆ ಪ್ರಭಾವ ಬೀರುವಂತಾಗಬಾರದು ಎಂಬ ವಿಚಾರ ಈಗಿನ ಚುನಾವಣಾ ವ್ಯವಸ್ಥೆಯಲ್ಲಿ ಇದೆ. ಆದ್ದರಿಂದ ಹಲವು ರಾಜ್ಯಗಳಲ್ಲಿ ಒಟ್ಟಿಗೆ ಚುನಾವಣೆಗಳು ನಡೆಯುವಾಗ ಮತಗಣನೆಯನ್ನು ವಿಳಂಬಗೊಳಿಸಲಾಗುತ್ತದೆ. ಆಪರೇಷನ್ ಕಮಲ ಎಂಬ ಈ ಹೊಸ ಮಾಡೆಲ್ ಇದನ್ನು ಬುಡಮೇಲು ಮಾಡುತ್ತದೆ. ಚುನಾವಣಾ ಪ್ರಕ್ರಿಯೆ ಮುಗಿದ ಮೇಲೆ, ಅಲ್ಪ ಮತದ ಸರಕಾರ ಪಕ್ಷೇತರರನ್ನು 'ಖರೀದಿಸಿ' ವಿಶ್ವಾಸ ಮತ ಗೆಲ್ಲುತ್ತದೆ, ನಂತರ ಬಹಿರಂಗವಾಗಿಯೇ ಪ್ರತಿಪಕ್ಷಗಳ ಶಾಸಕರನ್ನು ಆಹ್ವಾನಿಸುತ್ತದೆ. ನಂತರ ಮತದಾರರಿಗೆ ಆಗಲೇ ಅಧಿಕಾರದಲ್ಲಿರುವವರಿಗೆ ಮತ ನೀಡುವ ಅವಕಾಶ ಸಿಗುತ್ತದೆ, ಈ ಪ್ರಕ್ರಿಯೆಯಲ್ಲಿ ಸ್ವಲ್ಪ ಬಿಸಿ ನಗದೂ ಕೈಸೇರುತ್ತದೆ.

ಭಾರತದಲ್ಲಿ, ಎಡಪಕ್ಷಗಳು ಅಳ್ವಿಕೆಯಲ್ಲಿರುವ ರಾಜ್ಯಗಳನ್ನು ಬಿಟ್ಟು ಬೇರೆಲ್ಲಾ ಕಡೆ ರಾಜಕೀಯ ಎಂದರೆ ಕೇವಲ ಮತ ಚಲಾವಣೆ ಎಂದಾಗಿದೆ. ಅದೊಂದು ದೊಡ್ಡ ಉದ್ಯಮವಾಗಿ ಬೆಳೆದಿದೆ, ರಾಜಕೀಯದಲ್ಲಿ ಹೇಗಾದರೂ ಹಣ ಮಾಡಿಕೊಳ್ಳಬೇಕು ಎನ್ನುವವರಿಗೆ ಈ ಉದ್ದಿಮೆಯಲ್ಲಿ ಆರು ತಿಂಗಳಿಗೊಮ್ಮೆ ಉದ್ಯೋಗ ಸಿಗುತ್ತದೆ. ನಾವೀಗ ಎರಡು ಚುನಾವಣೆಗಳನ್ನು ನೋಡಿದ್ದೇವೆ- ಒಂದು ಮೇ ತಿಂಗಳಲ್ಲಿ, ಇನ್ನೊಂದು ಡಿಸೆಂಬರ್‌ನಲ್ಲಿ. ಮತ್ತೆ ಎಪ್ರಿಲ್/ಮೇ ತಿಂಗಳಲ್ಲಿ ಲೋಕಸಭಾ ಚುನಾವಣೆಗಳು ನಡೆಯಬೇಕಾಗಿದೆ. ವಾಸ್ತವವಾಗಿ ನಾವು ಆಗಷ್ಟೇ ಮತದಾನಕ್ಕೆ ಹೋಗಬೇಕಾಗಿತ್ತು.

ಜನಗಳ ಹೋರಾಟಗಳಿಂದಷ್ಟೇ ಭಿನ್ನವಾದ ಫಲಿತಾಂಶ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಈ ಸನ್ನಿವೇಶದ ಪರಾಮರ್ಶೆ ನಡೆಸಿ ಜನಗಳ ದೃಢ ಹೋರಾಟಗಳು ಮಾತ್ರವೇ ಪರಿಸ್ಥಿತಿಯನ್ನು ಬದಲಿಸಲು ಸಾಧ್ಯ ಎಂಬ ತೀರ್ಮಾನಕ್ಕೆ ಬಂದಿದೆ. ಆದ್ದರಿಂದ ಅದು ರಾಜ್ಯದಲ್ಲಿ ಪಟ್ಟಿಯಾಗಿರುವ ಎಲ್ಲಾ ಉದ್ಯೋಗಗಳಲ್ಲಿ ಅಸಂಘಟಿತ ವಲಯದ ಕಾರ್ಮಿಕರಿಗೆ ಒಂದು ಸಮಾನ ಕನಿಷ್ಟ ಕೂಲಿಗಾಗಿ, ಗುತ್ತಿಗೆ ಶ್ರಮದ ಕಟ್ಟುನಿಟ್ಟಾದ ನಿಯಂತ್ರಣ ಮತ್ತು ಸಾಮಾಜಿಕ ಭದ್ರತೆಗಾಗಿ ಸಹಿ ಸಂಗ್ರಹ ನಡೆಸಬೇಕು ಹಾಗೂ ಫೆಬ್ರುವರಿ 5ರಂದು ವಿಧಾನ ಸೌಧ ಚಲೋ ಸಂಘಟಿಸಬೇಕು ಎಂಬ ಕಾರ್ಮಿಕ ಸಂಘಗಳ ಯೋಜನೆಯನ್ನು ಬೆಂಬಲಿಸಿದೆ. ಜತೆಗೇ ವಾಸಕ್ಕೆ ನಿವೇಶನಗಳು ಹಾಗೂ ರೇಶನ್ ಕಾರ್ಡುಗಳಿಗಾಗಿ ಹೋರಾಟಗಳನ್ನು ನಡೆಸಲಾಗುವುದು. ಫೆಬ್ರುವರಿ 5, 2009 ರಂದು ನಡೆಯುವ ಸಾಮೂಹಿಕ ರ‍್ಯಾಲಿ ಒಂದು ಮುಂದಿನ ಕಾರ್ಯಾಚರಣೆಯ ಕಾರ್ಯಕ್ರಮವನ್ನು ಒಂದು ಜನತಾ ಬೇಡಿಕೆ ಪತ್ರದ ಆಧಾರದಲ್ಲಿ ಅಂಗೀಕರಿಸುವ ಯೋಜನೆ ರೂಪಿಸಿದೆ.

ಅದೇ ರೀತಿ ಈಗಷ್ಟೇ ಸೌಹಾರ್ದ ಕರ್ನಾಟಕ ಕಾರ್ಯಕ್ರಮದ ಮೊದಲ ಘಟ್ಟ ಡಿಸೆಂಬರ್ 23 ರಂದು ಕೊನೆಗೊಂಡಿದೆ. ಕಾಂ. ಪ್ರಕಾಶ ಕಾರಟ್ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದರು. ಇದನ್ನು ಇನ್ನಷ್ಟು ಬೆಳೆಸಬೇಕು, ಅಲ್ಪಸಂಖ್ಯಾತರು, ದಲಿತ ವರ್ಗಗಳು ಮುಂತಾದವರ ಸಾಮಾಜಿಕ ಪರಿಸ್ಥಿತಿಗಳ ಮೇಲೆ ಜನತಾ ಸಮಾವೇಶಗಳು ನಡೆಯಲಿವೆ.

ಜನತೆ ಕೋಮುವಾದ ಮತ್ತು ಭಯೋತ್ಪಾದನೆಗೆ ವಿರುದ್ಧವಾಗಿದ್ದಾರೆ, ಸರಿಯಾದ ದಾರಿಯಲ್ಲಿ, ಸರಿಯಾದ ಅವಕಾಶ ದೊರೆತರೆ ಅವರು ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಸಹಕರಿಸಲು ಸಿದ್ಧರಾಗಿದ್ದಾರೆ ಎಂಬುದು ಸೌಹಾರ್ದ ಕರ್ನಾಟಕ ಕಾರ್ಯಕ್ರಮಗಳ ಯಶಸ್ಸು ತೋರಿಸಿಕೊಟ್ಟಿದೆ.



ಮತಪಟ್ಟಿಯಲ್ಲಿ ಲೋಪಗಳ ವಿರುದ್ಧ ಜನರ ಸಿಡಿದ ಆಕ್ರೋಶ ತುರುವೇಕೆರೆಯಲ್ಲಿ

ಈಗಿನ ಗೆಲುವಿನಿಂದ ಬಿಜೆಪಿ ಇನ್ನಷ್ಟು ಕೋಮುವಾದಿಯಾಗುವುದು, ತಮ್ಮ ಬಚ್ಚಿಟ್ಟ ಅಜೆಂಡಾವನ್ನು ಬಹಿರಂಗವಾಗಿ ತರುವುದು ಖಂಡಿತ. ಅವರ ಆರ್ಥಿಕ ನೀತಿಗಳನ್ನು, ಕೋಮುವಾದಿ ನೀತಿಗಳನ್ನು ವಿರೋಧಿಸುವ ಜತೆಗೇ ಎಲ್ಲಾ ವಿಧಗಳ ಧಾರ್ಮಿಕ ಮೂಲಭೂತವಾದವನ್ನು ವಿರೋಧಿಸುವ ಮೂಲಕ ಮಾತ್ರವೇ ಬಿಜೆಪಿಯನ್ನು ಎದುರಿಸಲು, ಭಿನ್ನ ಫಲಿತಾಂಶಗಳನ್ನು ಪಡೆಯಲು ಸಾಧ್ಯ.



ಕರಾವಳಿ : ಪ್ರಶ್ನೆ ಮಾಡಿದಿರೋ ಜೋಕೆ

ಮಂಗಳೂರಿನಲ್ಲಿ ಕರಾವಳಿ ಅಲೆಯ ಮೇಲಿನ ಸಂಘ ಪರಿವಾರದ ದಾಳಿಗಳು ದಿನಕಳೆದಂತೆ ತೀಕ್ಷ್ಣಗೊಳ್ಳುವುದರ ಜೊತೆಗೆ ಹೊಸ ಸ್ವರೂಪಗಳನ್ನು ಪಡೆಯತೊಡಗಿದೆ. ಭಜರಂಗಿಂಗಳ ವೇದಿಕೆಗಳಲ್ಲಿ ಹರಕೆಯ ಕುರಿ ಎಂಬಂತೆ ಮಿಂಚುತ್ತಿದ್ದ ಪೂರ್ವಶ್ರಮದಲ್ಲಿ ಯಾವುದೇ ಧಾರ್ಮಿಕತೆಯ ಹಿನ್ನಲೆ ಇಲ್ಲದಿದ್ದ ಶೂದ್ರಸ್ವಾಮಿ ಶೇಖರಾನಂದರ ಬಗ್ಗೆ ಬರೆದ ವರದಿಯನ್ನೇ ಬಳಸಿಕೊಂಡ ಸಂಘಪರಿವಾರ ಬಿ.ವಿ.ಸೀತಾರಾಂರ ಕರಾವಳಿ ಅಲೆಯನ್ನು ಹಿಂದೂ ವಿರೋಧಿ ಎಂದು ಬಿಂಬಿಸಿ ಪತ್ರಿಕೆಯ ಮೇಲೆ ಮತ್ತೊಂದು ಸುತ್ತಿನ ದಾಳಿಯನ್ನು ಆರಂಭಿಸಿತ್ತು. ಮುಂಬರುವ ಲೋಕಸಭಾ ಚುನಾವಣೆಯ ಪೂರ್ವಭಾವಿಯಾಗಿ ಕರಾವಳಿ ಅಲೆಯಲ್ಲಿ ಪ್ರಕಟವಾಗುವ ವರದಿ, ಬರಹಗಳು ಆಡಳಿತದಲ್ಲಿನ ವೈಫಲ್ಯಗಳ ಸುದ್ದಿಗಳು ಚುನಾವಣೆಯಲ್ಲಿ ಮೊದಲೇ ಸೋಲಿನ ಭೀತಿಯಲ್ಲಿರುವ ತಮಗೆ ತೊಡರುಗಾಲು ಆಗಬಹುದು ಎಂಬ ಭಯದಲ್ಲಿ ಕರಾವಳಿ ಅಲೆಯನ್ನು ಪಳಗಿಸುವ, ಸಾಧ್ಯವಾದರೆ ಸಂಪೂರ್ಣ ನಿಲ್ಲಿಸಿ ಬಿಡುವ ತೀರ್ಮಾನದೊಂದಿಗೆ ಸಂಘ ಪರಿವಾರ ಈ ಬಾರಿ ರಂಗಕ್ಕಿಳಿದಿದ್ದು.

ಮಟ್ಟ ಹಾಕುವ ಚರಿತ್ರೆ

ಹಿಂದಿನಿಂದಲೂ ತನ್ನ ಕರ್ಮ ಭೂಮಿ ಎಂದು ಸಂಘ ಪರಿವಾರ ನಂಬಿಕೊಂಡಿರುವ ಕರಾವಳಿ ಜಿಲ್ಲೆಗಳಲ್ಲಿ ತಮ್ಮ ಅಸ್ತಿತ್ವವನ್ನು ಪ್ರಶ್ನಿಸುವ, ಮುಚ್ಚಿಟ್ಟ ಅಜೆಂಡಾಗಳನ್ನು ಬಯಲುಗೆಳೆಯುವ, ನಮಗೆ ರಾಜಕೀಯ ಸವಾಲೊಡ್ಡುವವರನ್ನು ವ್ಯವಸ್ಥಿತವಾಗಿ ಮಟ್ಟ ಹಾಕಿ ಬಾಯಿ ಮುಚ್ಚಿಸಿರುವ ಚರಿತ್ರೆ ಇಲ್ಲಿನ ಆರ್‌ಎಸ್‌ಎಸ್ ನಾಯಕತ್ವದ್ದು, ಕಾಂಗ್ರೆಸ್ ದಬ್ಬಾಳಿಕೆಯ ಸುವರ್ಣಯುಗವಾಗಿದ್ದ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿಯೇ ಕಾಂಗ್ರೆಸ್ ಮುಖಂಡ ಕಲ್ಲಡ್ಕ ಇಸ್ಮಾಯಿಲ್‌ರನ್ನು ವ್ಯವಸ್ಥಿತವಾಗಿ ಕೊಲೆಗೈದದ್ದು, ಅವರ ಪತ್ನಿಯ ಅಸಹಾಯಕತೆಯನ್ನು ದುರುಪಯೋಗಪಡಿಸಿ ಕೊಂಡದ್ದು, ತಮ್ಮನ್ನು ಪ್ರಶ್ನಿಸಿದ ಶೇಖರ ಭಂಡಾರಿ ಎಂಬ ಬಡವನನ್ನು ಹಾಡು ಹಗಲೇ ಮುಗಿಸಿ ಹಾಕಿ ನಿರಪರಾಧಿಗಳನ್ನು ಜೈಲಿಗೆ. ಕಳುಹಿಸಿದ್ದು, ತಾ:ಪಂಚಾಯತ್ ಅಧ್ಯಕ್ಷನಾಗಿದ್ದ, ಕಾಂಗ್ರೆಸ್ ಮುಖಂಡ ಮಲ್ಲೂರು ಜಲ್ಬಾರ್‌ನನ್ನು ಅವರ ಕಛೇರಿಯಲ್ಲಿಯೇ ಹೆಂಡತಿ, ಮಕ್ಕಳ ಎದುರೇ ಬರ್ಬರವಾಗಿ ಹತ್ಯೆಗೈದದ್ದು ಉದಾಹರಣೆಗಳಷ್ಟೇ. ಅಂತಹ ಚರಿತ್ರೆ ಹೊಂದಿರುವ ಇಲ್ಲಿನ ರಾಷ್ಟ್ರೀಯ ಸ್ವಯಂ ಸೇವಕ ಸಂಘ ತನ್ನದೇ ಪಕ್ಷ ಬಿಜೆಪಿ ಅಧಿಕಾರಕ್ಕೇರಿದ ನಂತರವಂತೂ ತನ್ನನ್ನು ಪ್ರಶ್ನಿಸಿದವರಿಗೆ ಮಂಗಳೂರಿನಲ್ಲಿ ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲ ಎಂಬ ಸಂದೇಶವನ್ನು ಕರಾವಳಿ ಅಲೆ ಮೇಲಿನ ದಾಳಿಗಳ ಮುಖಾಂತರ ಇಲ್ಲಿನ ಜನತೆಗೆ ಅದರಲ್ಲೂ ಜನಪರ ಸಂಘಟನೆಗಳಿಗೆ, ತನ್ನನ್ನು ಪ್ರಶ್ನಿಸುವ, ಸೈದ್ಧಾಂತಿಕವಾಗಿ ಸಮರ ನಡೆಸುವವರಿಗೆ ನೀಡಿದೆ.

ಕಪಟ ಬಂಧನ

ತನ್ನ ಈ ಕಾರ್ಯ ಸೂಚಿಯ ಜಾರಿಗೆ ಇಲ್ಲಿನ ಜಿಲ್ಲಾಡಳಿತ ಪೋಲೀಸ್ ಇಲಾಖೆಗಳನ್ನು ಬಿಜೆಪಿ ಬಳಸಿಕೊಂಡಿರುವ ರೀತಿಯಂತೂ ಎಂತಹ ಸರ್ವಾಧಿಕಾರಿಗಳೂ ನಾಚುವಂತಹದ್ದು. ಇದಕ್ಕೆ ಕೆಲವು ಉದಾಹರಣೆಗಳೂ ಇಲ್ಲಿದೆ.

ಕರಾವಳಿ ಅಲೆಯ ಬಂಡಲ್‌ಗಳನ್ನು ಅಪಹರಿಸುವ, ಪತ್ರಿಕೆ ಮಾರಾಟ ಮಾಡುವ ಅಂಗಡಿ ಗಳನ್ನು ಧ್ವಂಸಗೊಳಿಸುವ ಕೃತ್ಯಗಳನ್ನು ಸಂಘಪರಿವಾರದ ಕಾರ್ಯಕರ್ತರು ಆರಂಭದಲ್ಲಿ ಶೇಖರಾನಂದಸ್ವಾಮಿಯ ಭಕ್ತರ ಸೋಗಿನಲ್ಲಿ ನಡೆಸಿದ್ದರು. ಈ ಬಗ್ಗೆ ಬಿ.ವಿ.ಸೀತಾರಾಮರು ಪೋಲೀಸ್ ಠಾಣೆಗಳಲ್ಲಿ ದೂರುಗಳನ್ನು ನೀಡಿದ್ದರು. ಆದರೆ ತಕ್ಷಣ ಯಾವುದೇ ಕ್ರಮ ಕೈಗೊಳ್ಳದ ಪೋಲೀಸ್ ಇಲಾಖೆ ಸಾಮಾಜಿಕ ಸಂಘಟನೆಗಳು ಧ್ವನಿಯೆತ್ತಿದ ನಂತರ ಕಾಟಾಚಾರಕ್ಕೆ ಎಂಬಂತೆ ಬಿಜೆಪಿ ದಿನಗೂಲಿ ಆಧಾರದಲ್ಲಿ ಹಾಜರುಪಡಿಸಿದ ನಿರುದ್ಯೋಗಿಗಳನ್ನು ಬಂಧಿಸುವ ನಾಟಕವಾಡಿತು. ನಂತರ ಜಿಲ್ಲೆಯ ವಿವಿಧ ಸಂಘಟನೆಗಳು ಡಿವೈಎಫ್‌ಐ ನೇತೃತ್ವದಲ್ಲಿ ಸಾರ್ವಜನಿಕವಾಗಿ ಕರಾವಳಿ ಅಲೆ ಮಾರಾಟ ಜಾಥಾವನ್ನು ಹಮ್ಮಿಕೊಂಡಿದ್ದವು. ಈ ಕಾರ್ಯಕ್ರಮಕ್ಕೆ ದೊರೆತ ವ್ಯಾಪಕ ಜನ ಬೆಂಬಲದಿಂದ ಮತ್ತಷ್ಟು ಕ್ರುದ್ಧರಾದ ಬಿಜೆಪಿಗರು ಎಲ್ಲಾ ಪತ್ರಿಕೆ ಮಾರಾಟ ಸ್ಟಾಲ್ ಗಳಿಗೆ ಕರಾವಳಿ ಅಲೆ ಮಾರಾಟ ಮಾಡದಂತೆ ವಿನಂತಿಸಿಕೊಳ್ಳುವ ಕರಪತ್ರ ಹಂಚಿಕೆಯ ಹೆಸರಿನಲ್ಲಿ ಬೆದರಿಕೆ ಹಾಕತೊಡಗಿದರು. ಬಿ.ವಿ.ಸೀತಾರಾಮ ದಂಪತಿಗಳ ಮೇಲೆ ಪತ್ರಿಕೆಯ ವರದಿಗಾರರ ಮೇಲೆ ಧರ್ಮ ನಿಂದೆಯ ಕೇಸುಗಳನ್ನು ಮಂಗಳೂರಿನ ವಿವಿಧ ಠಾಣೆಗಳಲ್ಲಿ ದಾಖಲಿಸಿತೊಡಗಿದರು. ಈ ಬೆದರಿಕೆಗಳ ಮಧ್ಯೆಯೂ ಪತ್ರಿಕೆ ಮಾರಾಟ ಮಾಡುತ್ತಿದ್ದ ಪತ್ರಿಕಾ ಸ್ಟಾಲ್‌ಗಳಿಗೆ ರಕ್ಷಣೆಗಾಗಿ ನೇಮಿಸಲ್ಪಟ್ಟಿದ್ದ ಪೋಲೀಸ್ ಸಿಬ್ಬಂದಿಗಳೇ ಪತ್ರಿಕೆ ಮಾರಾಟ ಮಾಡದಿರುವಂತೆ 'ನಯವಾಗಿ' ಬೆದರಿಸತೊಡಗಿದರು. ಈ ರೀತಿಯಲ್ಲಿ ಪೋಲಿಸ್ ಮತ್ತು ಸಂಘ ಪರಿವಾರದ ಜಂಟಿ ಕಾರ್ಯಾಚರಣೆಯಿಂದ ಕರಾವಳಿ ಅಲೆಯ ಮಾರಾಟ ಮಂಗಳೂರು ನಗರದಲ್ಲಿ ಹೆಚ್ಚು ಕಡಿಮೆ ನಿಲುಗಡೆ ಹೊಂದಿದೆ. ಇನ್ನು ಸ್ವಲ್ಪ ಹುಂಬು ಧೈರ್ಯದ ಅದರಲ್ಲೂ ಕರಾವಳಿ ಅಲೆ ಮಾರಾಟದಿಂದ ದೊರಕುವ ಕಮೀಷನ್ ಅನ್ನೇ ನೆಚ್ಚಿಕೊಂಡಿರುವ ಕೆಲವು ಮಾರಾಟಗಾರರು ಇಲ್ಲಿನ ಮುಸಲ್ಮಾನರು ಕಾನೂನು ಸಮ್ಮತವಾಗಿದ್ದರೂ ಭಜರಂಗಿಗಳಿಗೆ ಹೆದರಿ ಕದ್ದು ಮುಚ್ಚಿ, ದನದ ಮಾಂಸ ಮಾರಾಟ ಮಾಡುವ ರೀತಿಯಲ್ಲಿ ಕರಾವಳಿ ಅಲೆಯನ್ನು ಅಡಗಿಸಿಟ್ಟು ಗುರುತು ಪರಿಚಯ ಇರುವವರಿಗೆ ಮಾತ್ರ ಮಾರಾಟ ಮಾಡುವ ದಯನೀಯ ಸ್ಥಿತಿ ಇಲ್ಲಿದೆ.

ಇದಕ್ಕೂ ಮುಂಚೆ ಕರಾವಳಿ ಅಲೆಯ ಕಛೇರಿಯ ಮೇಲೆ ಕಾವಲಿಗಿದ್ದ ಪೋಲೀಸರ ಎದುರೇ ದಾಂಧಲೆ ನಡೆದಿತ್ತು. ಈ ದಾಂಧಲೆಯ ಆರೋಪಿಗಳ ಬಗ್ಗೆ ಸ್ಪಷ್ಟ ಅರಿವು ಪೋಲೀಸರಿಗೆ ಇದ್ದರೂ ಈವರೆಗೂ ಒಬ್ಬರನ್ನೂ ಬಂಧಿಸಲಾಗಿಲ್ಲ.

ಡೇಸಾರ ಮನೆ ಮೇಲೆ...

ಕರಾವಳಿ ಅಲೆಯ ಮೇಲಿನ ನಿರ್ಬಂಧದ ವಿರುದ್ಧ ಧ್ವನಿ ಎತ್ತಿದ ಡಿವೈಎಫ್‌ಐ ಆಯೋಜಿಸಿದ್ದ ಸಾರ್ವಜನಿಕ ಕರಾವಳಿ ಅಲೆ ಮಾರಾಟ ಜಾಥಾದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ, ಹಲವು ಸಂದರ್ಭಗಳಲ್ಲಿ ಸಂಘ ಪರಿವಾರದಿಂದ ಹಲ್ಲೆಗೀಡಾದವರ ಪರವಾಗಿ ಧನಿ ಎತ್ತುತ್ತಾ ಬಂದಿರುವ ಮಾನವ ಹಕ್ಕು ಹೋರಾಟಗಾರ, ಪಿಯುಸಿಎಲ್ ರಾಜ್ಯ ಮುಖಂಡರಾದ



ಮಾನವ ಹಕ್ಕುಗಳ ಕಾರ್ಯಕರ್ತ ಪಿ.ಬಿ.ಡೇಸಾರ ಮನೆ ಮೇಲೆ ದಾಳಿ

ಪಿ.ಬಿ.ಡೇಸಾರ ಮನೆಯ ಮೇಲಿನ ದಾಳಿಯ ಪ್ರಕರಣವಂತೂ ಇವೆಲ್ಲಕ್ಕೂ ಕಳಶವಿಟ್ಟಂತಿದೆ. ಕರಾವಳಿ ಅಲೆಯ ಮೇಲಿನ ದಾಳಿಯ ನಿರ್ಬಂಧ, ಬಿ.ವಿ.ಸೀತಾರಾಂ, ದಂಪತಿಗಳ ಮೇಲೆ ವಿವಿಧ ಕಾಯ್ದೆಗಳಡಿಯಲ್ಲಿ ಕೇಸು ದಾಖಲಿಸುತ್ತಿರುವುದನ್ನು ವಿರೋಧಿಸುವ, ಪ್ರಶ್ನಿಸುವ ಪ್ರತಿಯೊಬ್ಬರನ್ನೂ ಬೆದರಿಸುವ ಕೆಲಸವನ್ನು ಸಂಘ ಪರಿವಾರ ಇಲ್ಲಿ ನಡೆಯುತ್ತಿದೆ.

ಕೊಲ್ಲುವ ಬೆದರಿಕೆ

ಕರಾವಳಿ ಅಲೆಯ ವಿರೋಧಿ ಬಣದಲ್ಲಿರುವ ಪತ್ರಿಕೆಗಳಲ್ಲಿ ಅಂತಹವರ ತೇಜೋವಧೆಗೈಯುವ ವರದಿಗಳನ್ನು ಪ್ರಕಟಿಸುವುದು. ಆಮಿಷಗಳನ್ನು ಒಡ್ಡುವುದು, ದೈಹಿಕ ಹಲ್ಲೆಗಳನ್ನು ನಡೆಸುವುದು ನಡೆಯುತ್ತಿದೆ. ಇದರ ಭಾಗವಾಗಿಯೇ ಪಿ.ಬಿ. ಡೇಸಾರ ಮನೆಯ ಮೇಲೆ ಹಾಡುಹಗಲೇ ಗೂಂಡಾಗಳನ್ನು ಬಳಸಿ ದಾಳಿ ನಡೆಸಲಾಗಿದೆ. ಮನೆಯ ಕಿಟಕಿ, ಗಾಜು, ಪೀಠೋಪಕರಣಗಳನ್ನು ಧ್ವಂಸ ಮಾಡಿದ್ದಲ್ಲದೇ ಡೇಸಾರ ಪತ್ನಿಯವರನ್ನು ಗಾಯಗೊಳಿಸಿ ಕರಾವಳಿ ಅಲೆಯನ್ನು ಬೆಂಬಲಿಸಿದರೆ ಡೇಸಾರವನ್ನು ಕೊಂದು ಹಾಕುವುದಾಗಿ ಬೆದರಿಸಲಾಗಿದೆ. ಎಂದಿನಂತೆ ಘಟನೆಯ ನಂತರ ಹಿರಿಯ ಪೋಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಕಠಿಣ ಕ್ರಮದ ಭರವಸೆ ನೀಡಿ ದಿನಗೂಲಿ ಆಧಾರದ ನಿರುದ್ಯೋಗಿಗಳನ್ನು ಎಂದಿನಂತೆ ಗುಪ್ತವಾಗಿ ಬಂಧಿಸಿದ್ದಾರೆ. ಬಂಧಿತರು ಹೆಸರೂ ಈವರೆಗೆ ಪತ್ರಿಕೆಗಳಲ್ಲಿ ಪ್ರಕಟವಾಗಿಲ್ಲ.

ಇದು ಮಂಗಳೂರಿನಲ್ಲಿ ಬಿಜೆಪಿಯ ಆಡಳಿತ ಶೈಲಿ. ಈ ಎಲ್ಲಾ ದಬ್ಬಾಳಿಕೆಗಳನ್ನು ಧಿಕ್ಕರಿಸಿ ಜನ ಚಳುವಳಿ ಜನತೆಯ ಮಧ್ಯೆದಿಂದಲೇ ಎದ್ದು ಬರುತ್ತದೆ ಎಂಬ ಇತಿಹಾಸದ ಪಾಠವನ್ನು ಸಂಘ ಪರಿವಾರ ಅರ್ಥಮಾಡಿಕೊಳ್ಳದಿದ್ದರೆ ಜನತೆ ಇವರನ್ನು ಆದಷ್ಟು ಬೇಗ ಅರಬ್ಬೀ ಸಮುದ್ರಕ್ಕೆ ಎತ್ತಿ ಎಸೆಯುವುದಂತು ಗ್ಯಾರಂಟಿ.

■ ಸಂಜಯ

ಕುಂದಾಪುರದಲ್ಲಿ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್‌ರವರಿಂದ 28.12.2008 ರಂದು ಉದ್ಘಾಟನೆಗೊಂಡ 'ಹಂಚು ಕಾರ್ಮಿಕರ ಭವನ'ದ ಚಿತ್ರ. ಸಿಐಟಿಯು ಅಧ್ಯಕ್ಷರಾದ ಬಿ.ಮಾಧವರಿಂದ ಉದ್ಘಾಟನೆಗೊಂಡ ಕಾಂ. ಪಿ.ರಾಮಚಂದ್ರರಾವ್ ಸಭಾ ಭವನವೂ ಕಟ್ಟಡದ ಒಳಗಿದೆ.



ಜಮ್ಮು - ಕಾಶ್ಮೀರದ ಚುನಾವಣೆ

ಜನೋತ್ಸಾಹವೇ ಪ್ರಮುಖ ಫಲಿತಾಂಶ

ಏಳು ಹಂತಗಳಲ್ಲಿ ನಡೆದ ಇತ್ತೀಚಿನ ಜಮ್ಮು ಕಾಶ್ಮೀರದ ಚುನಾವಣೆರಾಷ್ಟ್ರೀಯ ಮಟ್ಟದಲ್ಲೂ, ಅಂತರರಾಷ್ಟ್ರೀಯ ಮಟ್ಟದಲ್ಲೂ ಗಮನ ಸೆಳೆಯಿತು.

ಪ್ರತ್ಯೇಕತಾವಾದಿಗಳು ಚುನಾವಣೆಗಳನ್ನು ಬಹಿಷ್ಕರಿಸಲು ಕರೆ ನೀಡಿದ್ದರು. ಅಮರನಾಥ್ ದೇವಾಲಯಕ್ಕೆ ಭೂಮಿ ಹಂಚಿಕೆಗೆ ಸಂಬಂಧಿಸಿದ ವಿವಾದವು ರಾಜ್ಯದಲ್ಲಿ ತೀವ್ರವಾಗಿ ಭುಗಿಲೆದಿದ್ದು ಹಿಂದೂ, ಮುಸ್ಲಿಂ ಎರಡೂ ಕಡೆಯ ಕೋಮುವಾದಿಗಳ ಆಟಗಳಿಂದ ರಾಜ್ಯದಲ್ಲಿ ತೀವ್ರ ಉದ್ವಿಗ್ನತೆ, ಉದ್ರಿಕ್ತತೆಯ ವಾತಾವರಣ ಧಾರ್ಮಿಕ ನೆಲೆಯ ಧೃವೀಕರಣದ ಲಕ್ಷಣಗಳು ಕಂಡು ಬಂದವು. ಈ ಹಿನ್ನೆಲೆಯಲ್ಲಿ ಚುನಾವಣಾ ಪ್ರಕ್ರಿಯೆಯಲ್ಲಿ ಜನ ಪಾಲ್ಗೊಳ್ಳುವರೋ, ಇಲ್ಲವೋ ಎಂಬ ಅನುಮಾನ, ಆತಂಕ ವ್ಯಕ್ತವಾಗಿತ್ತು.

ಬಹಿಷ್ಕಾರಕ್ಕೆ ತಿರಸ್ಕಾರ

ಜನತೆ ಉಗ್ರವಾದಿಗಳ ಚುನಾವಣಾ ಬಹಿಷ್ಕಾರದ ಕರೆಯನ್ನು ಧಿಕ್ಕರಿಸಿದರು. ಕೊರೆಯುವ ಚಳಿಯನ್ನು ಲೆಕ್ಕಿಸದೇ ಮತದಾನದ ದಿನ ಸಾಲುಗಟ್ಟಿ ನಿಂತರು. ಶೇ.60 ಕ್ಕಿಂತ ಹೆಚ್ಚು ಮತದಾನ ದಾಖಲಾಯಿತು. ಜಮ್ಮು ಕಾಶ್ಮೀರದಂತೆ ಭಯೋತ್ಪಾದನೆಯ ಸಮಸ್ಯೆ ಇಲ್ಲದ ರಾಜ್ಯಗಳಲ್ಲೂ, ಬಹಿಷ್ಕಾರಕ್ಕೆ ಕರೆ ಇಲ್ಲದಿದ್ದಾಗಲೂ ಹಲವು ರಾಜ್ಯಗಳಲ್ಲಿ ಇದಕ್ಕಿಂತ ಕಡಿಮೆ ಮತದಾನ ನಡೆದದ್ದಿದೆ.

ಯಾರಿಗೂ ಬಹುಮವಿಲ್ಲ

ಫಲಿತಾಂಶವು ಬಹಳಷ್ಟು ಜನ ನಿರೀಕ್ಷಿಸಿದಂತೆಯೇ ಆಗಿದೆ. ಯಾವ ಪಕ್ಷಕ್ಕೂ ಬಹುಮತವಿಲ್ಲ. ಕಳೆದ ಅವಧಿಯಲ್ಲಿ ಪ್ರಮುಖ ವಿರೋಧಪಕ್ಷವಾಗಿದ್ದ ಮತ್ತು ಜಮ್ಮು ಕಾಶ್ಮೀರವನ್ನು 22 ವರ್ಷ ಆಳಿರುವ ನ್ಯಾಷನಲ್ ಕಾನ್‌ಫರೆನ್ಸ್(ಎನ್‌ಸಿ) ಪಕ್ಷವು ಏಕೈಕ ದೊಡ್ಡ ಪಕ್ಷವಾಗಿದೆ. 87 ವಿಧಾನಸಭಾ ಸ್ಥಾನಗಳ ಪೈಕಿ ಎನ್.ಸಿ. 28 ಸ್ಥಾನಗಳನ್ನು ಗಳಿಸಿದೆ. ಕಳೆದ ಬಾರಿ ಪಿಡಿಪಿ-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಮೊದಲ 3 ವರ್ಷಗಳ ಅವಧಿಗೆ ಸರ್ಕಾರದ ನೇತೃತ್ವ ವಹಿಸಿದ್ದ ಪೀಪಲ್ಸ್ ಡೆಮಾಕ್ರೆಟಿಕ್ ಪಕ್ಷ (ಪಿಡಿಪಿ) ಯು ಈ 21 ಸ್ಥಾನಗಳಿಸಿದೆ.



ಮೂರನೆಯ ಗೆದ್ದ ಸಿಪಿಐ(ಎಂ) ಅಭ್ಯರ್ಥಿ ಯೂಸಫ್ ತರಿಗಾಮಿ

ಪಿಡಿಪಿ ಸರದಿಯ ನಂತರ ಇತ್ತೀಚಿನವರೆಗೆ ಸರ್ಕಾರದ ನೇತೃತ್ವ ವಹಿಸಿದ್ದ ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ತನಗೆ ಬಹುಮತ ಬರಲಿದೆ ಎಂದು ನಿರೀಕ್ಷಿಸಿತ್ತು. ಆದರೆ ಅದಕ್ಕೆ ಕೇವಲ 17 ಸ್ಥಾನ ಲಭಿಸಿದೆ.


ಕೇಂದ್ರ ಯುಪಿಎ ಸರ್ಕಾರ ಕೋಮುವಾದದ ಪ್ರಶ್ನೆಯಲ್ಲಿ ಸಾಕಷ್ಟು ಜಾಗೃತವಾಗಿದ್ದಿದ್ದರೆ, ಎಡಪಕ್ಷಗಳ ಸಲಹೆಯನ್ನು ಕೇಳಿದ್ದಿದ್ದರೆ ಬಹುಶಃ ಜಮ್ಮು ಕಾಶ್ಮೀರದ ಪರಿಸ್ಥಿತಿ ಇತ್ತೀಚಿನ ಆ ವಿಷಮ ಹಂತಕ್ಕೆ ಹೋಗಲು ಅವಕಾಶವಾಗುತ್ತಿರಲಿಲ್ಲ. ಜಮ್ಮು ಕಾಶ್ಮೀರದಂತಹ ಅತಿ ಸೂಕ್ಷ್ಮ ರಾಜ್ಯವೊಂದರಲ್ಲಿ ಹಿಂದಿನ ಎನ್.ಡಿ.ಎ. ಸರ್ಕಾರ ನೇಮಿಸಿದ್ದ ವ್ಯಕ್ತಿಯೊಬ್ಬರನ್ನು ರಾಜ್ಯಪಾಲರಾಗಿ ಉಳಿಸಿದ್ದು ಒಂದು ತಪ್ಪು ನಿರ್ಧಾರವಾಗಿತ್ತು. ಅಮರನಾಥ ಭೂಮಿ ವಿವಾದ ಸ್ಫೋಟಿಸಿತು. ಬಿಜೆಪಿ ಹಾಗೂ ಪಿಡಿಪಿ ಪಕ್ಷಗಳು ಉದ್ರಿಕ್ತ ವಾತಾವರಣ ನಿರ್ಮಿಸಿ ರಾಜಕೀಯ ಲಾಭ ಪಡೆಯುವ ಪೈಪೋಟಿಗೆ ಬಿದ್ದವು. ಜಮ್ಮು ಪ್ರಾಂತದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಹಿಂದೂಗಳನ್ನು ಬಿಜೆಪಿ ಉದ್ರೇಕಿಸಿತು. ಮತ್ತೊಂದು ಕಡೆ ಪಿಡಿಪಿಯು ಮುಸ್ಲಿಮರನ್ನು ಉದ್ರೇಕಿಸಿ ಅದನ್ನೇ ಮಾಡಿತು.

ಈ ಹಿಂದೆ ಎಂದೂ 3 ಸ್ಥಾನಗಳ ಮೇಲೆ ಗೆಲ್ಲದಿದ್ದ ಬಿಜೆಪಿ, ಕಳೆದ ವಿಧಾನಸಭೆಯಲ್ಲಿ ಕೇವಲ 1 ಸ್ಥಾನ ಗಳಿಸಿದ್ದ ಬಿಜೆಪಿ ಈ ಬಾರಿ 11 ಕ್ಷೇತ್ರಗಳಲ್ಲಿ ಗೆದ್ದಿರುವುದು ಈ ಕೋಮುವಾದಿ ತಂತ್ರಗಳಿಂದಾಗಿಯೇ. ಕಳೆದ ಬಾರಿ 16 ಮಾತ್ರ ಸ್ಥಾನ ಹೊಂದಿದ್ದ ಪಿಡಿಪಿ ಈ ಬಾರಿ 21 ಸ್ಥಾನ ಗೆದ್ದಿದೆ. ಇದಲ್ಲದೆ ಪಿಡಿಪಿ ಪಕ್ಷವು ರಾಜ್ಯದ ಜಮಾತೆ-ಇ-ಇಸ್ಲಾಮಿ ಮುಂತಾದ ಧಾರ್ಮಿಕ ಮೂಲಭೂತವಾದಿ ಗುಂಪುಗಳೊಂದಿಗೆ ರಹಸ್ಯ ಹೊಂದಾಣಿಕೆ ಮಾಡಿಕೊಂಡಿತ್ತು. ಇದು ಸಾಲದೆಂದು ಅದು ಪ್ರಾದೇಶಿಕ ಭಾವನೆ ಮತ್ತು 'ಸ್ವಯಂ ಆಡಳಿತ' ಎಂಬ 'ಮೃದು ಪ್ರತ್ಯೇಕತಾವಾದಿ' ಭಾವನೆಗಳನ್ನು ಬಿತ್ತಿ ರಾಜಕೀಯ ಲಾಭಕ್ಕೆ ಯತ್ನಿಸಿತು.

ನ್ಯಾಷನಲ್ ಕಾನ್‌ಫರೆನ್ಸ್ ಪಕ್ಷವು ಜಮ್ಮು ಕಾಶ್ಮೀರಕ್ಕೆ 'ಆಂತರಿಕ ಸ್ವಾಯತ್ತತೆ' ಎಂಬ ಧೋರಣೆ ಪ್ರತಿಪಾದಿಸಿತು ಮತ್ತು ಅದಕ್ಕಿಂತ ಮುಖ್ಯವಾಗಿ ಅದು ಪಿಡಿಪಿ-ಕಾಂಗ್ರೆಸ್ ಸರ್ಕಾರದ ವಿರುದ್ಧದ ಆಡಳಿತ ವಿರೋಧಿ ಅಲೆಯನ್ನು ನೆಚ್ಚಿಕೊಂಡಿತ್ತು. ಈ ಬಾರಿ ನ್ಯಾಷನಲ್ ಕಾಂಗ್ರೆಸ್ ಸ್ಥಾನ ಹೆಚ್ಚಲೂ ಇಲ್ಲ, ಕಡಿಮೆಯಾಗಲೂ ಇಲ್ಲ.

ಪುಟ 13 ಕ್ಕೆ

ತಮಿಳುನಾಡು : ಅರುಂಧತಿಯಾರ್ ಸಮುದಾಯಕ್ಕೆ ಒಳಮೀಸಲಾತಿ - ಹೋರಾಟಕ್ಕೆ ಸಿಕ್ಕ ಗೆಲುವು



'ಮ್ಯಾನ್‌ಹೋಲ್'ನಲ್ಲಿ ಮನುಷ್ಯ ಎಂಥ ಅಮಾನವೀಯ

ಈ ಸಮುದಾಯದ ಹೆಸರು 'ಅರುಂಧತಿಯಾರ್' ಎಂತ. ಈ ಸಮಾಜ ಇವರ ಮೇಲೆ ಹೊರಿಸಿದ ವೃತ್ತಿ ಹೊಲಸು ತೆಗೆಯುವುದು. ಮನುಷ್ಯನ ತ್ಯಾಜ್ಯ ಹೊತ್ತೊಯ್ಯುವುದು. ಇದು ಹಳೆಯ ವೃತ್ತಿ, ಈಗ ಅವರ ವೃತ್ತಿ ಏನು ಎನ್ನಬಹುದು ಕೆಲವರು. ಬಹುತೇಕ ಈ ಸಮುದಾಯಕ್ಕೆ ಈಗಲೂ ಅದೇ ವೃತ್ತಿಯೇ. ಕೆಲಸದ ಸ್ವರೂಪದಲ್ಲಿ ಕೊಂಚ ಬದಲಾವಣೆಯಾಗಿರ ಬಹುದು ಅಷ್ಟೇ.

ತಮಿಳುನಾಡಿನಲ್ಲಿ ಮಲ ಹೊರುವ ಪರಿಸ್ಥಿತಿಯೇ ಇಲ್ಲ ಎಂದು ಹಲವರು ನಂಬಿಕೊಂಡಿದ್ದರು. ಸರ್ಕಾರವೂ ಬಹುತೇಕ ಹಾಗೆ ಹೇಳುತ್ತಿತ್ತು. ಅದು ಸುಳ್ಳು. ಈಗಲೂ ಮಲ ಹೊರುವ ಪದ್ಧತಿ ಅಲ್ಲಲ್ಲಿ ಜೀವಂತವಿದೆ. ಅಲ್ಲದೆ ಶೌಚಾಲಯಗಳನ್ನು ಸ್ವಚ್ಛ ಮಾಡುವವರಾಗಿ, ಕಟ್ಟಿಕೊಂಡ ಒಳಚರಂಡಿಯ ಕೊಳವೆಗಳ ಒಳ ಹರಿವನ್ನು ಸರಿಪಡಿಸುವವರಾಗಿ ಬಹುತೇಕ ಜನರು ಈಗಲೂ ಅದೇ ಉದ್ಯೋಗದಲ್ಲಿಯೇ ಮುಂದುವರಿದ್ದಾರೆ ಮತ್ತು ಸಾಮಾಜಿಕವಾಗಿ ಅರುಂಧತಿಯಾರ್ ಸಮುದಾಯ ಎದುರಿಸುತ್ತಿರುವ ತಾರತಮ್ಯಗಳ ಪರಿಸ್ಥಿತಿಯಲ್ಲಿ ಬಹಳ ಏನೂ ಬದಲಾವಣೆಯಾಗಿಲ್ಲ ಎಂದು ಇಡೀ ತಮಿಳುನಾಡಿಗೆ ಮನವರಿಕೆ ಮಾಡಿಕೊಟ್ಟಿದ್ದು ಸಿಪಿಐ(ಎಂ) ನೇತೃತ್ವದ ಅಸ್ಪೃಶ್ಯತಾ ವಿರೋಧಿ ಹೋರಾಟ. ಕಳೆದ ವರ್ಷ ಅದು ನಡೆಸಿದ ರಾಜ್ಯವ್ಯಾಪಿ ಆಂದೋಲನ, ರಾಜ್ಯಮಟ್ಟದ ಬೃಹತ್ ರ್‍ಯಾಲಿ ಈ ಸಮುದಾಯದ ವಸ್ತು ಸ್ಥಿತಿಯನ್ನು 'ಶಿಷ್ಟ' ಸಮಾಜದ ಮುಂದೆ ತೆರೆದಿಟ್ಟಿತು.

ರಾಜ್ಯಮಟ್ಟದ ಬೃಹತ್ ರ್‍ಯಾಲಿ - ಸಿಪಿಐ(ಎಂ) ನೇತೃತ್ವದಲ್ಲಿ



ತಮಿಳುನಾಡಿನಲ್ಲಿ ಒಟ್ಟು ದಲಿತರ ಸಂಖ್ಯೆ 1,18,57,504 ಇದೆ. ಅದರಲ್ಲಿ ಅರುಂಧತಿಯಾರ್ ಸಮುದಾಯದವರು 7,71, 659 ಇದ್ದಾರೆ. 2001ರ ಜನ ಗಣತಿಯಂತೆ ತಮಿಳುನಾಡಿನ ಸರಾಸರಿ ಸಾಕ್ಷರತೆ ಶೇ.73.5. ಅದರಲ್ಲಿ ದಲಿತರ ಸರಾಸರಿ ಸಾಕ್ಷರತೆ ಪ್ರಮಾಣ ಶೇ.63.2. ಅದರೊಳಗೆ ಅರುಂಧತಿಯಾರ್ ಸಮುದಾಯದ ಸಾಕ್ಷರತೆ ಪ್ರಮಾಣ 53.7 ಮಾತ್ರ ಇದೆ.

ತಮಿಳುನಾಡಿನಲ್ಲಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆ ಮುಗಿಸಿದ ಈ ಸಮುದಾಯದ ಜನರ ಪ್ರಮಾಣ ಶೇ. 13.5 ಮಾತ್ರ. ಡಿಪ್ಲೋಮೋ ಪ್ರಮಾಣ ಪತ್ರ ಪಡೆದವರ ಪ್ರಮಾಣ 0.5 ಮಾತ್ರ. ಪದವಿ ಪಡೆದವರ ಪ್ರಮಾಣ 0.7 ಶೇ. ಮಾತ್ರ. ಅಂದರೆ ನೂರರಲ್ಲಿ ಒಬ್ಬರೂ ಕೂಡ ಪದವಿ ಪಡೆದವರಿಲ್ಲ.

ಗ್ರಾಮಾಂತರದ ಪ್ರದೇಶಗಳ ಶಾಲೆಗಳಲ್ಲಿ ಈಗಲೂ ಎಷ್ಟೋ ಕಡೆಗಳಲ್ಲಿ ಅರುಂಧತಿಯಾರ್ ಸಮುದಾಯದ ಮಕ್ಕಳನ್ನು ಶಾಲೆಯ ಶೌಚಾಲಯ ಸ್ವಚ್ಛ ಮಾಡುವಂತೆ ಒತ್ತಾಯಿಸಿ, ಕೆಲಸ ಮಾಡಿಸುವುದು ನಡೆದಿದೆ. ಚಳುವಳಿಯು ಇಂತಹ ಎಲ್ಲ ಪ್ರಶ್ನೆಗಳನ್ನು ಒಳಗೊಂಡು ನಡೆಯುತ್ತಿದೆ. ಈ ಸಮುದಾಯದ ಒಂದು ಸಣ್ಣ ವಿಭಾಗ ಕೃಷಿ ಕೂಲಿಕಾರರಾಗಿ, ಹತ್ತಿ ಗಿರಣಿಗಳಲ್ಲಿ ಕೂಲಿ ಕಾರ್ಮಿಕರಾಗಿ, ಕೆಲವು ಇತರೆ ಉದ್ಯೋಗಗಳಿಗೆ ವರ್ಗಾವಣೆಗೊಂಡಿದ್ದರೂ, ತಮ್ಮ ತಮ್ಮ ಊರುಗಳಲ್ಲಿ ಎದುರಿಸುತ್ತಿರುವ 'ಅಸ್ಪೃಶ್ಯತೆ' ಯ ಪರಿಸ್ಥಿತಿಗಳಲ್ಲಿ ಬಾರಿ ಬದಲಾವಣೆಯೇನೂ ಆಗಿಲ್ಲ.

ಸಂವಿಧಾನಬದ್ಧವಾದ ಉದ್ಯೋಗ ಮೀಸಲಾತಿ ಹಕ್ಕನ್ನು ದಕ್ಕಿಸಿಕೊಳ್ಳುವಲ್ಲಿಯೂ ಈ ಸಮುದಾಯ ಸಾಕಷ್ಟು ಹಿಂದುಳಿದಿರುವುದನ್ನು ಅಧ್ಯಯನದ ಮೂಲಕ ಗುರುತಿಸಿದ ಚಳುವಳಿಯು ಅರುಂಧತಿಯಾರ್ ಸಮುದಾಯಕ್ಕೆ ದಲಿತ ಸಮುದಾಯಕ್ಕೆ ಇರುವ ಶೇ.18 ಮೀಸಲಾತಿಯ ಒಳಗೆ ನಿರ್ದಿಷ್ಟ ಒಳಮೀಸಲಾತಿ ಸೌಲಭ್ಯ ಬೇಕೆಂದು ಬೇಡಿಕೆ ಇಟ್ಟಿತ್ತು. ಇದೀಗ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ(ಎಸ್.ಸಿ) ಮೀಸಲಾತಿಯೊಳಗೆ ಶೇ.3 ರಷ್ಟು ಉದ್ಯೋಗಗಳನ್ನು ಅರುಂಧತಿಯಾರ್ ಸಮುದಾಯಕ್ಕೆ ಮೀಸಲಿಡಲು ನಿರ್ಧರಿಸಿದೆ. ಶೇ.3 ರ ಒಳಮೀಸಲಾತಿ ನಿರೀಕ್ಷೆಗಿಂತ ಕಮ್ಮಿ ಅನಿಸಿದರೂ ಕೂಡ ಇದು ಒಂದು ಆರಂಭಿಕ ವಿಜಯ, ಹೋರಾಟ ಮತ್ತೆ ಮುಂದುವರಿಯುತ್ತದೆಂದು ಭಾವಿಸಬಹುದಾಗಿದೆ.

2009

ಕಟ್ಟುವೆವು ನಾವು ಹೊಸ ನಾಡೊಂದನು

ಜನವರಿ

ಭಾನು		4	11	18	25
ಸೋಮ		5	12	19	26
ಮಂಗಳ		6	13	20	27
ಬುಧ		7	14	21	28
ಗುರು	1	8	15	22	29
ಶುಕ್ರ	2	9	16	23	30
ಶನಿ	3	10	17	24	31

8 ಮೊಹರಂ ಕಡೇದಿನ 14 ಮಕರ ಸಂಕ್ರಾಂತಿ 26 ಗಣರಾಜ್ಯೋತ್ಸವ

ಫೆಬ್ರುವರಿ

ಭಾನು	1	8	15	22	
ಸೋಮ	2	9	16	23	
ಮಂಗಳ	3	10	17	24	
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

23 ಮಹಾಶಿವರಾತ್ರಿ

ಮಾರ್ಚ್

ಭಾನು	1	8	15	22	29
ಸೋಮ	2	9	16	23	30
ಮಂಗಳ	3	10	17	24	31
ಬುಧ	4	11	18	25	
ಗುರು	5	12	19	26	
ಶುಕ್ರ	6	13	20	27	
ಶನಿ	7	14	21	28	

10 ಈದ್ ಮಿಲಾದ್ 27 ಚಾಂದ್ರಮಾನ ಯುಗಾದಿ

ಏಪ್ರಿಲ್

ಭಾನು		5	12	19	26
ಸೋಮ		6	13	20	27
ಮಂಗಳ		7	14	21	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	
ಶನಿ	4	11	18	25	

10 ಗುಡ್‌ಫ್ರೈಡೆ 14 ಅಂಬೇಡ್ಕರ್ ಜಯಂತಿ 28 ಬಸವೇಶ್ವರ ಜಯಂತಿ

ಮೇ

ಭಾನು	31	3	10	17	24
ಸೋಮ		4	11	18	25
ಮಂಗಳ		5	12	19	26
ಬುಧ		6	13	20	27
ಗುರು		7	14	21	28
ಶುಕ್ರ	1	8	15	22	29
ಶನಿ	2	9	16	23	30

1 ಕಾರ್ಮಿಕ ದಿನಾಚರಣೆ

ಜೂನ್

ಭಾನು		7	14	21	28
ಸೋಮ	1	8	15	22	29
ಮಂಗಳ	2	9	16	23	30
ಬುಧ	3	10	17	24	
ಗುರು	4	11	18	25	
ಶುಕ್ರ	5	12	19	26	
ಶನಿ	6	13	20	27	



ಸರ್ವ ಜನಾಂಗದ ಶಾಂತಿಯ ತೋಟ
ರಸಿಕರ ಕಂಗಳ ಸೆಳೆಯುವ ನೋಟ
ಹಿಂದೂ, ಕ್ರೈಸ್ತ, ಮುಸಲ್ಮಾನ
ಪಾರಸಿಕ ಜೈನರುದ್ಯಾನ
ಜಯ ಭಾರತ ಜನನಿಯ ತನುಜಾತೆ
ಜಯಹೇ ಕರ್ನಾಟಕ ಮಾತೆ


- ರಾಷ್ಟ್ರ ಕವಿ ಕುವೆಂಪು



ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲುಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ, ಸ್ನೇಹಗಳ
ಗುರುತಿಸದಾದೆನು ನಮ್ಮೊಳಗೆ



ಹಸಿದ ಹೊಟ್ಟೆಗೆ ಅನ್ನ ನೀಡದ
ವಿಧವೆಯರ ಕಣ್ಣೀರು ಒರೆಸದ



ಕಣ್ಣಿಗೆ ಕಣ್ಣು ಎನ್ನುವ
ದ್ವೇಷ ಸಿದ್ಧಾಂತವು

ಸೌಹಾರ್ದತೆಯ ಬೀಡೊಂದನು

ಜನಶಕ್ತಿ

ಕನ್ನಡ ವಾರಪತ್ರಿಕೆ

ಜುಲೈ

ಭಾನು	✱	5	12	19	26
ಸೋಮ	✱	6	13	20	27
ಮಂಗಳ	✱	7	14	21	28
ಬುಧ	1	8	15	22	29
ಗುರು	2	9	16	23	30
ಶುಕ್ರ	3	10	17	24	31
ಶನಿ	4	11	18	25	✱

ಆಗಸ್ಟ್

ಭಾನು	30	1	9	16	23
ಸೋಮ	31	3	10	17	24
ಮಂಗಳ	✱	4	11	18	25
ಬುಧ	✱	5	12	19	26
ಗುರು	✱	6	13	20	27
ಶುಕ್ರ	✱	7	14	21	28
ಶನಿ	1	8	15	22	29

15 ಸ್ವಾತಂತ್ರ್ಯ ದಿನಾಚರಣೆ 23 ಗಣೇಶ ಚತುರ್ಥಿ

ಸೆಪ್ಟೆಂಬರ್

ಭಾನು	✱	6	13	20	27
ಸೋಮ	✱	7	14	21	28
ಮಂಗಳ	1	8	15	22	29
ಬುಧ	2	9	16	23	30
ಗುರು	3	10	17	24	✱
ಶುಕ್ರ	4	11	18	25	✱
ಶನಿ	5	12	19	26	✱

18 ಮಹಾಲಯ ಅಮಾವಾಸ್ಯೆ 21 ಈದ್-ಎ-ರಂಜಾನ್ 27 ಆಯುಧಪೂಜೆ 28 ವಿಜಯದಶಮಿ

ಅಕ್ಟೋಬರ್

ಭಾನು	✱	4	11	18	25
ಸೋಮ	✱	5	12	19	26
ಮಂಗಳ	✱	6	13	20	27
ಬುಧ	✱	7	14	21	28
ಗುರು	1	8	15	22	29
ಶುಕ್ರ	2	9	16	23	30
ಶನಿ	3	10	17	24	31

2 ಗಾಂಧಿ ಜಯಂತಿ 17 ನರಕ ಚತುರ್ದಶಿ 19 ಬಲಿಪಾಡ್ಯಮಿ/ದೀಪಾವಳಿ

ನವೆಂಬರ್

ಭಾನು	1	8	15	22	29
ಸೋಮ	2	9	16	23	30
ಮಂಗಳ	3	10	17	24	✱
ಬುಧ	4	11	18	25	✱
ಗುರು	5	12	19	26	✱
ಶುಕ್ರ	6	13	20	27	✱
ಶನಿ	7	14	21	28	✱

1 ಕನ್ನಡ ರಾಜ್ಯೋತ್ಸವ 28 ಬಕ್ರೀದ್

ಡಿಸೆಂಬರ್

ಭಾನು	✱	6	13	20	27
ಸೋಮ	✱	7	14	21	28
ಮಂಗಳ	1	8	15	22	29
ಬುಧ	2	9	16	23	30
ಗುರು	3	10	17	24	31
ಶುಕ್ರ	4	11	18	25	✱
ಶನಿ	5	12	19	26	✱

25 ಕ್ರಿಸ್‌ಮಸ್ 28 ಮೊಹರಂ ಕೊನೆ ದಿನ



ದಯವಿಲ್ಲದ ಧರ್ಮ ಅವುದಯ್ಯ



ಕುಲಕುಲ ಕುಲವೆಂದು
ಹೊಡೆದಾಡದಿರಿ
ನಿಮ್ಮ ಕುಲದ
ನೆಲೆಯನೇನಾದರೂ
ಬಲ್ಲಿರಾ.. ಬಲ್ಲಿರಾ..?




ಒಂದು ಸಮುದಾಯ ಎಲ್ಲಿಯವರೆಗೆ
ಇನ್ನೊಂದು ಸಮುದಾಯವನ್ನು ವಿಚಿತ್ತೆಂದು
ಪರಿಗಣಿಸುವುದೋ ಅಲ್ಲಿಯವರೆಗೆ
ಯಾವುದೇ ಸಾಮಾಜಿಕ ಪ್ರಗತಿ ಸಾಧ್ಯವಿಲ್ಲ



ಕ್ರಾಂತಿ ಎಂದರೆ ಬಾಂಬು, ಪಿಸ್ತೂಲುಗಳ
ಆರಾಧನೆಯಲ್ಲ. ಅನ್ಯಾಯ, ಅನಾಚಾರದ
ತಳಹದಿಯ ಈ ಸಮಾಜ ವ್ಯವಸ್ಥೆಯ
ಅಮೂಲಾಗ್ರ ಬದಲಾವಣೆಯೇ ಕ್ರಾಂತಿ
ಭಗತ್‌ಸಿಂಗ್



ದೇಶದಲ್ಲೆಲ್ಲಾ ಮನೆ ಮಾತಾಗಿ ಹೋದ ಯುಪಿಎ ಸರ್ಕಾರದ ವಿಶ್ವಾಸಮತ ಲಂಚ ಪ್ರಕರಣದಲ್ಲಿ ತನಿಖೆ ಮುಗಿಯುವ ಮುನ್ನವೇ ಅಮರ್‌ಸಿಂಗ್, ಅಹ್ಮದ್ ಪಟೇಲ್ ನಿರ್ದೋಷಿಗಳೆನ್ನುವುದರ ಹಿಂದೆ ತಿಪ್ಪೆ ಸಾರಿಸುವ ಕೀಲುತಂತ್ರವಲ್ಲದೇ ಬೇರೇನೂ ಇಲ್ಲ.



ಯುಪಿಎ ಸರ್ಕಾರದ 'ವಿಶ್ವಾಸ ಮತ' ಲಂಚ ಹಗರಣ

'ದೋಷಮುಕ್ತಿ' ಎಂಬ ಪ್ರಾಯೋಜಿತ ನಾಟಕ

ಜೂನ್, ಜುಲೈ 2008 ರಾಷ್ಟ್ರ ರಾಜಕಾರಣದಲ್ಲಿ ಬಾರಿ ಚಟುವಟಿಕೆಗಳು ನಡೆದುಹೋದವು. ಕೋಮುವಾದಿ ಬಿಜೆಪಿ ನೇತೃತ್ವದ ಎನ್.ಡಿ.ಎ. ಅಧಿಕಾರಕ್ಕೆ ಬರದಂತೆ ತಡೆಯುವ ಉದ್ದೇಶದಿಂದ ನಾಲ್ಕುವರೆ ವರ್ಷಗಳ ಕಾಲ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಬೆಂಬಲ ನೀಡಿದ್ದ ಎಡಪಕ್ಷಗಳು, ಸರ್ಕಾರ ರಾಷ್ಟ್ರ ಸಾರ್ವಭೌಮತೆಯನ್ನು ಬಲಿಕೊಟ್ಟು ಅಮೇರಿಕಾದೊಂದಿಗೆ ಅಣು ಒಪ್ಪಂದಕ್ಕೆ ಮುಂದಾದಾಗ ಬೆಂಬಲ ವಾಪಸ್ ಪಡೆದವು.

ಅನೈತಿಕ ವಿದ್ಯಾಮಾನ :

ನಂತರ ನಡೆದದ್ದು ಅತ್ಯಂತ ನಾಟಕೀಯ ಹಾಗೂ ಅನೈತಿಕ ವಿದ್ಯಮಾನಗಳು. ಸಂಸದರ ನಿರ್ಲಜ್ಜ ಖರೀದಿ, ಕುದುರೆ ವ್ಯಾಪಾರಗಳು. ಪಾರ್ಲಿಮೆಂಟ್‌ನಲ್ಲಿ ಬಹುಮತ ಸಾಬೀತುಪಡಿಸಬೇಕಾಗಿ ಬಂದ ಕಾಂಗ್ರೆಸ್ ನೇತೃತ್ವದ ಯುಪಿಎ ಸಂಖ್ಯೆಯ ದೃಷ್ಟಿಯಿಂದ ಕಡೆಗೆ ಗೆಲುವು ಸಾಧಿಸಿತು. ಆದರೆ ಸರ್ಕಾರ ಪಾಲಿಸಬೇಕಾಗಿದ್ದ ನೈತಿಕತೆ ಮಾತ್ರ ಪಾತಾಳ ಸೇರಿತು. ಸಂಸದರ ಖರೀದಿ ಕುರಿತು ಜನ ಬೀದಿ ಬೀದಿಗಳಲ್ಲಿ ಗಲ್ಲಿ ಗಲ್ಲಿಗಳಲ್ಲಿ ಮಾತನಾಡಿಕೊಳ್ಳುವಂತಹ ಪರಿಸ್ಥಿತಿ ಬಂತು.

ಎಡಪಕ್ಷಗಳ ಸಂಸದರನ್ನು ಖರೀದಿಸುವುದು ಸಾಧ್ಯವಿಲ್ಲ ಎಂಬುದನ್ನು ಅರಿತಿದ್ದರಿಂದಾಗಿಯಷ್ಟೆ ಅವರನ್ನು ಸಂಪರ್ಕಿಸಲಿಲ್ಲ. ಇನ್ನುಳಿದಂತೆ ಲಂಚ ಮತ್ತು ಆಮಿಷಗಳಿಗೆ ಬಲಿಯಾದವರೆಷ್ಟೋ ಜನ.

ಪಾರ್ಲಿಮೆಂಟ್‌ಗೆ ಬಂದು ಮತ ನೀಡಲೂ ಹಣ, ಪಾರ್ಲಿಮೆಂಟ್‌ಗೆ ಬರದೆ ಹೊರಗೆ ಉಳಿದು ಮತ ನೀಡದಿರುವ ಮೂಲಕ ಸರ್ಕಾರ ಉಳಿಯಲು ಸಹಾಯ ಮಾಡಿದರೆ ಅದಕ್ಕೂ ಹಣ.

'ಅಡ್ಡ' ಮತ 'ದಾನ'

ಇದರ ಫಲವಾಗಿ ಏನೆಲ್ಲಾ ನಡೆಯಿತು. ಎಷ್ಟೋ ಸಂಸದರು ತಮ್ಮ ಮೂಲ ಪಕ್ಷಗಳ ವಿಪ್ ಉಲ್ಲಂಘಿಸಿದರು, ಯಾವುದೇ ಎಗ್ಗು-ಸಿಗ್ಗಿಲ್ಲದೆ ಅಡ್ಡ ಮತದಾನಗಳು ನಡೆದವು. ಸರ್ಕಾರ ಕೊನೆಗೂ ಉಳಿಯಿತು. ಈ ನಡುವೆ ಜುಲೈ 22 ರಂದು ಪಾರ್ಲಿಮೆಂಟ್‌ನೊಳಗೆ ಬಿಜೆಪಿಯ ಸಂಸದರಾದ ಅಶೋಕ್ ಅರ್ಗಲ್, ಮಹಾವೀರ್ ಭಗೋರಾ ಮತ್ತು ಫಗ್ಗನ್ ಸಿಂಗ್ ಕುಲಾಸ್ತೆ ಅವರು ಸದನದಲ್ಲಿ ನೋಟಿನ ಕಂತೆಗಳನ್ನು ಪ್ರದರ್ಶಿಸಿ ಇದು ಮತದಾನದಿಂದ ಹೊರಗುಳಿಯಲು ತಮಗೆ ನೀಡಲಾದ ಲಂಚದ ಹಣ ಎಂದು ಗಂಭೀರ ಆರೋಪ ಮಾಡಿದರು. ರಾಷ್ಟ್ರವ್ಯಾಪಿ ತೀವ್ರ ರಾಜಕೀಯ ಚರ್ಚೆ ವಾಗ್ವಾದಗಳನ್ನು ಹುಟ್ಟು ಹಾಕಿದ ಒಟ್ಟು ಪ್ರಕರಣದ ಬಗೆಗೆ ಲೋಕಸಭೆಯ ಸಮಿತಿಯ ವಿಚಾರಣೆಗೆ ಲೋಕಸಭಾಧ್ಯಕ್ಷರು ಆದೇಶ ನೀಡಿದರು.

ಲಂಚ ನೀಡಿ ಕುರ್ಚಿಯನ್ನು ಕಾಪಾಡಿಕೊಳ್ಳುವುದು ಕಾಂಗ್ರೆಸ್ ಪಕ್ಷಕ್ಕೆ ಹೊಸದೇನೂ ಅಲ್ಲ. 1991ರಲ್ಲಿ ಅಂದಿನ ಪ್ರಧಾನಿ ಪಿ.ವಿ.ನರಸಿಂಹರಾವ್ ಸಂಸದರಿಗೆ ಲಂಚ ನೀಡಿ ಸರ್ಕಾರ ಉಳಿಸಿಕೊಂಡಿದ್ದು, ಈಗ ನಿರ್ವಿವಾದವಾಗಿ ಸಾಬೀತಾಗಿ ಹೋದ ವಿಷಯ. ಈ ಸಾರಿ ಹೊಸ ಅಂಶ ಏನೆಂದರೆ ಒಟ್ಟು ಪ್ರಕರಣದಲ್ಲಿ ಸಮಾಜವಾದಿ ಪಕ್ಷ ಮತ್ತು ಆ ಪಕ್ಷದ ಮುಖಂಡ ಅಮರ್‌ಸಿಂಗ್ ವಹಿಸಿದ ಪಾತ್ರ.

ಬಿಜೆಪಿಯ ಮೂವರು ಸಂಸದರ ಆರೋಪವು ಅದನ್ನು ಹೇಳಿತ್ತು. ಕಾಂಗ್ರೆಸ್ ಪಕ್ಷದ ಅಹ್ಮದ್ ಪಟೇಲ್, ಸಮಾಜವಾದಿ ಪಕ್ಷದ ಅಮರ್‌ಸಿಂಗ್ ಅವರು ತಾವು ಮತದಾನದಿಂದ ಹೊರಗುಳಿಯಲು ತಲಾ 3 ಕೋಟಿ ನೀಡಿದ ಮೊದಲ ಕಂತಿನ ಹಣ ಅದು ಎಂದು.

ಗೋಸುಂಬೆ ಬಣ್ಣ

ಇಲ್ಲಿ ಅಮರ್‌ಸಿಂಗ್ ಅವರ ಎಸ್‌ಪಿ ಪಕ್ಷದ ನಿಲುವನ್ನು ಸ್ವಲ್ಪ ಗಮನಿಸಿದರೆ ಒಳ್ಳೆಯದು. ಆರಂಭದಿಂದಲೂ ಕೂಡ ಎಸ್.ಪಿ.ಯು ಅಮೇರಿಕಾದೊಂದಿಗಿನ ಅಣು ಒಪ್ಪಂದಕ್ಕೆ ವಿರೋಧವಾಗಿತ್ತು. ಎಡಪಕ್ಷಗಳೊಂದಿಗೆ ಈ ವಿಚಾರದಲ್ಲಿ ಪ್ರತಿಭಟನೆಯಲ್ಲೂ ಪಾಲ್ಗೊಂಡಿತ್ತು.

ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಬಹುಮತ ಗಳಿಸಿ ಅಧಿಕಾರಕ್ಕೆ ಬಂದು ಎಸ್‌ಪಿ ತತ್ತರಿಸುವಂತಾದ ಮೇಲೆ ಎಸ್‌ಪಿಗೆ ಕಾಂಗ್ರೆಸ್ ಬಗೆಗೆ ಅಲ್ಲಿಯವರೆಗೆ ಇಲ್ಲದಿದ್ದ ಮಮಕಾರ ಹುಟ್ಟಿ ಉಕ್ಕಿ ಹರಿಯತೊಡಗಿತು. ಹಾಗೆ ಅಮೇರಿಕಾದೊಂದಿಗಿನ ಅಣು ಒಪ್ಪಂದದಲ್ಲಿ ದೇಶದ ಹಿತ ಕಾಣತೊಡಗಿತು. ಹಾಗೂ ಲೋಕಸಭಾ ಚುನಾವಣೆ ಘೋಷಣೆಯಾಗುವ ಎಷ್ಟೋ ತಿಂಗಳು ಮೊದಲೇ ಹೊಂದಾಣಿಕೆ ಮಾತುಕತೆಯ ಕೊಸರಾಟಗಳು ಶುರು ಆಗಿಯೇ ಬಿಟ್ಟಿತು.

ತರಾತುರಿ ವರದಿ

ಅದೆಲ್ಲಾ ಇರಲಿ ಈಗ ಮುಖ್ಯವಾದ ವಿಷಯ ಅಂದರೆ ಈ ಲಂಚ ಪ್ರಕರಣದ ಆರೋಪದ ಕುರಿತು ವಿಚಾರಣೆ ನಡೆಸಲು ನೇಮಕಗೊಂಡಿದ್ದ ವಿಚಾರಣೆ ಸಮಿತಿ ತರಾತುರಿಯ ವರದಿ ನೀಡಿದ್ದು, ಅದರಲ್ಲಿ ಪ್ರಕರಣದಲ್ಲಿ ಅಹ್ಮದ್ ಪಟೇಲ್ ಹಾಗೂ ಅಮರ್‌ಸಿಂಗ್ ಅವರ ಪಾತ್ರಕ್ಕೆ ಯಾವುದೇ ಸಾಕ್ಷ್ಯಾಧಾರಗಳಿಲ್ಲವೆಂದು ಹಾಗಾಗಿ ಮುಂದಿನ ಹಂತದ ತನಿಖೆಯಿಂದ ಅವರಿಬ್ಬರ ಹೆಸರನ್ನು ಕೈ ಬಿಡಬೇಕು ಎಂದೂ ವರದಿ ನೀಡಿದೆ. ಕಾಂಗ್ರೆಸ್ ಪಕ್ಷದ ವಿ.ಕಿಶೋರ ಚಂದ್ರ ಎಸ್. ದೇವ್ ನೇತೃತ್ವದ ಸಮಿತಿಯು 466 ಪುಟಗಳ ತನ್ನ ವರದಿಯನ್ನು ನೀಡಿದೆ ಹಾಗೂ ಅದನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ.

ಈ ಸಮಿತಿಯ ಈ ವರದಿ ಎಲ್ಲ ಸದಸ್ಯರ ಸರ್ವ ಸಮ್ಮತ್ರ ವರದಿಯಲ್ಲ. ಸಿಪಿಐ(ಎಂ)ನ ಮಹಮ್ಮದ್ ಸಲೀಂ, ಬಿಜೆಪಿಯ ಪಿ.ಕೆ.ಮಲ್ಹೋತ್ರ ಈ ವರದಿಯ ತೀರ್ಮಾನಗಳಿಗೆ ಅಸಮ್ಮತಿ ಸೂಚಿಸಿದ್ದಾರೆ. ಮಹಮದ್ ಸಲೀಂ ಅವರು ಅಸಮ್ಮತಿ ಟಿಪ್ಪಣಿಯಲ್ಲಿ ಕೆಲವು ಗಂಭೀರ ಪ್ರಶ್ನೆಗಳನ್ನು ಎತ್ತಿದ್ದಾರೆ.

ಹಾವು ಬಿಟ್ಟು ಹುತ್ತ ಬಡಿದರು

ಸಮಿತಿಯು ವಿಚಾರಣೆಯಲ್ಲಿ ಮಹಮದ್ ಅವರಿಗೆ ಕಂಡು ಬಂದಿರೋದು ಏನಪ್ಪಾಂದ್ರೆ, ಸತ್ಯಶೋಧನೆ ಆಗಬೇಕು ಅನ್ನುವುದಕ್ಕಿಂತ ಕೆಲವರನ್ನು ರಕ್ಷಿಸಬೇಕು ಅನ್ನುವ ಧಾವಂತ. ಹಾಗಾಗಿ ಹಾವನ್ನು ಬಿಟ್ಟು ಬರೀ ಹುತ್ತ ಬಡಿದರು ಅನ್ನುವಂತೆ ಸಮಿತಿಯು ಸಾಕ್ಷ್ಯಾಧಾರಗಳು ಸಿಗಬಹುದಾದ ಪ್ರಮುಖ ವಿಷಯಗಳನ್ನು ಬಿಟ್ಟು ಅದೂ ಇದೂ ಪರಿಶೀಲನೆ ಮಾಡಿದಂತೆ ಮಾಡಿ ತಿಪ್ಪೇ ಸಾರಿಸಿ ಇಬ್ಬರು ಮುಖಂಡರಿಗೆ ನಿರ್ದೋಷಿಗಳು ಅಂತ ಸಾಚಾತನದ ಪ್ರಮಾಣಪತ್ರ ಕೊಟ್ಟು ಬಿಟ್ಟಿದೆ.



ಎಸ್.ಪಿ. ಸಂಸದ ಅಮರ್ ಸಿಂಗ್ ಹಾಗೂ ಕಾಂಗ್ರೆಸ್ ಸಂಸದ ಅಹಮದ್ ಪಾಟೀಲ್, ಲಂಚದ ಹಣವನ್ನು ಬಿಜೆಪಿ ಸಂಸದರಿಗೆ ತಲುಪಿಸುವುದರಲ್ಲಿ ಪಾಲ್ಗೊಂಡವರೆಂದು ಸಿಎನ್‌ಎನ್- ಐಬಿಎನ್ ದೂರದರ್ಶನ ವಾಹಿನಿಯು ಈ ಪ್ರಕರಣದ ಸಂಬಂಧ ಲೋಕಸಭಾಧ್ಯಕ್ಷರಿಗೆ ಪರಿಶೀಲನೆಗೆ ಸಲ್ಲಿಸಿರುವ ವಿಡಿಯೋ ಟೇಪ್‌ನಲ್ಲಿ ದಾಖಲಾದಂತೆ ತೋರುತ್ತಿರುವ, ಜೆನ್ ಕಾರಿನ ಚಾಲಕ ಹಷ್ಮತ್ ಆಲಿ, ಹಾಗೂ ಹಳದಿ ಅಂಗಿಯ ಮತ್ತೊಬ್ಬ ಯುವಕ ಒಟ್ಟು ಈ ನಾಲ್ಕು ಜನರಿಗೆ ಸಮನ್ಸ್ ನೀಡಿ ಅವರ ಹೇಳಿಕೆ ಪಡೆದುಕೊಂಡು ಅವರನ್ನು ತನಿಖೆಗೆ ಒಳಪಡಿಸಲು ಸಂಸತ್ ಸಮಿತಿಯ ಮುಖಂಡರಿಗೆ ಮನಸ್ಸೇ ಇಲ್ಲ. ಆಹಾ ಎಂತಹ ಸಮಿತಿ!!

ಈ ಪ್ರಕರಣದ ಪ್ರಮುಖ ಕೊಂಡಿಯಾದ ಹಷ್ಮತ್ ಆಲಿಗೆ ಸಮನ್ಸ್ ನೀಡಬೇಕಾದರೆ ಸಮಿತಿಯ ಸದಸ್ಯರು ಸಾಕಷ್ಟು ಹೋರಾಟ ಮಾಡಬೇಕಾಗಿ ಬಂದಿದೆ. ಕೊನೆಗೂ 'ಹೇಗೋ ಒಂದು' ಸಮನ್ಸ್ ನೀಡಿದರೂ ಕೂಡ ಆ ವ್ಯಕ್ತಿಯು ಸಮಿತಿಯ ಮುಂದೆ ಹಾಜರಾಗದಂತೆ ತಡೆಯುವಲ್ಲಿ ಕಾಣದ 'ಕೈ' ಗಳು ಕೊನೆಗೂ ಯಶಸ್ವಿಯಾದವು.

ಕಣ್ಣು ಮುಚ್ಚುವಿಕೆ

ಆರಂಭದಲ್ಲಿ ಈ ಪ್ರಕರಣದಲ್ಲಿ ಆರೋಪಿಗಳಾದ ವ್ಯಕ್ತಿಗಳ ದೂರವಾಣಿ ಕರೆಗಳ ದಾಖಲಾತಿಯನ್ನು ಪರಿಶೀಲಿಸಲು 'ತನಿಖಾ ಸಮಿತಿ' ಯ ಸದಸ್ಯರಿಗೆ ಮನಸ್ಸು, ಉತ್ಸಾಹ, ಎರಡೂ ಇರಲಿಲ್ಲ. ಅದೇ ಎಂದಿನಂತೆ ಇತರ ಸದಸ್ಯರ ಒತ್ತಾಯದ ಮೇರೆಗೆ ಈ ವರದಿ ತರಿಸಿಕೊಳ್ಳಲಾಯಿತು.

ಈ ದೂರವಾಣಿ ಕರೆ ದಾಖಲಾತಿ ಪರಿಶೀಲನೆ ನಡೆಸಿದರೆ ಆರೋಪಿ ಸಂಜೀವ್ ಸಕ್ಸೇನಾಗೂ, ಅಮರ್‌ಸಿಂಗ್‌ಗೂ ನಡುವೆ ಸಂಪರ್ಕ ಗಳಿರುವುದಕ್ಕೆ ಸಾಕಷ್ಟು ಸಾಕ್ಷಿಗಳು ದೊರೆತವು. ತನಿಖಾ ಸಮಿತಿಗೆ ಸತ್ಯ ಹುಡುಕುವ ಮನಸ್ಸಿದ್ದರೆ ಈ ಸಾಕ್ಷ್ಯಗಳ ಜಾಡು ಹಿಡಿದು ಇನ್ನಷ್ಟು ಮುಂದೆ ತನಿಖೆ ಮುಂದುವರೆಸಬೇಕಿತ್ತು.

ಸಮಿತಿ ಅದಕ್ಕೆ ಸಿದ್ಧವಿಲ್ಲ. ಬ್ಯಾಂಕಿನಿಂದ ಹಣವನ್ನು ಬಿಡಿಸಿಕೊಂಡಿ ರುವಾಗ ದಾಖಲಾಗುವ ಮ ತೆರಿಗೆ ಇತ್ಯಾದಿಗಳ ಆಧಾರದಲ್ಲಿಯೂ ಈ ವಿಚಾರದಲ್ಲಿ ತನಿಖೆ ನಡೆಸಲು ಅವಕಾಶವಿದೆ. ಇದು ಸಾಧ್ಯ ಎಂದು ಸ್ವತಃ ಅಂದಿನ ಹಣಕಾಸು ಮಂತ್ರಿಗಳು ಹೇಳಿದ್ದರೂ ಸಮಿತಿಯು ಈ ವಿಧಾನ ಬಗೆಗೆ ಕಣ್ಮುಚ್ಚಿ ಕೊಂಡಿತು, ಮುಂದುವರಿಯಲಿಲ್ಲ. ಸಮಿತಿಯು ತನಿಖೆ ಮುಂದುವರೆಸಲು ಅಗತ್ಯವಾದ ತಾಂತ್ರಿಕ ಪರಿಣತಿ ಹಾಗೂ ಸಾಧನ ಸಲಕರಣೆಗಳು ಮತ್ತು ಪರಿಣತರು ಸಮಿತಿಯೊಳಗೆ ಇಲ್ಲದ್ದರಿಂದ ವಿಚಾರಣೆಯನ್ನು ಸೂಕ್ತ ತನಿಖಾ ಸಮಿತಿಯಿಂದ ತನಿಖೆ ಮಾಡಿಸುವುದು ಸೂಕ್ತ ಎಂದು ಹೇಳಿದೆ. ಈ ಕೋರಿಕೆಯೇನೋ ಸರ್ವ ಸಮ್ಮತವಾದದ್ದು. ಆದರೆ ಮುಂದಿನ ತನಿಖೆಯಲ್ಲಿ ಅಮರ್‌ಸಿಂಗ್, ಅಹ್ಮದ್ ಪಟೇಲ್ ಅವರನ್ನು ಕುರಿತ ತನಿಖೆಯನ್ನು ಕೈಬಿಡಬೇಕೆಂಬ ಅಂಶಕ್ಕೆ ಎಲ್ಲರೂ ಒಪ್ಪಿಲ್ಲ. ತನಿಖಾ ಸಂಸ್ಥೆಯು ಇಡಿಯಾಗಿ ಒಟ್ಟು ಪ್ರಕರಣವನ್ನು ತನಿಖೆ ಮಾಡಬೇಕಾದ ಅಗತ್ಯವಿದೆ ಎಂದೂ ಅಸಮ್ಮತಿ ಟಿಪ್ಪಣಿಯಲ್ಲಿ ಒತ್ತಾಯಿಸಲಾಗಿದೆ. ಲೋಕಸಭಾ ಚುನಾವಣೆಗಳು ಹತ್ತಿರವಾಗುತ್ತಿವೆ. ಮತದಾರರ ಮುಂದೆ ಹೋಗುವಾಗ ಮುಖಕ್ಕೆ ಸಗಣಿ ಮೆತ್ತಿಕೊಂಡಿದ್ದರೂ ಯಾವುದಕ್ಕೂ ಕೈಯಲ್ಲಿ ಸಾಚಾತನದ ಸರ್ಟಿಫಿಕೇಟ್ ಇರುವುದು ಒಳ್ಳೆಯದು ಎಂದು ಈ ಪಕ್ಷಗಳು ಹಾಗೂ ಮುಖಂಡರು ಬಯಸಿದ್ದಾರೆ. ಪಾರ್ಲಿಮೆಂಟ್ ಸಮಿತಿಯು ವರದಿ ಅದಕ್ಕೆ ತಕ್ಕಂತಹ ವರದಿ ಕೊಟ್ಟಿದೆ.

2008 : ಒಂದು ಹಿನ್ನೋಟ 2009 ಕ್ಕೊಂದು ಮುನ್ನೋಟ


ವರ್ಷ 2008 ಬಹಳ ಕಷ್ಟದ ವರ್ಷವಾಗಿತ್ತು-ಭಾರತಕ್ಕೂ, ಜಗತ್ತಿಗೂ.

ಜಾಗತಿಕ ರಂಗದಲ್ಲಿ ಅದು ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ವರ್ಷ ಎಂದು ಈಗ ಇತಿಹಾಸ ಸೇರಿದೆ. 1930ರ ದಶಕದ 'ಮಹಾ ಕುಸಿತ'ದ ನಂತರದ ಅತಿ ದೊಡ್ಡ ಬಿಕ್ಕಟ್ಟು ಇದು ಎನ್ನಲಾಗುತ್ತದೆ. ಇದಕ್ಕೆ ಸಿಲುಕಿ ಕೋಟಿಗಟ್ಟಲೆ ಜನರ ಬದುಕು ಮೂರಾಬಟ್ಟೆಯಾಗಿದೆ. ಬಂಡವಾಳಶಾಹಿ ವ್ಯವಸ್ಥೆ ಎಂದೂ ಬಿಕ್ಕಟ್ಟಿನಿಂದ ಮುಕ್ತವಾಗಲು ಸಾಧ್ಯವಿಲ್ಲ, ಅದು ಶೋಷಣೆಯ ಮೇಲೆ ನಿಂತಿರುವ ವ್ಯವಸ್ಥೆ ಎಂಬುದು ಮತ್ತೊಮ್ಮೆ ಪ್ರದರ್ಶನಗೊಂಡಿತು.

ಇದು ಬಂಡವಾಳಶಾಹಿಯ ಬಗ್ಗೆ ಮಾರ್ಕ್ಸ್‌ವಾದದ ವಿಶ್ಲೇಷಣೆಯನ್ನು ಮತ್ತೊಮ್ಮೆ ಸಾಬೀತು ಮಾಡಿದೆ ಎನ್ನುವುದಕ್ಕಿಂತ ಬಂಡವಾಳಶಾಹಿಯ ಸ್ಥಾನದಲ್ಲಿ ಸಮಾಜವಾದವನ್ನು ತರಬೇಕೆಂಬ ಮಾರ್ಕ್ಸ್‌ವಾದಿ ಆದರ್ಶವನ್ನು ಮುಂಚೂಣಿಗೆ ಎಂಬುದು ಇಲ್ಲಿ ಮುಖ್ಯವಾದ ಅಂಶ. ಲ್ಯಾಟಿನ್ ಅಮೆರಿಕಾ ಮತ್ತು ಇತರೆಡೆಗಳಲ್ಲಿ ಸಾಮ್ರಾಜ್ಯಶಾಹಿಗಳ ನವ-ಉದಾರವಾದಿ ಅಜೆಂಡಾದ ವಿರುದ್ಧ ಕಾಣುತ್ತಿರುವ ಎಡಶಕ್ತಿಗಳ ಉಬ್ಬರ, ಜನಗಳ ಪ್ರತಿರೋಧ ಹೆಚ್ಚುತ್ತಿರುವುದರ ದ್ಯೋತಕ.

ಭಾರತದಲ್ಲಿ 2008ರಲ್ಲಿ ಮಹತ್ವದ ಬೆಳವಣಿಗೆಗಳು ಕಂಡು ಬಂದಿವೆ.

- ಅತ್ಯಂತ ಆತಂಕ ಮೂಡಿಸಿದ ಬೆಳವಣಿಗೆಗಳೆಂದರೆ ಭಯೋತ್ಪಾದಕ ದಾಳಿಗಳ ಅಬ್ಬರ. 2008ರಲ್ಲಿ ಮುಂಬೈ ದಾಳಿಗಳ ವರೆಗೆ ದೇಶ ವಿವಿಧೆಡೆ ಏಳು ಪ್ರಮುಖ ದಾಳಿಗಳನ್ನು ಕಂಡಿತು. ಅಲ್ಲದೆ ಕಾಬೂಲಿನಲ್ಲಿರುವ ಭಾರತದ ರಾಯಭಾರಿ ಕಚೇರಿಯ ಮೇಲೂ ದಾಳಿ ನಡೆಯಿತು. ಇವುಗಳಲ್ಲಿ ಅಧಿಕೃತ ಅಂಕಿ-ಅಂಶಗಳ ಪ್ರಕಾರ 377 ಜೀವಗಳು ಬಲಿಯಾಗಿವೆ. ಒಂದು ಸಾವಿರಕ್ಕೂ ಹೆಚ್ಚು ಜನ ಗಾಯಗೊಂಡಿದ್ದಾರೆ.
- ಕೆಲವು ಅಭೂತಪೂರ್ವ ನೈಸರ್ಗಿಕ ಪ್ರಕೋಪಗಳನ್ನು ಕೂಡಾ ದೇಶ ಕಂಡಿತು. ಕೋಸಿ ನದಿ ಪಾತ್ರ ಬದಲಿಸಿದ ಪರಿಣಾಮವಾಗಿ ಬಿಹಾರ ಮತ್ತು ಉತ್ತರ ಭಾರತದ ಹಲವೆಡೆ ಸಾವಿರಾರು ಮಂದಿ ಪ್ರಾಣ ಕಳಕೊಂಡರು. 28 ಲಕ್ಷ ಮಂದಿ ಮನೆ-ಮಾರು ಕಳಕೊಂಡರು. ಅಸ್ಸಾಂ, ಒರಿಸ್ಸಾ ಮುಂತಾದ ಕಡೆಗಳಲ್ಲಿಯೂ ಪ್ರವಾಹದಿಂದ ಭಾರಿ ನಷ್ಟವಾಗಿದೆ.
- ಭಾರತ- ಅಮೆರಿಕಾ ಪರಮಾಣು ವ್ಯವಹಾರ ಪೂರ್ಣಗೊಂಡಿತು. ಇದು ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಯ ಜಾಗತಿಕ ಭದ್ರತೆ ಮತ್ತು ಸಾಮರಿಕ ತಂತ್ರಗಳಲ್ಲಿ ಸೆಳೆದುಕೊಳ್ಳುವ ಪ್ರಯತ್ನದ ಭಾಗ. ನಮ್ಮ ಸಾರ್ವಭೌಮತೆ ಮತ್ತು ಸ್ವತಂತ್ರ ವಿದೇಶಾಂಗ ನೀತಿಗೆ ಕಂಟಕವಾಗಲಿದೆ. ಜತೆಗೆ ನಮ್ಮ ಸೀಮಿತ ಸಂಪನ್ಮೂಲಗಳ ಪೋಲು. ಜನಗಳ ಬದುಕನ್ನು ಉತ್ತಮಗೊಳಿಸಲು ಬೇಕಾದ ಹಣ ಪರಮಾಣು ಸಾಮಗ್ರಿಗಳನ್ನು ಪೂರೈಸುವ ಕಂಪನಿಗಳಿಗೆ ಲಾಭಗಳನ್ನು ಹೆಚ್ಚಿಸಲು ಹೋಗುವಂತಾಗಿದೆ
- 'ಹೊಳೆಯುವ ಭಾರತ' ಮತ್ತು 'ನರಳುವ ಭಾರತ'ದ ನಡುವಿನ ಕಂದರ ಮತ್ತಷ್ಟು ಹೆಚ್ಚಿತು. ಶತಕೋಟ್ಯಾಧಿಪತಿಗಳ ಸಂಖ್ಯೆಯೂ ಹೆಚ್ಚಿತು. ಮತ್ತೊಂದು ತುದಿಯಲ್ಲಿ ನಾಲ್ಕನೇ ಐದು ಭಾಗದಷ್ಟು ಜನಸಾಮಾನ್ಯರ ದಿನದ ಆದಾಯ 20 ರೂಪಾಯಿಯನ್ನೂ ದಾಟಲಿಲ್ಲ. ರೈತರ ಆತ್ಮಹತ್ಯೆಗಳು ನಿಲ್ಲಲಿಲ್ಲ. ಈಗಲೂ ಪ್ರತಿದಿನ ಒಂದು ಸಾವಿರಕ್ಕೂ ಹೆಚ್ಚು ಮಕ್ಕಳು ತಡೆಯಬಹುದಾದ ರೋಗಗಳಿಂದ ಸಾಯುತ್ತಿದ್ದಾರೆ.
- ಸಂಸತ್ತನ್ನು ನಮ್ಮ ಆಳುವ ವರ್ಗಗಳು ಉದ್ದೇಶಪೂರ್ವಕವಾಗಿ ಬುಡಮೇಲು ಮಾಡಲು ಹೊರಟಿದ್ದಾವೆಯೆ ಎಂಬ ಸಂದೇಹ ಈ ವರ್ಷ ಬಲಗೊಂಡಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ವಿಶ್ವಾಸ ಮತ ಗೆಲ್ಲಲು ನಗ್ನ ಕುದುರೆ ವ್ಯಾಪಾರಕ್ಕಿಳಿದುದನ್ನು ನೋಡಿದ್ದೇವೆ. ಇದು ನಮ್ಮ ದೇಶದ ರಾಜಕೀಯ ನೈತಿಕತೆಯನ್ನು ಅತೀ ಕೆಳಗಿನ ಮಟ್ಟಕ್ಕೆ ಇಳಿಸಿತು. ಅಷ್ಟೇ ಅಲ್ಲ, 2008ರಲ್ಲಿ ಸಂಸತ್ತು ಕೇವಲ 46 ಬಾರಿ ಸಭೆ ಸೇರಿತು. ಇದು ಸ್ವತಂತ್ರ ಭಾರತದ ಇತಿಹಾಸದಲ್ಲೇ ಒಂದು ವರ್ಷದಲ್ಲಿ ಅತ್ಯಂತ ಕಡಿಮೆ ಸಂಖ್ಯೆ ಎಂದು ದಾಖಲಾಗುತ್ತದೆ. ನಮ್ಮ ಸಂವಿಧಾನಿಕ ವ್ಯವಸ್ಥೆಯಲ್ಲಿ ಸಂಸತ್ತು ಶಾಸನಗಳನ್ನು ರಚಿಸುವುದು ಮಾತ್ರವಲ್ಲ, ಸಂಸತ್ತಿಗೆ ಆ ಮೂಲಕ ಜನತೆಗೆ ಸರಕಾರದ ಜವಾಬುದಾರಿಕೆಯನ್ನು ನಿಭಾಯಿಸುವಂತೆ ಮಾಡುತ್ತದೆ. ಇದು ಈಡೇರಲು ಸಂಸತ್ತು ಒಂದು ವರ್ಷದಲ್ಲಿ 100 ಬಾರಿಯಾದರೂ ಸಭೆ ಸೇರಬೇಕು ಎಂದು ಎಡಪಕ್ಷಗಳ ಆಗ್ರಹ. 2008ರ ವಿಶಿಷ್ಟತೆಯೆಂದರೆ ಈ ವರ್ಷ ಸಂಸತ್ತಿನ ಮಳೆಗಾಲದ ಅಧಿವೇಶನವಾಗಲೀ, ಚಳಿಗಾಲದ ಅಧಿವೇಶನವಾಗಲೀ ಇರಲೇ ಇಲ್ಲ. ಹೀಗಾಗಿರುವುದು ಸ್ವತಂತ್ರ ಭಾರತದಲ್ಲೇ ಮೊದಲ ಬಾರಿಗೆ. ಇನ್ನೊಂದು 'ಹೆಗ್ಗಳಿಕೆ' ಎಂದರೆ ಸಂಸತ್ತಿನ ಅತೀ ದೀರ್ಘ ಅಧಿವೇಶನ ನಡೆದದ್ದು ಕೂಡಾ 2008ರಲ್ಲೇ. ಜುಲೈ 21 ರಂದು ವಿಶ್ವಾಸ ಮತ ಚರ್ಚೆಗೆ ಆರಂಭವಾದ ಅಧಿವೇಶನ ಕೊನೆಗೊಂಡದ್ದು ಡಿಸೆಂಬರ್ 23ರಂದೇ. ಆದರೆ ಈ ದೀರ್ಘ ಅವಧಿಯಲ್ಲಿ ಅದು ಸಭೆ ಸೇರಿದ್ದು 18 ಬಾರಿ ಮಾತ್ರ! ಅಂದರೆ ಸರಕಾರ ಜನಗಳಿಗೆ ತನ್ನ ಉತ್ತರದಾಯಿತ್ವವನ್ನು ನಿಭಾಯಿಸಲಾಗದೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂಬ ಸಂದೇಹವನ್ನು ದೃಢಪಡಿಸುತ್ತಿದೆ. ಡಿಸೆಂಬರ್ 23 ರಂದು, ಅಂದರೆ ಅಧಿವೇಶನದ ಕೊನೆಯ ದಿನ ಲೋಕ ಸಭೆಯಲ್ಲಿ ಕೋಲಾಹಲದ ವಾತಾವರಣ ವಿದ್ದಾಗ ಕೇವಲ 10 ನಿಮಿಷಗಳಲ್ಲಿ ಯಾವುದೇ ಚರ್ಚೆಯಿಲ್ಲದೆ 11 ಮಸೂದೆಗಳನ್ನು ಮಂಡಿಸಿ ಅಂಗೀಕರಿಸ ಲಾಯಿತು! ಇದು ಹಿಂದೆಂದೂ ಕಾಣದ್ದು.
- ವಿಶ್ವದಲ್ಲೆಲ್ಲಾ ನವ-ಉದಾರವಾದಿ ತತ್ವದ ದಿವಾಳಿಕೋರತನ ಈಗಿನ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನಲ್ಲಿ ಬಯಲಾಗುತ್ತಿರುವಾಗಲೂ ಯುಪಿಎ ಸರಕಾರ ಅದೇ ನವ-ಉದಾರವಾದಿ ನೀತಿಗಳನ್ನು ಅನುಸರಿಸುತ್ತಿದೆ ಎಂಬುದು ವರ್ಷದ ಕೊನೆಗೆ ಮತ್ತೆ ಸ್ಪಷ್ಟವಾಗಿದೆ. ವಿಶ್ವದ ದೊಡ್ಡ-ದೊಡ್ಡ ವಿಮಾಕಂಪನಿಗಳು ದಿವಾಳಿಯಾಗುತ್ತಿರುವಾಗಲೂ ಯುಪಿಎ ಸರಕಾರ ಭಾರತದಲ್ಲಿ ವಿಮಾವಲಯದಲ್ಲಿ ವಿದೇಶಿ ನೇರ ಹೂಡಿಕೆಯನ್ನು 26ಶೇ.ದಿಂದ 49ಶೇ. ಕ್ಕೆ ಹೆಚ್ಚಿಸುವ ಮಸೂದೆಯನ್ನು ಡಿಸೆಂಬರ್ 22 ರಂದು ಮಂಡಿಸಿದೆ. ವಿಶ್ವದ ಪ್ರಬಲ ದೇಶಗಳ ದೊಡ್ಡ-ದೊಡ್ಡ ವಿಮಾಕಂಪನಿಗಳು ದಿವಾಳಿಯಿಂದ ತಪ್ಪಿಸಿಕೊಳ್ಳಲು ಆಯಾಯ ದೇಶಗಳ ಸರಕಾರಗಳ ಎದುರು ಕೈ ಚಾಚುತ್ತಿರುವ ಸನ್ನಿವೇಶದಲ್ಲೂ ಸರಕಾರದ ಕಿಂಚಿತ್ತೂ ನೆರವಿಲ್ಲದೆ ತನ್ನ ವಿಮಾದಾರರಿಗೆ ಸಂಪೂರ್ಣ ಭದ್ರತೆ ನೀಡಿರುವ, ಜತೆಗೆ ದೇಶದ ಮೂಲರಚನೆಗಳ ಅಭಿವೃದ್ಧಿಗೆ ಭಾರೀ ಹಣ ಸಂಗ್ರಹಿಸಿ ಕೊಟ್ಟಿರುವ ಭಾರತೀಯ ಜೀವ ವಿಮಾ ನಿಗಮ(ಎಲ್‌ಐಸಿ)ವನ್ನು ಖಾಸಗೀಕರಿಸಲು ಹಾದಿ ಮಾಡಿಕೊಡುವ ಇನ್ನೊಂದು ಮಸೂದೆಯನ್ನು ಕೂಡಾ ಅದೇ ದಿನ ಮಂಡಿಸಲಾಯಿತು.



ಇಂತಹ ಸನ್ನಿವೇಶದಲ್ಲಿ 2009 ಹೋರಾಟಗಳ ವರ್ಷವಾಗಬೇಕಾಗಿದೆ- ದೇಶದೊಳಗೆ ಜನಗಳ ಬದುಕನ್ನು ಉತ್ತಮಗೊಳಿಸುವ ಮತ್ತು ಭದ್ರತೆಯನ್ನು ಹೆಚ್ಚಿಸುವ ಹೋರಾಟಗಳು ಮತ್ತು ಭಾರತದಲ್ಲೂ, ಜಾಗತಿಕ ಮಟ್ಟದಲ್ಲೂ ವರ್ಗ ಬಲಾಬಲವನ್ನು ಸಮಾಜವಾದದ ಪರವಾಗಿ ಬದಲಿಸುವ ಹೋರಾಟಗಳು.

ಭಾರತದಲ್ಲಿ ಈ ಹೋರಾಟಗಳ ಗುರಿ ಸಹಜವಾಗಿಯೇ ಆಳುವ ವರ್ಗಗಳು ಪರ್ಯಾಯ ನೀತಿಗಳ ದಿಕ್ಕಿನಲ್ಲಿ ಸಾಗುವಂತೆ ಒತ್ತಡಗಳನ್ನು ತರುವುದು ಆಗಿರಬೇಕಾಗುತ್ತದೆ. ಇದು ಒಂದು ಪರ್ಯಾಯ ರಾಜಕೀಯ ವೇದಿಕೆಯಿಂದ ಮಾತ್ರ ಸಾಧ್ಯ. 2009 ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿವೆ. ಇವು ಭಾರತದ ರಾಜಕೀಯ ಇಂತಹ ನಿರ್ಣಾಯಕ ಬದಲಾವಣೆಯತ್ತ ಸಾಗುವಂತೆ ಮಾಡಲಿ ಎಂಬುದು ದೇಶದ ಪ್ರಜಾಪ್ರಭುತ್ವವಾದಿಗಳ ಆಶಯ. ಆಗ ಮಾತ್ರವೇ ಒಂದು ಉತ್ತಮ ಭಾರತದಲ್ಲಿ ಜನಗಳಿಗೆ ಒಂದು ಉತ್ತಮ ಬದುಕು ಸಾಧ್ಯವಾಗುತ್ತದೆ.

ಕಸಾಯಿಖಾನೆಗಳನ್ನು ಮುಚ್ಚುವುದು ಜನರ ಹಕ್ಕಿನ ಮೇಲಿನ ದಾಳಿ

ಬೆಂಗಳೂರಿನ ಕಸಾಯಿಖಾನೆಗಳನ್ನು ದಿನಾಂಕ 05.01.2009 ರಿಂದ ಮುಚ್ಚಲು ಕರ್ನಾಟಕ ಸರ್ಕಾರ ನಿರ್ಧರಿಸಿರುವುದರಿಂದ ಮಾಂಸಾಹಾರಿಗಳ ಆಹಾರದ ಹಕ್ಕಿನ ಮೇಲೆ ದಾಳಿ ನಡೆದಂತಾಗಿದೆ. ಹಾಗೂ ಸುಮಾರು 4 ಲಕ್ಷ ಜನರ ಉದ್ಯೋಗಕ್ಕೆ ಗಂಡಾಂತರವಾಗಿದೆ. ಆದ್ದರಿಂದ ಸರ್ಕಾರ ಕೂಡಲೇ ತನ್ನ ಆದೇಶವನ್ನು ಹಿಂತೆಗೆದುಕೊಳ್ಳಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

1976 ರ ಕರ್ನಾಟಕ ಮುನಿಸಿಪಲ್ ... ಕಸಾಯಿಖಾನೆಗಳ ಸ್ಥಾಪನೆಯಾಗಿದೆ. ಅಂದರೆ ಕಸಾಯಿಖಾನೆಗಳನ್ನು ಸ್ಥಾಪಿಸಲು ಸರ್ಕಾರವೇ ಕಾನೂನು ರಚಿಸಿದೆ. ಈಗ ದಿಡೀರನೆ ಮುಚ್ಚಲು ಸರ್ಕಾರ ನಿರ್ಧರಿಸಿರುವುದರಿಂದ ಸರ್ಕಾರ ತಾನೇ ರಚಿಸಿದ ಕಾನೂನನ್ನು ಉಲ್ಲಂಘಿಸಿದಂತಾಗಿದೆ.

ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಿಜೆಪಿ ಮತ್ತು ಸಂಘಪರಿವಾರದ ಸಂಸ್ಥೆಗಳು ಹಾಗೂ ವ್ಯಕ್ತಿಗಳು ಇಲ್ಲ ಸಲ್ಲದ ತಕರಾರುಗಳನ್ನೆತ್ತಿ ಮಾಂಸಾಹಾರಿಗಳಿಗೆ ಮಾಂಸ ಸಿಗದಂತೆ ಮಾಡಲಾಗುತ್ತಿದೆ. ಇದರಿಂದ ಇನಿತರೆ ಆಹಾರ ಪದಾರ್ಥಗಳಾದ ತರಕಾರಿ, ಮೀನು, ಕೋಳಿ ಮಾಂಸದ ಬೆಲೆ ಗಗನಕ್ಕೇರುತ್ತಿದೆ.

ಇದೂ ಅಲ್ಲದೆ ಕಸಾಯಿಖಾನೆ ಮುಚ್ಚುವಿಕೆ, ಗೋಸಾಗಣಿಕೆಗೆ ತಡೆ ಇತ್ಯಾದಿ ಕೃತ್ಯಗಳ ಮೂಲಕ ಕೋಮು ವಿಭಜನೆ ತರಲು ಬಿಜೆಪಿ ಪ್ರಯತ್ನಿಸುತ್ತಿದೆ. ಅಂದರೆ ಇದರಲ್ಲಿ ರಾಜಕೀಯ ದುರುದ್ದೇಶವೂ ಅಡಗಿದೆ.

ಬೆಂಗಳೂರು ನಗರ ಒಂದರಲ್ಲೇ 50 ಲಕ್ಷಕ್ಕೂ ಹೆಚ್ಚು ಮಾಂಸಾಹಾರಿಗಳು ಇದ್ದಾರೆ. ಅವರು ತಿನ್ನುವ ಆಹಾರವನ್ನು ಅಡೆ-ತಡೆ ಇಲ್ಲದೆ ಲಭ್ಯವಾಗುವಂತೆ ಮಾಡುವುದು ಸರ್ಕಾರದ ಸಂವಿಧಾನ ಬದ್ಧ ಜವಾಬ್ದಾರಿಯಾಗಿದೆ. ತಾಂತ್ರಿಕ ಕಾರಣಗಳನ್ನು ನೀಡಿ ಮಾಂಸಾಹಾರ ಸಿಗದಂತೆ ಮಾಡುವ ಬಿಜೆಪಿ ಸರ್ಕಾರದ ಕುಟಿಲ ನೀತಿಯನ್ನು ಸಿಪಿಐ(ಎಂ) ಖಂಡಿಸಿದೆ.

ಆದ್ದರಿಂದ ಕಸಾಯಿಖಾನೆಯನ್ನು ಮುಚ್ಚುವ ಬಡ ಜನವಿರೋಧಿ ಕೃತ್ಯದಿಂದ ಸರ್ಕಾರ ಕೂಡಲೇ ಹಿಂದಕ್ಕೆ ಸರಿಯಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ. ಅದೇ ಸಂದರ್ಭದಲ್ಲಿ ಸುಸಜ್ಜಿತ, ಸ್ವಚ್ಛ ಕಸಾಯಿಖಾನೆಯನ್ನು ಕಟ್ಟಲು ಸರ್ಕಾರ ಹಣ, ಜಾಗ ನೀಡಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಈ ಹಿನ್ನೆಲೆಯಲ್ಲಿ ಜನರು ಪ್ರತಿಭಟನೆಗೆ ಮುಂದಾಗಿದ್ದು ಸಿಪಿಐ(ಎಂ) ಜನರ ಹೋರಾಟವನ್ನು ಬೆಂಬಲಿಸುತ್ತದೆ ಎಂದು ತಿಳಿಸಿದೆ.

ಕೋಮುಶಕ್ತಿಗಳ ದಮನಕ್ಕೆ ಜಾತ್ಯಾತೀತ ಶಕ್ತಿಗಳು ದೌರ್ಬಲ್ಯ ಬದಿಗೊತ್ತಿ ಒಂದಾಗಲಿ - ಎ.ಕೆ.ಸುಬ್ಬಯ್ಯ

ದೇಶದಲ್ಲಿ ಕ್ಷಿಪ್ರ ಗತಿಯಲ್ಲಿ ಬೆಳೆಯುತ್ತಿರುವ ಕೋಮುವಾದಿ ಶಕ್ತಿಗಳನ್ನು ದೂಳಿಪಟ ಮಾಡಲು ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಜಾತ್ಯಾತೀತ ನಿಲುವಿನ ರಾಜಕೀಯ ಪಕ್ಷಗಳು ತಮ್ಮಲ್ಲಿರುವ ದೌರ್ಬಲ್ಯವನ್ನು ಕಿತ್ತೊಗೆದು ಒಂದಾಗಬೇಕು. ಇಲ್ಲದಿದ್ದರೆ ದೇಶಕ್ಕೆ ಗಂಡಾಂತರ ತಪ್ಪಿದ್ದಲ್ಲ ಎಂದು ವಿಚಾರವಾದಿಗಳು, ಖ್ಯಾತ ವಕೀಲರೂ ಆದ ಎ.ಕೆ.ಸುಬ್ಬಯ್ಯ ಅವರು ಎಚ್ಚರಿಕೆ ನೀಡಿದರು.

ಮಡಿಕೇರಿಯ ಕಾವೇರಿ ಕಲಾ ಕ್ಷೇತ್ರದಲ್ಲಿ ಡಿ. 26 ರಂದು ವಿವಿಧ ಸಂಘಟನೆಗಳಿಂದ ಆಯೋಜಿಸಲಾಗಿದ್ದ ಭಾವೈಕ್ಯತಾ ಸಮಾವೇಶದಲ್ಲಿ ಮುಖ್ಯ ಭಾಷಣಕಾರರಾಗಿ ಆಗಮಿಸಿ ಮಾತನಾಡಿದ ಅವರು, ಕೊಡಗು ಜಿಲ್ಲೆಯ ಶಾಂತಿ, ಸೌಹಾರ್ದತೆಗೆ ಧಕ್ಕೆ ತರುವ ಕೆಲಸಗಳು ಪ್ರಸ್ತುತ ನಡೆಯುತ್ತಿದೆ. ಬಿಜೆಪಿ ಪಕ್ಷದವರೇ ಕಾವೇರಿ ಸೇನೆಯನ್ನು ಹುಟ್ಟುಹಾಕಲು ಕಾರಣ. ಮತೀಯ ಮತ್ತು ಭಾಷೆಯ ಹೆಸರಿನಲ್ಲಿ ಕೊಡಗಿನಲ್ಲಿ ಅಶಾಂತಿ ಮೂಡಿಸಲು ಕೆಲ ಶಕ್ತಿಗಳು ಷಡ್ಯಂತ್ರ ರೂಪಿಸುತ್ತಿದ್ದು, ಇದಕ್ಕೆ ಪೊಲೀಸ್ ಅಧಿಕಾರಿಗಳು ಸಹಕಾರ ನೀಡುತ್ತಿದ್ದಾರೆ ಎಂದು ಕಟುವಾಗಿ ಟೀಕಿಸಿದರು.

ಸೋಮವಾರಪೇಟೆ ತಾಲ್ಲೂಕಿನ ಹೊಸ ತೋಟದಲ್ಲಿ ಕೇಸರಿ ಧ್ವಜ ಹಾರಿಸಿದ್ದನ್ನು ಅಪಹರಿಸಿರುವ ಪ್ರಕರಣ ಎಂಎಲ್‌ಸಿ ಚುನಾವಣೆಯ ಫಲಿತಾಂಶ ಬಂದ ಮಾರನೇ ದಿನವೇ ಕೋಮು ಗಲಭೆ ಹುಟ್ಟಿಸಲು ಕೆಲವರು ಮಾಡಿದ ಷಡ್ಯಂತ್ರವಾಗಿದೆ. ಈ ಬಗ್ಗೆ ಸೋಮವಾರಪೇಟೆಯಲ್ಲಿ ಪ್ರತಿಭಟನಾ ಸಭೆ ನಡೆಸಲಾಗಿದೆ. ಕೊಡ್ಲಿಪೇಟೆಯಲ್ಲೂ ಕಳೆದ ವಾರ ಕೋಮು ಸೌಹಾರ್ದತಾ ಸಭೆಯನ್ನು ನಡೆಸಿದ್ದೇವೆ ಎಂದರು.

ಹಿಂದೂ ಜಾಗರಣಾ ವೇದಿಕೆಯ ಸಂಚಾಲಕ ಜಗದೀಶ್ ಕಾರಂತ್ ಅವರು ಕೊಡ್ಲಿಪೇಟೆಯಲ್ಲಿ ಒಂದು ವರ್ಗದ ಜನರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಅದನ್ನು ಸಭೆಯಲ್ಲಿದ್ದ ಕ್ಷೇತ್ರದ ಶಾಸಕರು ಖಂಡಿಸಲಿಲ್ಲ. ಸಂವಿಧಾನಕ್ಕೆ ಶಾಸಕನಾದ ವ್ಯಕ್ತಿ ಮಾಡಿದ ಅಪಚಾರ ಅದಾಗಿದೆ ಎಂದು ಹೇಳಿದರು.

ಕೊಡಗಿನ ಪರಿಸರವಾದಿಗಳೊಂದಿಗೆ ಸೇರಿಕೊಂಡು ಕಾವೇರಿ ಸೇನೆ ಜಿಲ್ಲೆಯ ಭಾವೈಕ್ಯತೆಯನ್ನು ಕೆಡಿಸಲು ಹೊರಟಿದೆ. ಕಾವೇರಿ ಸೇನೆ ಡೋಂಗಿ ಪರಿಸರವಾದಿಗಳ ಆಮಿಷಕ್ಕೆ ಒಳಗಾಗಿ ಕಾರ್ಯ ನಿರ್ವಹಿಸುತ್ತಿದೆ. ಪುಂಡರ ಕೂಟದಂತೆ ಸಂಘಟನೆ ಕೆಲಸ ಮಾಡುತ್ತಿದೆ ಎಂದರು.

ಕಾಫಿ ಬೆಳೆಗಾರರಿಗೆ ಬೆದರಿಕೆ ಪತ್ರವನ್ನು ನಕ್ಸಲೈಟ್ ಹೆಸರಿನಲ್ಲಿ ಕಳುಹಿಸುವ ಮೂಲಕ ಕೊಡವರ ಗುತ್ತಿಗೆ ಹಿಡಿದಂತೆ ಮಾತನಾಡುವ ಸಂಘಟನೆ ಕೊಡವರನ್ನು ಸುಲಿಗೆ ಮಾಡಲು ಹೊರಟಿದೆ ಎಂದು ಟೀಕಿಸಿದರು.

ಬಡವರಿಗೆ ನಿವೇಶನ ಬೇಕು

ಕೊಡಗಿನ ಕಾಫಿ ತೋಟಗಳಲ್ಲಿ ಕೇರಳದಿಂದ ಬಂದವರು, ತಮಿಳುನಾಡಿನವರು ತುಳು ನಾಡಿನವರು ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಅವರಿಗೆ ಸೂರು, ನಿವೇಶನ ನೀಡುವುದು ಸರಕಾರದ ಕರ್ತವ್ಯವಾಗಿದೆ. ಸರಕಾರಿ ಪೈಸಾರಿ ಜಮೀನು ಕೊಡಗಿನಲ್ಲಿ 35 ಸಾವಿರ ಎಕರೆ ಇದೆ. ಅದನ್ನು ನೀಡಲು ಸರಕಾರ ಮುಂದಾಗಿಲ್ಲ ಎಂದು ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಗುರುಶಾಂತ್ ಹೇಳಿದರು. ಅನ್ಯ ಭಾಷಿಕರಾದ ದುಡಿಯುವ ವರ್ಗದವರನ್ನು 2ನೇ ದರ್ಜೆ ವ್ಯಕ್ತಿಗಳಾಗಿ ನೋಡುವುದು ಸಂವಿಧಾನದ ಆಶಯಗಳಿಗೆ ವಿರುದ್ಧವಾದುದು ಎಂದರು.

ಈ ದೇಶದ ದೊಡ್ಡ ಪತ್ರಿಕೆಗಳು ಅಧಿಕಾರಸ್ಥರ ಅಡಿಯಾಳಾಗಿ ಕೆಲಸ ಮಾಡುತ್ತಿರುವುದು ಕಾಣಬಹುದಾಗಿದೆ. ದೊಡ್ಡ ಪತ್ರಿಕೆಗಳು ಮಲೀನವಾಗುತ್ತಿರುವುದರಿಂದ ಸಮಾಜದ ಸ್ವಾಸ್ಥ್ಯ ಕೆಡುತ್ತಿದೆ ಎಂದರು.

ಜಿಲ್ಲಾ ಪಂಚಾಯ್ತಿ ಸದಸ್ಯ ವಿ.ಪಿ.ಶಶಿಧರ್ ಅವರು ಮಾತನಾಡಿ ಯಾವುದೇ ಸಂಘಟನೆ ಸಂವಿಧಾನದಡಿ ನ್ಯಾಯಬದ್ಧ ಜನಪರ ಹೋರಾಟ ಮಾಡುವ ಹಕ್ಕನ್ನು ಪಡೆದಿದೆ. ಆದರೆ ಇನ್ನೊಂದು ಸಂಘಟನೆಯ ಧ್ವನಿ ಅಡಗಿಸುವ ಕೆಲಸವನ್ನು ಕಾವೇರಿ ಸೇನೆ ಮಾಡುತ್ತಿದೆ. ಕೊಡಗಿನ ಅಭಿವೃದ್ಧಿಗೆ ರೈಲ್ವೆ ಸಂಪರ್ಕ ಅವಶ್ಯವಾದರೆ ಅದನ್ನು ಬೇಡವೆನ್ನಲು ಇವರ್ಯಾರು? ತೋಲ್ಬಲ ಪ್ರದರ್ಶಿಸಿ ಸರ್ವಾಧಿಕಾರಿ ಧೋರಣೆ ತಾಳಿದರೆ ಅದಕ್ಕೆ ಜಿಲ್ಲೆಯ ಜನತೆ ತಕ್ಕ ಉತ್ತರ ನೀಡಲಿದ್ದಾರೆ. ಜಾತಿ, ಮತ ಧರ್ಮದ ಹೆಸರಿನಲ್ಲಿ ಮನಸ್ಸುಗಳ ಮಧ್ಯೆ ಅಡ್ಡಗೋಡೆ ನಿರ್ಮಿಸುತ್ತಿರುವುದು ಜಿಲ್ಲೆಯ ಹಿತದೃಷ್ಟಿಯಿಂದ ಮಾರಕವಾಗಿದೆ ಎಂದರು.

ಕಾವೇರಿ ಸೇನೆಯ ಪ್ರಮುಖರು ಡಿವೈಎಫ್ ಕಾರ್ಯದರ್ಶಿ ಭರತ್ ಅವರ ಮೇಲೆ ಪ ಭವನದ ಬಳಿಯಲ್ಲೇ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಯತ್ನಿಸಿದರೂ ಕೊಡಗಿನ ಪತ್ರಿಕೆಗಳಲ್ಲಿ ಅದು ಸುದ್ದಿಯಾಗದಿರುವುದು ದುರಂತ. ಪತ್ರಿಕಾ ಮಾಧ್ಯಮದವರಿಗೆ ಸಾಮಾಜಿಕ ಜವಾಬ್ದಾರಿ ಇದೆ.

ಪುಟ 15ಕ್ಕೆ

ಮಂಗಳೂರು

ಧೂಮಪಾನ ವಿರೋಧಿ ಕಾನೂನಿಗೆ ತಿದ್ದುಪಡಿ ಒತ್ತಾಯಿಸಿ ಬೀಡಿ ಕಾರ್ಮಿಕರ ಬೃಹತ್ ಪ್ರದರ್ಶನ

2003ರ ಧೂಮಪಾನ ವಿರೋಧಿ ಕಾನೂನಿನ 6ಬಿ ಯಿಂದ 9ರ ವರೆಗಿನ ಕಲಮುಗಳಿಂದ ಬೀಡಿಗೆ ವಿನಾಯಿತಿ ನೀಡಲು ಕಾನೂನಿಗೆ ತಿದ್ದುಪಡಿ ಮಾಡಬೇಕು, ಬೀಡಿ ಕಾರ್ಮಿಕರ 10 ಅಂಶಗಳ ಬೇಡಿಕೆಯನ್ನು ಈಡೇರಿಸಬೇಕು, ಪಿಂಚಣಿ ಕಾಯಿದೆಯಲ್ಲಿ ಮಾಡಲಾದ ಕಾರ್ಮಿಕ ವಿರೋಧಿ



ಬದಲಾವಣೆಗಳನ್ನು ರದ್ದು ಮಾಡಬೇಕು ಹಾಗೂ ಬೀಡಿ ಕಾರ್ಮಿಕರ ಕಲ್ಯಾಣ ಮಂಡಳಿಯ ಕೇಂದ್ರ ಸಲಹಾ ಸಮಿತಿಯು ಸಭೆಯನ್ನು ತಕ್ಷಣ ಕರೆಯಬೇಕೆಂದು ಒತ್ತಾಯಿಸಿ ರಾಷ್ಟ್ರವ್ಯಾಪಿ ಚಳುವಳಿ ನಡೆಸಲು ಅಖಿಲ ಭಾರತ ಬೀಡಿ ಕಾರ್ಮಿಕರ ಒಕ್ಕೂಟವು ನೀಡಿದ ಕರೆಗೆ ಅನುಗುಣವಾಗಿ 2008 ಡಿಸೆಂಬರ್ 30ರಂದು ಮಂಗಳೂರಿನ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಬೀಡಿ ಕಾರ್ಮಿಕರ ಬೃಹತ್ ಪ್ರದರ್ಶನ ನಡೆಸಲಾಯಿತು. ಜಿಲ್ಲೆಯ ಎಲ್ಲಾ ಭಾಗಗಳಿಂದ ಬಂದ ಸುಮಾರು ಮೂರು ಸಾವಿರ ಬೀಡಿ ಕಾರ್ಮಿಕ ಮಹಿಳೆಯರು ಸುಡು ಬಿಸಿಲನ್ನು ಲೆಕ್ಕಿಸದೆ ಸ್ಫೂರ್ತಿದಾಯಕವಾಗಿ ಘೋಷಣೆಗಳನ್ನು ಕೂಗುತ್ತಾ ಪ್ರದರ್ಶನ ಮತ್ತು ಸಭೆಯಲ್ಲಿ ಭಾಗವಹಿಸಿದರು.

ಪ್ರದರ್ಶನದ ನಂತರ ನಡೆದ ಸಭೆಯ ಅಧ್ಯಕ್ಷತೆಯನ್ನು ಎಸ್.ಕೆ.ಬೀಡಿ ವರ್ಕರ್ಸ್ ಫೆಡರೇಷನ್‌ನ ಅಧ್ಯಕ್ಷರಾದ ಜೆ.ಬಾಲಕೃಷ್ಣ ಶೆಟ್ಟರು ವಹಿಸಿದ್ದರು. ಸಿಐಟಿಯು ರಾಜ್ಯಾಧ್ಯಕ್ಷ ಬಿ.ಮಾಧವ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಧೂಮಪಾನ ನಿಷೇಧದ ಹೆಸರಿನಲ್ಲಿ ಸಾರ್ವಜನಿಕರಲ್ಲೂ ಬೀಡಿ ಕಾರ್ಮಿಕರಲ್ಲೂ ಸ್ಥಾಪಿತ ಹಿತಾಸಕ್ತಿಗಳು ಗೊಂದಲ ಹುಟ್ಟಿಸುತ್ತಿರುವುದನ್ನು ಖಂಡಿಸಿದರು. ನಿರ್ದಿಷ್ಟವಾಗಿ ಪಟ್ಟಿ ಮಾಡಲಾದ ಸಾರ್ವಜನಿಕ ಸ್ಥಳಗಳಾದ ಸಭಾಭವನಗಳು, ಸಾರ್ವಜನಿಕ ಕಛೇರಿಗಳು, ಆಸ್ಪತ್ರೆ, ಕೋರ್ಟು, ಹೋಟೆಲ್ ಇತ್ಯಾದಿಗಳಲ್ಲಿ ಧೂಮಪಾನಕ್ಕೆ ನಿಷೇಧವಿದೆ. ಮುಕ್ತ ಪ್ರದೇಶಗಳಿಗೆ ನಿಷೇಧ ಅನ್ವಯವಾಗುವುದಿಲ್ಲವೆಂದು ಕಾನೂನಿನಲ್ಲೇ ಸ್ಪಷ್ಟಪಡಿಸಲಾಗಿದೆ ಎಂದು ಅವರು ವಿವರಿಸಿದರು. ಬೀಡಿ ಲೇಬಲ್‌ನ ಮೇಲೆ ತಲೆಬುರುಡೆ, ಎಲುಬು, ನಿಕೋಟಿನ್ ಮತ್ತು ಟಾರ್‌ನ ಪ್ರಮಾಣ, ಎಚ್ಚರಿಕೆ ಇತ್ಯಾದಿಗಳನ್ನು ಮುದ್ರಿಸಬೇಕೆಂದು ವಿಧಿಸುವ 6 ಬಿಯಿಂದ 9ವರೆಗಿನ ಕಲುಮುಗಳಿಂದ ಬೀಡಿಗೆ ವಿನಾಯಿತಿ ನೀಡಬೇಕೆಂದು ಸಿಐಟಿಯು ಒತ್ತಾಯಿಸುತ್ತದೆ ಎಂದು ಅವರು ಸ್ಪಷ್ಟಪಡಿಸಿದರು. 2001ರಲ್ಲಿ ಪಾರ್ಲಿಮೆಂಟಿಗೆ ಮೆರವಣಿಗೆಯಲ್ಲಿ ಹೋಗಿ ಸರ್ಕಾರಕ್ಕೆ ಸಲ್ಲಿಸಿದ ಬೀಡಿ ಕಾರ್ಮಿಕರ 10 ಅಂಶಗಳ ಬೇಡಿಕೆಯು ಬೀಡಿ ಮಾಲಿಕರ ವಿರೋಧದಿಂದಾಗಿ ಮತ್ತು ಸರ್ಕಾರದ ಅಸಡ್ಡೆ ನೀತಿಯಿಂದಾಗಿ ನೆನೆಗುದಿಗೆ ಬಿದ್ದಿದೆ. ಇತರ ಪ್ರಶ್ನೆಗಳು ಉದ್ಭವಿಸಿದ ಕಾರಣಕ್ಕಾಗಿ ಈ ಬೇಡಿಕೆಗಳ ಮಹತ್ವ ಯಾವುದೇ ಕಾರಣಕ್ಕೂ ಕಡಿಮೆಯಾಗುವುದಿಲ್ಲ ಎಂದು ಅವರು ಹೇಳಿದರು. ಕಲ್ಯಾಣ ನಿಧಿಯಿಂದ ನೀಡುವ ಸವಲತ್ತುಗಳಾದ ವಿದ್ಯಾರ್ಥಿ ವೇತನ, ಮನೆಕಟ್ಟಲು ಸಹಾಯ, ವೈದ್ಯಕೀಯ ವೆಚ್ಚಗಳು ಇತ್ಯಾದಿಗಳ ಪಾವತಿಯಲ್ಲಿ ವಿಪರೀತ ವಿಳಂಬಗಳಾಗುತ್ತಿದೆ. ಇವುಗಳನ್ನು ಚರ್ಚಿಸಲು ಲಭ್ಯವಿರುವ ವೇದಿಕೆಯಾದ ಕೇಂದ್ರ ಸಲಹಾ ಸಮಿತಿಯ ಸಭೆಯನ್ನು ಕಳೆದ ಒಂದೂವರೆ ವರ್ಷದಿಂದ ಕರೆದಿಲ್ಲವೆಂದು ಹೇಳಿದ ಅವರು, ತಕ್ಷಣ ಸಭೆ ಕರೆಯುವಂತೆ ಸರ್ಕಾರವನ್ನು ಒತ್ತಾಯಿಸಿದರು.


ಸಿಐಟಿಯು ಜಿಲ್ಲಾಧ್ಯಕ್ಷ ಕೆ.ಆರ್.ಶ್ರೀಯಾನ್ ಅವರು ಮಾತನಾಡುತ್ತಾ, ಪಿಂಚಣಿ ಕಾನೂನಿನಲ್ಲಿ ಮಾಡಲಾದ ಕಾರ್ಮಿಕ ವಿರೋಧಿ ಬದಲಾವಣೆಗಳನ್ನು ಖಂಡಿಸಿದರು. ಸಭೆಯನುದ್ದೇಶಿಸಿ ಜಿಲ್ಲಾ

ಫೆಡರೇಷನ್ನಿನ ಉಪಾಧ್ಯಕ್ಷ ಯು.ಬಿ.ಲೋಕಯ್ಯ ಜಿಲ್ಲಾ ಕಾರ್ಯದರ್ಶಿ ಸುಕುಮಾರ್, ಜತೆ ಕಾರ್ಯದರ್ಶಿ ರಮಣಿ ಮಾತನಾಡಿದರು. ಬಿ.ಎಂ.ಭಟ್ ವಂದಿಸಿದರು. ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಉಪಸ್ಥಿತರಿದ್ದರು.

ಸಭೆಯ ನಂತರ ಸಂಗಾತಿಗಳಾದ ಬಿ.ಮಾಧವ, ಕೆ.ಆರ್.ಶ್ರೀಯಾನ್, ಜೆ.ಬಾಲಕೃಷ್ಣ ಶೆಟ್ಟಿ, ಸುಕುಮಾರ್, ರಮಣಿ, ಪದ್ಮಾವತಿ ಶೆಟ್ಟಿ, ಬಾಬುದೇವಾಡಿಗ, ಬಿ.ಎಂ.ಭಟ್, ಸದಾಶಿವದಾಸ್, ಗಂಗಯ ಅಮೀನ್, ರಾಮಣ್ಣ ವಿಟ್ಲ, ಜಾನಕಿ, ವಿಮಲ, ಸಂಜೀವ ಬಂಗೇರ, ಭಾರತಿ ಬೋಳಾರ, ಜಯಂತ ನ್ಯಾಕ್, ಜಯಂತಿ ಬಿ.ಶೆಟ್ಟಿ ಮೊದಲಾದವರನ್ನೊಳಗೊಂಡ ನಿಯೋಗವು ಜಿಲ್ಲಾಧಿಕಾರಿ ಎಂ.ಮಹೇಶ್ವರ ರಾವ್ ಅವರನ್ನು ಭೇಟಿಯಾಗಿ ಮನವಿ ಅರ್ಪಿಸಿತು.

■ ಬಿ.ಮಾಧವ

ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವ ಸಿಐಟಿಯು ರಾಜ್ಯ ಅಧ್ಯಕ್ಷರಾದ ಬಿ.ಮಾಧವ



ನೈಸ್ ಸುಲಿಗೆ - ಜನರು ಬಲೆಗೆ

ಸಾರ್ವಜನಿಕ ಅತ್ಯಾವಶ್ಯಕ ಬಳಕೆಯ, ಆರ್ಥಿಕ ಚಟುವಟಿಕೆಗಳ ಮೂಲ ಸೌಕರ್ಯಗಳಂತಹ ಪ್ರಮುಖ ರಂಗವನ್ನು ಖಾಸಗೀ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ಒಪ್ಪಿಸಿದರೆ ಏನೆಲ್ಲಾ ಸಂಕಷ್ಟಗಳು ಎದುರಾಗಲಿವೆ ಎಂಬುದಕ್ಕೆ ಒಂದು ಜ್ವಲಂತ ಉದಾಹರಣೆ ಅಶೋಕ್ ಖೇಣಿಯ ರಸ್ತೆಯ ಹಗಲು ದರೋಡೆ ಪ್ರಕರಣ. ಸರ್ಕಾರದ ಸವಲತ್ತುಗಳು, ಭೂಮಿಯನ್ನು ಪಡೆದುಕೊಂಡ 'ನೈಸ್' ಖೇಣಿ ಇದೀಗ ಮೈಸೂರು ರಸ್ತೆಗೆ ಹೊಂದಿಕೊಂಡಿರುವ ಫೆರಿಫರಲ್ ರಸ್ತೆ ಬಳಕೆಗೆ ಎಲ್ಲೂ ಇಲ್ಲದ ರೇಟು ನಿಗದಿಪಡಿಸಿ ಲೂಟಿಗೆ ಇಳಿದಿದ್ದಾನೆ. ಸರ್ಕಾರವಿನ್ನೂ ಆತ ಕೊಟ್ಟ ದರಗಳಿಗೆ ಅಧಿಕೃತ ನೋಟಿಫಿಕೇಶನ್ ಹೊರಡಿಸಿಯೇ ಇಲ್ಲ. ಆದರೂ ತನ್ನದೇ ಅಂತಿಮ ತೀರ್ಮಾನ ಅಧಿಕೃತ ಎನ್ನುವಲ್ಲಿ ಸರ್ಕಾರದ ತಲೆಯ ಮೇಲೂ ಕೈಯಿಟ್ಟಿರುವುದನ್ನು ತೋರಿಸಿದ್ದಾನೆ.

ಖೇಣಿ ಪ್ರಕಟಿಸಿದ ದರಗಳೂ ಏಕಪಕ್ಷೀಯ. ಈ ದರಗಳು ವಿಪರೀತ. ಎಲ್ಲೂ ಇಲ್ಲದ್ದು ಎಂದು ಪ್ರತಿಭಟನೆ ಹೆಚ್ಚಾದಾಗ ಶೇ.20 ರಿಂದ 25 ರಷ್ಟು ಕಡಿತ ಮಾಡಿದ್ದೇನೆಂದು ಉದಾರತೆ ತೋರಿದ್ದಾನೆ. ಈ ಕಡಿತ ಎಂಬುದು ಕೇವಲ ನಾಮಕಾವಸ್ತೆ. ದೇಶದ ಇತರೆಡೆಯ ರಾಷ್ಟ್ರೀಯ ಹೆದ್ದಾರಿ ಬಳಕೆಗೆ ಕಿ.ಮೀ.ಗೆ ರೂ.1.40 ಇದ್ದರೆ ಖೇಣಿ ರೋಡ್‌ಗೆ ರೂ 4.90 ಪೈಸೆ ತೆರಬೇಕು. ಕೆಲವೆಡೆ ರೂ.1.70 ಪೈಸೆ ಇದ್ದರೆ ಇಲ್ಲಿ 8 ರೂ. ತೆರಬೇಕು. ಅಂದರೆ ಬನ್ನೇರುಘಟ್ಟ, ಹೊಸೂರು ರಸ್ತೆ, ಮೈಸೂರು ರೋಡ್, ಇದಕ್ಕೆ ಏನಿಲ್ಲವೆಂದರೂ 7.94 ಕಿ.ಮೀ. ಗೆ ಕಾರೊಂದು ಚಲಿಸಿದರೆ ರೂ.15 ತೆರಬೇಕು. ಬಸ್‌ಗೆ ಕಿ.ಮೀ.ಗೆ 5.53 ಪೈಸೆ. ಆದರೆ ರಾಷ್ಟ್ರೀಯ ಹೆದ್ದಾರಿ ಗುರುಗಾಂವ್- ದೆಹಲಿಯಂತಲ್ಲಿ (ಅಷ್ಟಪಥ ರಸ್ತೆ) ಕಾರಿಗೆ 65 ಪೈಸೆ, ಬಸ್, ಟ್ರಕ್‌ಗಳಿಗೆ 2.39, 1.83 ಇದೆ.

ಹೀಗಿದ್ದರೂ ಖೇಣಿಗೆ ತನ್ನದೇ ಅತ್ಯಂತ ಕಡಿಮೆ ಎಂಬ ವಾದ. ಯಾರು ಏನೇ ಹೇಳಿದರೂ ಪ್ರತಿಭಟಿಸಿದರೂ ತಾನು ಮಣಿಯಲಾರೆ ಎಂಬ ಬೆದರಿಕೆ, ಇಂತಹ ದಾಷ್ಟ್ಯತನ ಬಂದಿರುವುದೇ ಯಡಿಯೂರಪ್ಪನವರ ಸರ್ಕಾರ ಆತನ ಸುಲಿಗೆಯ ಬೆಂಬಲಕ್ಕೆ ಇರುವುದರಿಂದ. ಆದರೆ ಸಿ.ಎಂ.ಸಾಹೇಬರು ಬಹಳ 'ನೈಸ್' ಆಗಿ ಅಲ್ಲಗಳೆಯುತ್ತಾರೆ. ಆದರೆ ವಾಸ್ತವದಲ್ಲಿ ದುಬಾರಿ ದರಗಳನ್ನು ಶಿಫಾರಸು ಮಾಡಿ ಖೇಣಿ ಕಂಪನಿ ಕೊಟ್ಟ ಪತ್ರವನ್ನು ಪರಿಶೀಲಿಸಿ, ದರ ಪರಿಷ್ಕರಿಸಿ ನೋಟಿಫಿಕೇಶನ್ ಹೊರಡಿಸಬೇಕಿತ್ತು. ಆದರೆ ಇದುವರೆಗೂ ಯಾಕೆ ಮಾಡಲಿಲ್ಲ ಎಂಬುದರಲ್ಲಿ ಶಾಮೀಲಲ್ಲದೇ ಇನ್ನೇನು ಡೀಲ್ ಇದೆ? ತಾನು ಯಾರನ್ನೂ ಕೇಳಬೇಕಿಲ್ಲ. ಬೇಕಿದ್ದರೆ ಹೋಗಿ ಇಲ್ಲವೇ ಬಿಡಿ ಎಂದು ಸವಾಲು ಹಾಕಿದರೂ ಯಡಿಯೂರಪ್ಪ ನೈಸಾಗಿರುವುದು ಇನ್ನೂ ಯಾಕೆ? ಈ ಬಾಯಿ ಬಾಯಿ ಮಿಲಾಖತ್‌ಗೆ ಸಾಕ್ಷಿಯೆಂಬಂತೆ ಡಾಕ್ಟರ್ ಆಗಿರುವ ಯಡ್ಡಿಯನ್ನು



ಸನ್ಮಾನಿಸುವ ಐಶಾರಾಮಿ ಹೋಟೆಲ್ ಚಾನ್ಸರಿಯಲ್ಲಿ ನಡೆದ ಸಮಾರಂಭದಲ್ಲಿ ಖೇಣಿ ಸಾಹೇಬರು, ಡಾಕ್ಟರ್‌ರವರ ಕೈ ಕುಲುಕಿದ್ದರು. ಇಲ್ಲಿ ಯಾರ ಕೈಯನ್ನು ಯಾರು ಬಲಪಡಿಸಿದರು ಎಂದು ಬೇರೆ ಹೇಳಬೇಕಿಲ್ಲ, ಅಂದೇ ಖೇಣಿ ತನ್ನ ದುಬಾರಿ ಫರ್ಮಾನು ಹೊರಡಿಸಿದ್ದು. ಹಿಂದೆ ಕಾರಿಡಾರ್ ವಿವಾದ ತಲೆದೋರಿದಾಗ ಖೇಣಿಯವರೇ ಸ್ಟಾರ್ ಹೋಟೆಲ್‌ನಲ್ಲಿ ಬಿಜೆಪಿ ಶಾಸಕರಿಗೆ 'ಸನ್ಮಾನ' ನಡೆಸಿ ಸೂಟ್‌ಕೇಸ್ 'ಹಸ್ತಾಂತರ' ಮಾಡಿದ್ದು ರಾಜ್ಯದ ಜನ ಮರೆತಿಲ್ಲ.

ಈಗಲೂ ಬನ್ನೇರುಘಟ್ಟ, ಹೊಸೂರುರಸ್ತೆ, ಮೈಸೂರುರಸ್ತೆಗೆ ಹೊಂದಿಕೊಂಡಿರುವಲ್ಲಿ ಸುಮಾರು 1.5, 2 ಕಿ.ಮೀ.ಗಳಷ್ಟು ರಸ್ತೆಯೇ ಪೂರ್ಣಗೊಂಡಿಲ್ಲ. ಪೂರ್ಣ ಮಣ್ಣು-ಕಲ್ಲು ರಸ್ತೆಯೇ. ಹೀಗಿರುವುದನ್ನು ಯಾರೂ ಕೇಳಬಾರದು ಎನ್ನುತ್ತಾನೆ ಖೇಣಿ. ಫೆರಿಫೆರಲ್ ರಸ್ತೆಗೆ ಇಷ್ಟಿರುವಾಗ, ಮೈಸೂರು-ಬೆಂಗಳೂರು ಕಾರಿಡಾರ್ ಆದರೆ ಅದರ ಗತಿ ಇನ್ನೇನು ಎಂದು ಆತಂಕವಾಗುತ್ತದೆ.

ಸಮಸ್ಯೆ ಇಷ್ಟು ಗಂಭೀರವಿರುವಾಗ ಯಡಿಯೂರಪ್ಪನವರು ಕೈ ಝಾಡಿಸಿಕೊಂಡು ಓಡಾಡಿದರೆ ಜನ ಝಾಡಿಸಬೇಕಾಗುತ್ತದೆ. ಅಧಿಕಾರವನ್ನು ಜನ ನೀಡಿದ್ದು ತಮ್ಮ ಒಳಿತಿಗೆ ಬಳಸಲೆಂದು ಹೊರತು, ಖೇಣಿಯಂತಹ ಕೋಣಗಳನ್ನು ಒಲಿಸಲಿಕ್ಕೆ ಅಲ್ಲ. ಆದ್ದರಿಂದ ನಾಗರೀಕ ಸರ್ಕಾರವಾಗಿ ಈ ಕೂಡಲೇ ಸರ್ಕಾರ ಸೂಕ್ತ ಕ್ರಮವಹಿಸಿ ದರಗಳನ್ನು ಇಳಿಸಬೇಕು. ಇಷ್ಟು ಬಂಡವಾಳ ಹೊರಬಂದ ನಂತರವಾದರೂ ಸಾರ್ವಜನಿಕ ಹಿತಾಸಕ್ತಿ ಕಾಯಲು ಯಡ್ಡಿ ಮುಂದಾಗಲಿ.

ಜಮ್ಮು - ಕಾಶ್ಮೀರದ ಚುನಾವಣೆ.....

ಪುಟ 7 ಕ್ಕೆ

ಹಿಂದಿನಷ್ಟೇ ಸ್ಥಾನವನ್ನು ಅದು ಗಳಿಸಿದೆ.

ಅಮರನಾಥ ಕೇಂದ್ರಕ್ಕೆ ಭೂಮಿ ಮಂಜೂರಾತಿ ರದ್ದು ಮಾಡಿದ ಕ್ರಮದಿಂದಾಗಿ ಜಮ್ಮು ಭಾಗದಲ್ಲಿ ತನ್ನ ಜನ ಬೆಂಬಲ ಕೊಚ್ಚಿ ಹೋಗಿದೆ ಎಂದು ಭಾವಿಸಿದ ಕಾಂಗ್ರೆಸ್ ಎಂಟು ಹೊಸ ಜಿಲ್ಲೆಗಳ ರಚನೆಯ, ಜಲವಿದ್ಯುತ್ ಉತ್ಪಾದನಾ ಘಟಕಗಳ ಸ್ಥಾಪನೆ, ಇತ್ಯಾದಿ ತನ್ನ ಸರ್ಕಾರದ 'ಸಾಧನೆ'ಗಳ ಆಧಾರದಲ್ಲಿ ಮತ ಕೇಳಿತು ಮತ್ತು ಗುಜ್ಜಾರ್ ಬುಡಕಟ್ಟು ಸಮುದಾಯವರನ್ನು ಓಲೈಸಲು ಅದು ಪ್ರಯತ್ನಿಸಿತು. ಕಾಂಗ್ರೆಸ್‌ನ ಸ್ಥಾನಗಳಿಕೆಯಲ್ಲಿ ಕಳೆದ ಬಾರಿಗಿಂತ ಈ ಬಾರಿ 3 ಸ್ಥಾನ ಕಡಿಮೆಯಾಗಿದೆ.

ಕುದುರಿದ ಮೈತ್ರಿ

ಚುನಾವಣಾ ಫಲಿತಾಂಶ ಬಂದ ಮೇಲೆ ನ್ಯಾಷನಲ್ ಕಾನ್‌ಫೆರೆನ್ಸ್ ಕಾಂಗ್ರೆಸ್ ಜೊತೆ ಮೈತ್ರಿಗೆ ಮುಂದಾಗಿದೆ. ಕಾಂಗ್ರೆಸ್ ಸಹ ಸಮ್ಮತಿಸಿದೆ. ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವರ ಪುತ್ರ ಒಮರ್ ಅಬ್ದುಲ್ಲಾ ಮುಖ್ಯಮಂತ್ರಿಯಾಗುವರು, ಆರು ವರ್ಷಕ್ಕೂ (ಜಮ್ಮು ಕಾಶ್ಮೀರದಲ್ಲಿ ವಿಧಾನಸಭೆಯ ಅವಧಿ ಆರು ವರ್ಷ) ಅವರೇ ಮುಖ್ಯಮಂತ್ರಿಯಾಗುವರು ಎಂಬ ಎನ್.ಸಿ. ಪಕ್ಷದ ಹೇಳಿಕೆಯು ಇದೀಗ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ.

ತತ್ವಬದ್ಧ ಹೋರಾಟ

ಸಿಪಿಐ(ಎಂ) ಪಕ್ಷ ಒಂದು ತತ್ವಬದ್ಧ ವಿಧಾನದಲ್ಲಿ ಚುನಾವಣೆ ಎದುರಿಸಿತು. 'ಒಂದು ಪ್ರಜಾಸತ್ತಾತ್ಮಕ ಪರ್ಯಾಯದ ಕಡೆಗೆ' ಎಂಬ ಸ್ಪಷ್ಟ ಪ್ರಣಾಳಿಕೆಯ ಆಧಾರದಲ್ಲಿ ಪಕ್ಷದ ರಾಜ್ಯ 8 ಕ್ಷೇತ್ರಗಳಲ್ಲಿ ಸ್ಪರ್ಧಿಸಿತು.

ಪ್ರಣಾಳಿಕೆಯು ರಾಜ್ಯದಲ್ಲಿ ಶಾಂತಿ ನೆಲೆಸುವ ಅಗತ್ಯ, ಪಾಕ್-ಭಾರತ ಗಡಿಭಾಗದಲ್ಲಿ ಪ್ರಯಾಣ ಮತ್ತು ವ್ಯಾಪಾರ ವಿಸ್ತರಣೆ, ಶಸಸ್ತ್ರ ಪಡೆಯ ವಿಶೇಷಾಧಿಕಾರ ಕಾಯ್ದೆಯ ರದ್ದತಿ, ಬಂಧಿತ ಮುಗ್ಧರ ಬಿಡುಗಡೆ, ಹಿಂಸೆಯಲ್ಲಿ ನೊಂದವರಿಗೆ ಪರಿಹಾರ, ಉದ್ಯೋಗ ಸೃಷ್ಟಿ, ರೈತರ ಸಮಸ್ಯೆಗಳಿಗೆ ಪರಿಹಾರ, ಕಾರ್ಮಿಕ ಕಾನೂನುಗಳ ಜಾರಿ ಇತ್ಯಾದಿಗಳು ಈ ಪ್ರಣಾಳಿಕೆಯ ಭಾಗವಾಗಿದ್ದವು.

ಕುಲ್‌ಗಮ್ ಕ್ಷೇತ್ರದಿಂದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಹಮದ್ ಯೂಸಫ್ ತರಿಗಾಮಿ ಸತತವಾಗಿ ಮೂರನೇ ಬಾರಿಗೆ ಗೆದ್ದಿದ್ದಾರೆ. ಚುನಾವಣಾ ಪ್ರಚಾರದ ತೀವ್ರ ಚಟುವಟಿಕೆಗಳ ನಡುವೆ ಕಾಮ್ರೇಡ್ ತರಿಗಾಮಿ ಅಪಘಾತಕ್ಕೆ ಗುರಿಯಾಗಿ ಕೈ ಮೂಳೆ ತೀವ್ರವಾಗಿ ಗಾಯಗೊಂಡು ಆಸ್ಪತ್ರೆ ಸೇರುವಂತಾಯಿತು. ಚುನಾವಣೆ ಸಭೆಯನ್ನುದ್ದೇಶಿಸಿ, ಆಸ್ಪತ್ರೆಯಿಂದಲೇ ದೂರವಾಣಿ ಮೂಲಕ ಮಾತನಾಡಿದ ಸಭೆಗಳು, ಸ್ವಲ್ಪ ಚೇತರಿಸಿಕೊಂಡ ನಂತರ ತರಿಗಾಮಿ ಪಾಲ್ಗೊಂಡ ಹಲವು ಸಭೆಗಳು ನಡೆದವು.

ಕುಲ್ಗಮ್‌ಗೆ ಆತ್ಯಾಧುನಿಕ ಆಸ್ಪತ್ರೆ, ಹೊಸ ಗ್ರಾಮೀಣ ರಸ್ತೆಗಳು, ರಸ್ತೆಗಳ ವಿಸ್ತರಣೆ, ಬಸ್ ನಿಲ್ದಾಣ, ಹೊಸ ಶಾಲಾ, ಕಾಲೇಜುಗಳ ಸ್ಥಾಪನೆ, ಕುಡಿಯುವ ನೀರಿನ ಪೂರೈಕೆ ವ್ಯವಸ್ಥೆ ನಿರ್ಮಾಣ, ಕುಲ್ಗಮ್ ಪ್ರತ್ಯೇಕ ಜಿಲ್ಲೆಯಾಗಿ ಹಲವಾರು ಕಛೇರಿಗಳು ಬಂದಿರುವುದು ಹತ್ತು ಹಲವು ಕ್ಷೇತ್ರಾಭಿವೃದ್ಧಿ ಕಾರ್ಯಗಳು ಹಾಗೂ ರಾಜ್ಯದ ಸಮಸ್ಯೆಗೆ ಪಕ್ಷ ಸೂಚಿಸುತ್ತಿರುವ ಖಚಿತ ಪರಿಹಾರ ಜನರು ಮತ್ತೆ ತರಿಗಾಮಿಯವರನ್ನು ಗೆಲ್ಲಿಸಲು ಕಾರಣವಾಗಿದೆ. ಕಳೆದ 50 ವರ್ಷಗಳಲ್ಲಿ ಸಾಧ್ಯವಾಗದ ಅಭಿವೃದ್ಧಿಯನ್ನು ತರಿಗಾಮಿಯವರು 12 ವರ್ಷಗಳಲ್ಲಿ ಸಾಧಿಸಿದ್ದಾರೆಂದು ಜನರೇ ಹೇಳುತ್ತಾರೆ.

ವಿಷಮ ಪರಿಸ್ಥಿತಿ

ಆದರೆ ಒಟ್ಟಾರೆ ರಾಜ್ಯದಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಕಾರ್ಯಕರ್ತರು ಕಳೆದ ಬಾರಿಗಿಂತಲೂ ವಿಷಮ ಪರಿಸ್ಥಿತಿಯಲ್ಲಿ ಚುನಾವಣೆ ಎದುರಿಸಬೇಕಾಯಿತು.

ರಾಜ್ಯದ್ಯಾದ್ಯಂತ ಪ್ರಸಿದ್ಧವಾಗಿರುವ ಕುಲ್ಗಮ್ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳು, ಹೆಚ್ಚುತ್ತಿರುವ ಸಿಪಿಐ(ಎಂ)ನ ಜನಪ್ರಿಯತೆಯಿಂದ ಆತಂಕಗೊಂಡ ಪಿಡಿಪಿ ಮತ್ತು ಮೂಲಭೂತವಾದಿ ಶಕ್ತಿಗಳು ಸಿಪಿಐ(ಎಂ) ಕುರಿತ ತೀವ್ರತರದ ಅಪಪ್ರಚಾರವನ್ನೇ ನಡೆಸಿದರು. 1987ರಲ್ಲಿ ಕುಲ್ಗಮ್ ಕ್ಷೇತ್ರದಲ್ಲಿ ಮುಸ್ಲಿಂ ಯುನೈಟೆಡ್ ಫ್ರಂಟ್‌ನ ಭಾಗವಾಗಿ ಗೆಲುವು ಸಾಧಿಸಿದ್ದ ಮತ್ತು ಈಗಲೂ ಜಿಲ್ಲೆಯಲ್ಲಿ ಪ್ರಬಲವಾಗಿರುವ ಜಮಾತ್-ಇ-ಇಸ್ಲಾಮಿ ಸಿಪಿಐ(ಎಂ) ವಿರುದ್ಧ ನಿಂತಿತು. 'ಕಮ್ಯೂನಿಸ್ಟರು ಧರ್ಮ ವಿರೋಧಿಗಳು... ಅವರು ಜನರ ನಡುವೆ ಕಮ್ಯುನಿಸಂ ಅನ್ನು ಹರಡುತ್ತಾರೆ....' ಇತ್ಯಾದಿ ವಿಕೃತಪ್ರಚಾರಗಳು ನಡೆದವು. ಬೇರೆ ಕ್ಷೇತ್ರಗಳಲ್ಲೆಲ್ಲಾ ಚುನಾವಣೆ ಬಹಿಷ್ಕಾರಕ್ಕೆ ಕರೆ ನೀಡಿರುವ ಪ್ರತ್ಯೇಕತಾವಾದಿಗಳ ಭಾಗವಾಗಿರುವ ಜಮಾತ್-ಇ-ಇಸ್ಲಾಮಿ ಸಂಘಟನೆಯು ಸಿಪಿಐ(ಎಂ) ಅಭ್ಯರ್ಥಿಗಳನ್ನು ಸೋಲಿಸುವ ಏಕೈಕ ಉದ್ದೇಶದಿಂದ ಪಿಡಿಪಿ ಪಕ್ಷಕ್ಕೆ ಮತ ನೀಡಲು ಜನರನ್ನು ತಾನೇ ಆಣಿ ನೆರೆಸಿತು. ಇದು ಕೇವಲ ಸ್ಥಳೀಯ ಮಟ್ಟದಲ್ಲಿ ಕಂಡು ಬಂದ ಅಂಶವಲ್ಲ. ಮೇಲ್ಮಟ್ಟದಲ್ಲಿಯೇ ಅಂತಹ ತೀರ್ಮಾನವಾಗಿ ನಿರ್ದೇಶನ ಬಂದಿದೆ.

ಕಳೆದ ಬಾರಿ ಕುಲ್ಗಮ್ ಕ್ಷೇತ್ರವಲ್ಲದೆ, ವಾಚಿ ಕ್ಷೇತ್ರದಲ್ಲಿಯೂ ಸಿಪಿಐ(ಎಂ) ಗೆಲುವು ಸಾಧಿಸಿತು. ಇದಲ್ಲದೆ ಹೋಮ ಶಲಿಬಾಗ್, ಹಾಗೂ ದೇವ್‌ಸರ್ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಎರಡನೇ ಸ್ಥಾನಗಳಿಸಿತ್ತು. ಈ ಬಾರಿ ಹೋಮಶಲಿಬಾಗ್‌ನಲ್ಲಿಯೂ ಜಮಾತ್-ಇ-ಇಸ್ಲಾಮಿಯು ಸಿಪಿಐ(ಎಂ) ವಿರುದ್ಧ ಪಿಡಿಪಿಯನ್ನು ಬೆಂಬಲಿಸಿದೆ.

ಪ್ರತ್ಯೇಕತಾವಾದಿಗಳ ಬೆದರಿಕೆ, ಮೂಲಭೂತವಾದಿಗಳ ಪಿತೂರಿ ಎಲ್ಲದರ ನಡುವೆ ರಾಜ್ಯದ ರಾಜಕೀಯದಲ್ಲಿ ಸಿಪಿಐ(ಎಂ) ಪಾತ್ರ ಮತ್ತು ಪ್ರತಿಷ್ಠೆ ಹೆಚ್ಚಿದೆ. ಅದು ಸವಾಲುಗಳನ್ನು ಎದುರಿಸುತ್ತಾ ಧೀಮಂತಿಕೆಯ ಹೆಜ್ಜೆಯನ್ನಿರಿಸುತ್ತಿದೆ.

ಗೆದ್ದ ಸ್ಥಾನ 2 ರಿಂದ 1 ಕ್ಕಿಳಿದಿದೆ ಎನ್ನುವುದು ತತ್ವ ಬದ್ಧತೆಗಾಗಲಿ, ಹೋರಾಟದ ಬದ್ಧತೆಗಾಗಲಿ ಯಾವುದೇ ರೀತಿಯ ಚ್ಯುತಿ ತರುವುದಿಲ್ಲ. ಚಳುವಳಿ ಮುಂದೆ ಹೆಜ್ಜೆ ಇಡಲಿದೆ. ಇತ್ತೀಚಿನ ವರ್ಷಗಳಲ್ಲಿ ಕುಲ್ಗಮ್ ಜಿಲ್ಲೆಯ ಹೋಮ್ ಶಲಿ ಬಾಗ್‌ನಲ್ಲಿ ಡಿವೈಎಫ್‌ಐನ ರಾಜ್ಯ ಕಾರ್ಯದರ್ಶಿ ಮಹಮದ್ ಅಮೀನ್‌ದರ್, ದೇವ್‌ಸರ್‌ನಿಂದ ಡಿವೈಎಫ್‌ಐನ ಮಾಜಿ ಅಖಿಲ ಭಾರತ ಪದಾಧಿಕಾರಿಗಳಾದ ಮಹಮದ್ ಯಾಕೂಬ್ ಗನಿ ಸ್ಪರ್ಧಿಸಿದ್ದರು. ಇತ್ತೀಚಿನ ವರ್ಷಗಳಲ್ಲಿ ರಾಜ್ಯದಲ್ಲಿ ಯುವಜನ ಚಳುವಳಿ ತೀವ್ರ ವೇಗದಲ್ಲಿ ಬೆಳೆಯುತ್ತಿದೆ. ಸದಸ್ಯತ್ವದಲ್ಲಿ ಹಲವಾರು ಪಟ್ಟು ಏರಿಕೆಯಾಗಿದೆ. ರಾಜ್ಯದಾದ್ಯಂತ ಯುವಜನರು ಹೆಚ್ಚೆಚ್ಚು ಸಿಪಿಐ(ಎಂ) ಪಕ್ಷದ ಕಡೆಗೆ ಆಕರ್ಷಿತರಾಗುತ್ತಿದ್ದಾರೆ.

ಕೋಮುವಾದಿ, ಪ್ರತ್ಯೇಕತಾವಾದಿ ಭಾವನೆಗಳ ಆಧಾರದಲ್ಲಿ ಕೆಲವು ರಾಜಕೀಯ ಪಕ್ಷಗಳು ತಾತ್ಕಾಲಿಕ ಲಾಭ ಗಳಿಸುವಲ್ಲಿ ಯಶಸ್ವಿಯಾಗಬಹುದು. ಆದರೆ ಅವರ ಜನ ವಿರೋಧಿ ಮುಖವನ್ನು ಕಂಡ ಜನತೆ ಅವರನ್ನು ಖಂಡಿತ ತಿರಸ್ಕರಿಸುತ್ತಾರೆಂಬ ವಿಶ್ವಾಸ ರಾಜ್ಯದ ಜನವರ ಚಳುವಳಿಗಿದೆ.

ಜಗದಗಲ

ಶರತ್‌ಚಂದ್ರ

ಕ್ಯೂಬಾ ಕ್ರಾಂತಿಯ ಸುವರ್ಣ ಸಂಭ್ರಮದ ಕಾರವಾನ್ ಹೊರಟಿದೆ - ಬನ್ನಿ ಸೇರಿಕೊಳ್ಳಿ !

ಕ್ಯೂಬಾ ಕ್ರಾಂತಿಗೆ ಸುವರ್ಣ ಸಂಭ್ರಮ. 50 ವರ್ಷಗಳ ಹಿಂದೆ ಸರ್ವಾಧಿಕಾರಿ ಬಾಟಿಸ್ಟಾ ದೇಶ ಬಿಟ್ಟು ಓಡಿ ಹೋದಾಗ ಫಿಡೆಲ್ ಕ್ಯಾಸ್ಟ್ರೋ ಮತ್ತು ಅವರ ಸಂಗಾತಿಗಳು ಕ್ಯೂಬಾ ಕ್ರಾಂತಿಯ ವಿಜಯದ ಘೋಷಣೆ ಮಾಡಿದ್ದರು. ಬರಿಯ 90 ಮೈಲಿಗಳ ದೂರದಲ್ಲಿರುವ ಸಾಮ್ರಾಜ್ಯಶಾಹಿಯ ಹಿತ್ತಲಲ್ಲೇ ಅದಕ್ಕೆ ಸವಾಲು ಹಾಕಿ, ಅದರ ದಿಗ್ಬಂಧನ ಎದುರಿಸಿ ಸಮಾಜವಾದ ಕಟ್ಟಿ 50 ವರ್ಷ ಅಜೇಯವಾಗಿ ಉಳಿದದ್ದು ಒಂದು ಪವಾಡ. ಅಮೆರಿಕ ಖಂಡದಲ್ಲಿ ಒಬ್ಬಂಟಿಯಾಗಿದ್ದ ಕ್ಯೂಬಾ 50 ವರ್ಷಗಳ ಕಾಲ ಸಮಾಜವಾದದ ಧ್ವಜ ಎತ್ತಿ ಹಿಡಿದದ್ದು ಮಾತ್ರವಲ್ಲ, ಇಡೀ ಲ್ಯಾಟಿನ್ ಅಮೆರಿಕ ಖಂಡ ರಾಜಕೀಯವಾಗಿ ಎಡಕ್ಕೆ ವಾಲುವ ಪ್ರಕ್ರಿಯೆಗೆ ಕಾರಣವಾಗಿದೆ. ಇದು ಅತ್ಯಂತ ಸಂಭ್ರಮದ ಕ್ಷಣ. ಕ್ಯೂಬಾ ಈ ಕ್ಷಣವನ್ನು ಹಲವು ರೀತಿಯಲ್ಲಿ ಸಂಭ್ರಮಿಸುತ್ತಿದೆ.

ವಿವಿಧ ಪ್ರದೇಶ-ಕ್ಷೇತ್ರಗಳಿಂದ ಆಯ್ದ ಮೂರು ಸಾವಿರ ಕ್ಯೂಬನ್ನರ ಕಾರವಾನ್ (ಜಾಥಾ) ಜನವರಿ 2 ರಿಂದ 8 ರವರೆಗೆ 1959 ರಲ್ಲಿ ಫಿಡೆಲ್ ಮತ್ತು ಅವರ ಸಂಗಾತಿಗಳು ರಾಜಧಾನಿ ಹವಾನಾಕ್ಕೆ ಬಂದ ಹಾದಿಯನ್ನು ಪುನಃ ಕ್ರಮಿಸಲಿದೆ. ಕ್ಯಾರವಾನ್ ಗೆ ತಮ್ಮ ಕೇತ್ರಗಳಲ್ಲಿ ವಿಶ್ಲೇಷ ಸಾಧನೆ ಮಾಡಿರುವ - ಸ್ಕೂಲು-ಕಾಲೇಜು-ವಿಶ್ವವಿದ್ಯಾಲಯ ವಿದ್ಯಾರ್ಥಿಗಳು, ಅಧ್ಯಾಪಕರು, ಡಾಕ್ಟರುಗಳು, ವಿಜ್ಞಾನಿಗಳು, ಕಲಾವಿದರು, ಕ್ರೀಡಾಪಟುಗಳು, ರೈತರು, ಕ್ಯೂಬನ್ ಕ್ರಾಂತಿಯ ಗೆರಿಲ್ಲಾ ಹೋರಾಟದಲ್ಲಿ ಭಾಗವಸಿದ್ದ ಹಿರಿಯರು, ಕ್ಯೂಬಾ ಸೈನ್ಯ ಮತ್ತು ಆಂತರಿಕ ಭದ್ರತಾ ಪಡೆಯ ಸೈನಿಕರು-ಅಧಿಕಾರಿಗಳು - ಇವರ ಆಯ್ಕೆ ಮಾಡಲಾಗಿದೆ. ಪ್ರತೀ ಪ್ರಾಂತ್ಯದಿಂದ 50 ಪ್ರತಿನಿಧಿಗಳು - ರಾಷ್ಟ್ರೀಯ ದುಡಿಮೆ ಹೀರೋಗಳು ಮತ್ತು ಪ್ರಮುಖರು - ಸಹ ಕಾರವಾನ್ ನಲ್ಲಿ ಇರುತ್ತಾರೆ.

ಸ್ಯಾಂಟಿಯಾಗೋ ಡಿ ಕ್ಯೂಬಾ ಎಂಬ ಪೂರ್ವದಲ್ಲಿರುವ ಪಟ್ಟಣದಲ್ಲಿ ಅಧ್ಯಕ್ಷ ರಾವುಲ್



ಕ್ಯಾಸ್ಟ್ರೋ ಫಿಡೆಲ್ ಕ್ರಾಂತಿಯ ವಿಜಯ ಘೋಷಿಸಿದ ಬಾಲ್ಕನಿಯಿಂದಲೇ ಕಾರವಾನ್ ಉದ್ಘಾಟನೆ ಮಾಡಿ ಸುವರ್ಣ ಸಂಭ್ರಮ ಆರಂಭ ಮಾಡಿದರು. ಕಾರವಾನ್ ಹಾದಿಯಲ್ಲಿ ಕ್ರಾಂತಿಯ ಚಾರಿತ್ರಿಕ ಸ್ಥಳಗಳಲ್ಲಿ ವಿಶೇಷ ಕಾರ್ಯಕ್ರಮ, ಬದುಕಿರುವ ಕ್ರಾಂತಿ ಹೋರಾಟಗಾರರ ಮತ್ತು ಹುತಾತ್ಮರ ಕುಟುಂಬಗಳಿಗೆ ಭೇಟಿ-ಸನ್ಮಾನ ಇತ್ಯಾದಿ ಕಾರ್ಯಕ್ರಮ ಇರುತ್ತವೆ. ಇದಲ್ಲದೆ ದೇಶದ ತುಂಬಾ ಸಂಗೀತ ಗೋಷ್ಠಿಗಳನ್ನು ಆಯೋಜಿಸಲಾಗಿದೆ. ಕಾರವಾನ್ ಹವಾನಾಕ್ಕೆ ಜನವರಿ 8 ರಂದು ಆಗಮಿಸಲಿದ್ದು ಅಂದು ಬೃಹತ್ ರ‍್ಯಾಲಿ ಆಯೋಜಿಸಲಾಗಿದೆ.

ಅಧ್ಯಕ್ಷ ರಾವುಲ್ ಕ್ಯಾಸ್ಟ್ರೋ ತಮ್ಮ ಭಾಷಣದಲ್ಲಿ ಕಳೆದ 50 ವರ್ಷ ಕ್ಯೂಬನ್ ಇತಿಹಾಸದಲ್ಲೇ ಅತ್ಯಂತ ಫಲದಾಯಕ ವರ್ಷಗಳು ಎಂದರು. ಕ್ರಾಂತಿಯ ರಕ್ಷಣೆಗೆ ತಮ್ಮ ಪ್ರಾಣ ತೆತ್ತ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಕ್ರಾಂತಿಯಲ್ಲಿ, ಅದರ ವಿಶಿಷ್ಟ ಸಾಧನೆಗಳಲ್ಲಿ ಮತ್ತು ಆ ಮೇಲಿನ ಸತತ ಸಂಘರ್ಷದಲ್ಲಿ ಫಿಡೆಲ್ ಕ್ಯಾಸ್ಟ್ರೋರವರ ಪಾತ್ರವನ್ನು ರಾವುಲ್ ವಿಶೇಷವಾಗಿ ನೆನೆದರು. ಹಲವು ಹಂತಗಳ ಹೋರಾಟಗಳ ಸಾರವನ್ನು ಫಿಡೆಲ್ ಮಾತುಗಳ ಮೂಲಕ ಸಾರಿದರು. ಅಮೆರಿಕನ್ ಸಾಮ್ರಾಜ್ಯಶಾಹಿ ಕ್ಯೂಬಾದ ಕತ್ತು ಹಿಸುಕಲು ಮಾಡಿದ ಪ್ರಯತ್ನಗಳ ಮತ್ತು ಅದಕ್ಕೆ ಕ್ಯೂಬಾದ ಜನತೆಯ ಪ್ರತಿರೋಧದ ಚರಿತ್ರೆಯನ್ನು ಸ್ಥೂಲವಾಗಿ ವಿವರಿಸಿದ ರಾವುಲ್, ಮುಂದಿನ 50 ವರ್ಷಗಳು ಸುಲಭವಾಗಿ ಇರುತ್ತವೆ ಎಂದು ಭಾವಿಸಬಾರದು. ಇಂದಿನ ಜಗತ್ತಿನ ತಲ್ಲಣಗಳನ್ನು ಗಮನಿಸಿದರೆ ಗಂಭೀರ ಸವಾಲುಗಳು ಮುಂದುವರೆಯುತ್ತವೆ. ನಮ್ಮ ಶತ್ರುಗಳು ಅಷ್ಟೇ ಆಕ್ರಾಮಕ, ಧೂರ್ತ, ಮತ್ತು ಅಧಿಪತ್ಯ ಸ್ವಭಾವದವರಾಗಿ ಇರುತ್ತಾರೆ. ಅದಕ್ಕೆ ನಾವು ಸಿದ್ಧರಾಗಿರಬೇಕು. ಕ್ಯೂಬಾದ ಚರಿತ್ರೆಯಿಂದ ಸರಿಯಾದ ಪಾಠ ಕಲಿತು, ಜನತೆಯೊಂದಿಗೆ ಒಂದಾಗಿ ಅವರಿಗಾಗಿ ಹೋರಾಡಲು ಸದಾ ತಯಾರಿರಬೇಕು. ಇದು ನಾಳಿನ ನಾಯಕರ ಮುಂದಿರುವ ಸವಾಲು. ಕ್ಯೂಬಾದ ಕ್ರಾಂತಿ ಮುಂದಿನ ಬಹುಕಾಲ ಬಾಳಿ ಬೆಳೆಯುತ್ತದೆ ಎಂದು ರಾವುಲ್ ಘೋಷಿಸಿದರು.


ಎಲ್‌ಟಿಟಿಇ ಗೆ ಭಾರಿ ಹಿನ್ನಡೆ 'ರಾಜಧಾನಿ' ಶ್ರೀಲಂಕಾ ಸೈನ್ಯ ವಶ

ಶ್ರೀಲಂಕಾ ಸೈನ್ಯ ಮತ್ತು ಎಲ್.ಟಿ.ಟಿ.ಇ. ನಡುವೆ ನಡೆಯುತ್ತಿರುವ ಭೀಕರ ಸಂಘರ್ಷದಲ್ಲಿ ಎಲ್.ಟಿ.ಟಿ.ಇ. ಗೆ ಭಾರೀ ಹಿನ್ನಡೆಯಾಗಿದೆ. ಎಲ್.ಟಿ.ಟಿ.ಇ.ಯ. ರಾಜಧಾನಿ ಎಂದು ಭಾವಿಸಲಾಗುವ ಕಿಲಿನೊಚ್ಚಿಯಿಂದ ಅದು ಹಿಂದೆ ಸರಿದಿದ್ದು, ಅದು ಶ್ರೀಲಂಕಾ ಸೈನ್ಯದ ವಶವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಮೊದಲ ಬಾರಿಗೆ ಕಿಲಿನೊಚ್ಚಿ ಮೇಲೆ ಎಲ್.ಟಿ.ಟಿ.ಇ. ನಿಯಂತ್ರಣ ಕಳೆದುಕೊಂಡಿದೆ. ಶ್ರೀಲಂಕಾ ಸರ್ಕಾ[illegible] ಎಲ್.ಟಿ.ಟಿ.ಇ. ಮೇಲೆ ವಿಜ[illegible] ಘೋಷಿಸಿದ್ದು, ಅದು ಈಗ ಶಸ್ತ್ರಾಸ್ತ್ರ ಕೆಳಗೆ ಹಾಕಿ ಶರಣಾಗತವಾಗಬೇಕು ಎಂದು ಹೇಳಿದೆ. ಇದು ಗಂಭೀರ ಬೆಳವಣಿಗೆ. ಎಲ್.ಟಿ.ಟಿ.ಇ. ಸೋಲು ತಮಿಳು ಸಮಸ್ಯೆ ಬಗೆಹರಿಸಲು ಬೇಕಾದ ಶಾಂತಿ ನೆಲೆಸಲು ಸಹಾಯ ಮಾಡಬಹುದು ಎಂಬಂತೆ ಕಂಡರೂ ಅದು ಒಂದು ಮರೀಚಿಕೆ. ದೇಶದ ಆಂತರಿಕ ಹೋರಾಟದಲ್ಲಿ ಮಿಲಿಟರಿ ಗೆಲುವಿಗೆ ಅರ್ಥ ಇಲ್ಲ. ಜನಾಂಗೀಯ ಸಮಸ್ಯೆ-ವಿವಾದಗಳಿಗೆ ರಾಜಕೀಯ ಪರಿಹಾರ ಹುಡುಕಲೇ ಬೇಕು. ಮಿಲಿಟರಿ ಪರಿಹಾರ ಎಂದೂ ಸಾಧ್ಯವಿಲ್ಲ ಎಂಬ ಸರಳ ಸತ್ಯ ಶ್ರೀಲಂಕಾ ನಾಯಕರಿಗೆ ಅರ್ಥವಾದಂತಿಲ್ಲ. ಇರಾಕ್ ಮತ್ತು ಅಫ್ಘಾನಿಸ್ತಾನದಲ್ಲಿ ಅಲ್ ಖೈದಾ ಮತ್ತು ತಾಲಿಬಾನ್ ಮುಗಿಸಿ ವಿಜಯ ಘೋ[illegible]ನ ಮಾಡಿದ ಕೆಲವೇ ವರ್ಷಗಳಲ್ಲಿ ಆ ದೇಶದ ಮತ್ತು ಅಮೆರಿಕದ ನಾಯಕರ ಅವಸ್ಥೆ ಏನಾಗಿ[illegible] ಎಂಬುದರಿಂದಾದರೂ ಅವರು ಪಾಠ ಕಲಿಯಬೇಕು.

ಗಾಜಾ ಪ್ರದೇಶದಲ್ಲಿ ಪುನಃ ಇಸ್ರೇಲಿ ಅತ್ಯಾಚಾರ – 400 ಕ್ಕೂ ಹೆಚ್ಚು ಸಾವು

ಕಳೆದ ಹಲವು ದಿನಗಳಿಂದ ಇಸ್ರೇಲಿ ಸರ್ಕಾರ (ಡಿಸೆಂಬರ್ 27 ರಿಂದ ಆರಂಭವಾಗಿ) ಪ್ಯಾಲೆಸ್ತೈನ್ ಗೆ ಸೇರಿದ ಗಾಜಾ ಪ್ರದೇಶದಲ್ಲಿ ಪುನಃ ಭೀಕರ ಅತ್ಯಾಚಾರ ನಡೆಸುತ್ತಿದೆ. ಆ ಪ್ರದೇಶಗಳ ಮೇಲೆ ಸತತ ಬಾಂಬ್ ದಾಳಿ ನಡೆಸಿದೆ. ಮೊದಲ ಆರು ದಿನಗಳಲ್ಲೇ 414 ಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಸಾವಿರಕ್ಕೂ ಹೆಚ್ಚು ಜನ ತೀವ್ರವಾಗಿ ಗಾಯಗೊಂಡಿದ್ದಾರೆ. ಗಾಜಾ ಗಡಿಯಲ್ಲಿ ಇಸ್ರೇಲಿ ಟ್ಯಾಂಕು ಮತ್ತು ಸೇನಾ ಜಮಾವಣೆ ಮಾಡಿದ್ದು ನೆಲ ಯುದ್ಧಕ್ಕೂ ತಯಾರಿ ನಡೆಸಿದೆ. ಭೀಕರ ಬಾಂಬ್ ದಾಳಿ ನೆಲ ಯುದ್ಧಕ್ಕೆ ಗಾಜಾವನ್ನು ಸಿದ್ಧ ಮಾಡಲು. ಈ ದಾಳಿ ಹಲವು ವಾರಗಳ ಕಾಲ 15 ಲಕ್ಷಕ್ಕೂ ಹೆಚ್ಚು ಗಾಜಾ ನಿವಾಸಿಗಳ ಮೇಲಿನ ಅಮಾನವೀಯ ದಿಗ್ಬಂಧನದ ಬೆನ್ನಲ್ಲೇ ಬಂದಿದೆ. ಇಸ್ರೇಲಿ ಸರ್ಕಾರ ಈ ದಾಳಿ ಹಾಮಾಸ್ ಗೆರಿಲ್ಲಾ ಪಡೆ ನಾಶಕ್ಕೆ ಎನ್ನುತ್ತದೆ. ಆದರೆ ದಾಳಿ ಅಮಾಯಕ ನಾಗರೀಕರು ಅದರಲ್ಲೂ ಹೆಂಗಸರು ಮಕ್ಕಳ ಮತ್ತು ಹಾಮಾಸ್ ನಡುವೆ ಯಾವುದೇ ವ್ಯತ್ಯಾಸ ತೋರುತ್ತಿಲ್ಲ. ಹಾಮಾಸ್ ಕ್ಷಿಪಣಿ ದಾಳಿಗೆ ಇದು ಸೇಡು ಎನ್ನುತ್ತದೆ ಇಸ್ರೇಲಿ ಸರ್ಕಾರ. ಹಾಮಾಸ್ ಕಾರ್ಯಾಚರಣೆಗೆ ಎಲ್ಲಾ ಗಾಜಾ ಜನತೆಯನ್ನು ಹೇಗೆ ಜವಾಬ್ದಾರನ್ನಾಗಿ ಮಾಡಲು ಸಾದ್ಯ. ಅಲ್ಲದೆ ಈವರೆಗೆ ಇಸ್ರೇಲಿನಲ್ಲಿ ಹಾಮಾಸ್ ದಾಳಿಯಿಂದ ನಾಲ್ಕು ಜನ ಸತ್ತಿರುವುದು. ಅಂದರೆ ಒಬ್ಬ ಇಸ್ರೇಲಿಯ ಪ್ರಾಣ 100 ಕ್ಕೂ ಹೆಚ್ಚು ಪ್ಯಾಲೆಸ್ಟೈನ್ನರಿಗೆ ಸಮ ಅಂತ ಜನಾಂಗವಾದಿ ಇಸ್ರೇಲಿ ಸರ್ಕಾರದ ಧೋರಣೆಯೇ ?

ಕಳೆದ ನವಂಬರ್ 5 ರಿಂದ ಗಾಜಾ ಪ್ರದೇಶದ ಮೇಲೆ ಇಸ್ರೇಲ್ ದಿಗ್ಬಂಧನ ವಿಧಿಸಿದೆ. ಆಹಾರ, ಔಷಧಿ, ಇಂಧನ ಅಥವಾ ಯಾವುದೇ ಸರಕುಗಳು ಗಾಜಾಕ್ಕೆ ಹೋಗಲು ಇಸ್ರೇಲು ಬಿಟ್ಟಿಲ್ಲ. ನವಂಬರ್ ಇಡೀ ತಿಂಗಳಲ್ಲಿ ಕೇವಲ 137 ಟ್ರಕ್ಕುಗಳನ್ನು



ಬಿಡಲಾಗಿದೆ. ಅಕ್ಟೋಬರ್ ನಲ್ಲಿ ಪ್ರತೀ ದಿನ 123[illegible] ಟ್ರಕ್ಕುಗಳು ಹೋಗುತ್ತಿದ್ದವು. ನವಂಬರ್ 13 ರಿಂದ[illegible] ಇಂಧನದ ಅಭಾವದಿಂದ ಗಾಜಾದ ಏಕಮಾತ್ರ[illegible] ವಿದ್ಯುತ್ ಜನರೇಟರ್ ಕೆಲಸ ನಿಲ್ಲಿಸಿದೆ. ವಿದ್ಯುತ್ ಇಲ್ಲದೆ ಬೇಕರಿಗಳು ಬ್ರೆಡ್ ತಯಾರಿಸುತ್ತಿಲ್ಲ. ಗಾಜಾದ 7.5 ಲಕ್ಷ ನಿರಾಶ್ರಿತರಿಗೆ ಆಹಾರ[illegible] ಒದಗಿಸುತ್ತಿದ್ದ ವಿಶ್ವ ಸಂಸ್ಥೆ ಪರಿಹಾರ[illegible] ಸಂಘಟನೆ ಅದನ್ನು ನಿಲ್ಲಿಸಬೇಕಾಗಿದೆ. ಬ್ಯಾಂಕುಗಳಲ್ಲಿ ಹಣ ಇಲ್ಲ. ಇಂತಹ ಭೀಕರ[illegible] ದಿಗ್ಬಂಧನದ ಹಿನ್ನೆಲೆಯಲ್ಲಿ ಈ ಭೀಕರ ದಾ[illegible] ಹರಿಯಬಿಟ್ಟಿದೆ. ಇಸ್ರೇಲಿ ಚುನಾವಣೆ[illegible] ಸದ್ಯದಲ್ಲೇ ನಡೆಯಲಿದ್ದು ಹಾಮಾಸ್[illegible] ಮಣಿಸಿದೆವು ಎಂದು ಕೊಚ್ಚಿಕೊಳ್ಳಲು ಆಳುವ[illegible]

ಸುದ್ದಿಬಿಂಬ

ಡಾಕ್ಟ'ರೇಟು'

ಭಾರತ ದೇಶದಲ್ಲಿನ ಹತ್ತು ಹಲವಾರು ವಿಶ್ವವಿದ್ಯಾನಿಲಯಗಳಂತೆ ದುಡ್ಡಿಗಾಗಿ, ಲಾಭಕ್ಕಾಗಿ ಏನು ಬೇಕಾದರೂ ಮಾಡಬಲ್ಲ ವಿಶ್ವವಿದ್ಯಾನಿಲಯಗಳು ಅಮೇರಿಕಾದಲ್ಲೂ ಇವೆ. ಈಗ ಮಿಚಿಗನ್ ರಾಜ್ಯದಲ್ಲಿರುವ ಸಾಜಿನಾವ್ ವಿಶ್ವವಿದ್ಯಾಲಯವನ್ನೇ ತೆಗೆದುಕೊಳ್ಳಿ. ಆ ರಾಜ್ಯದವರನ್ನು ಹೊರತುಪಡಿಸಿದರೆ ಉಳಿದ ರಾಜ್ಯಗಳಲ್ಲಿ ಹೆಚ್ಚಿನವರಿಗೆ ಅದರ ಬಗ್ಗೆ ಗೊತ್ತಿಲ್ಲ. ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳ ಪಟ್ಟಿಯನ್ನು ನೋಡಿದರೆ ಅದರಲ್ಲಿ ಸಾಜಿನಾವ್ ಎಂಬ ಹೆಸರೇ ಕಂಡು ಬರುವುದಿಲ್ಲ. ಈ ವಿವಿಯ ವ್ಯಾಪ್ತಿಯಲ್ಲಿ 15 ಕಾಲೇಜುಗಳಿವೆ. ಒಟ್ಟು ಸುಮಾರು 10,000 ದಷ್ಟು ವಿದ್ಯಾರ್ಥಿಗಳಿದ್ದಾರೆ. ಈ ವಿವಿಯ ಮೇಲೆ ವರ್ಣಬೇಧದ, ಸೆಕ್ಸ್ ಹಗರಣಗಳ, ಹಣ ಕದಿಯುವ, ದಮನದ, ಸರ್ಕಾರಿ ಚೇಲಾಗಿರಿ ಮುಂತಾದ ಆಪಾದನೆಗಳಿವೆ.

ಅಮೇರಿಕಾ ಇರಾಕ್ ಮತ್ತು ಆಫಘಾನಿಸ್ತಾನ ಯುದ್ದಗಳನ್ನು ವಿರೋಧಿಸಿದ್ದ ಅಲ್ಲಿನ ಕೆಲವು ಅಧ್ಯಾಪಕ ವರ್ಗ ಮತ್ತು ವಿದ್ಯಾರ್ಥಿಗಳು ವಿವಿಯಿಂದ ಶಿಸ್ತಿನ ಕ್ರಮಕ್ಕೊಳಗಾಗಿದ್ದರು. ಇದರಿಂದ ರೊಚ್ಚಿಗೆದ್ದ ವಿದ್ಯಾರ್ಥಿಗಳು ವೆಬ್‌ಸೈಟ್ ಒಂದನ್ನು ಶುರುಮಾಡಿ ವಿವಿಯ ಹಗರಣಗಳನ್ನು ಬಯಲಿಗೆಳೆದಿದ್ದರು. ಹಣಕಾಸಿನ ಕೊರತೆ ಎದುರಿಸುತ್ತಿರುವ ಸಾಜಿನಾವ್ ವಿವಿ ತನ್ನ ಈ ಬಾರಿಯ ಬಜೆಟ್‌ನಲ್ಲಿ ದುಂದು ವೆಚ್ಚಗಳಿಗೆಲ್ಲ ಕಡಿತ ಹಾಕಿದೆ. ಈ ಕೊರತೆಯನ್ನು ವಿದ್ಯಾರ್ಥಿ ಶುಲ್ಕ ಹೆಚ್ಚಿಸುವ ಮೂಲಕ ನೀಗಿಸಲಾಗುತ್ತಿದೆ. ಅಲ್ಲದೆ ಇಲ್ಲಿನ ಡಾಕ್ಟರೇಟು ಪ್ರಶಸ್ತಿಗಳೂ ಬಿಕರಿಗಿವೆಯೆಂದು ಹೇಳಲಾಗುತ್ತಿದೆ.

■ 'ಕರಾವಳಿ ಅಲೆ'ಯಿಂದ

ಜಾತ್ಯಾತೀತ ಶಕ್ತಿಗಳು ಒಂದಾಗಲಿ....

ಪುಟ 12 ರಿಂದ

ಅದನ್ನು ಮರೆಮಾಚುವುದು ಸರಿಯಲ್ಲ ಎಂದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಟಿ.ಪಿ.ರಮೇಶ್ ಅವರು ಮಾತನಾಡಿ, ಯಾವುದೇ ಹೋರಾಟವನ್ನು ಅದರಲ್ಲೂ ಜನಪರ, ನ್ಯಾಯಬದ್ಧ ಹೋರಾಟ ಮಾಡುವವರಿಗೆ ಧಮಕಿ ಹಾಕುವುದರಿಂದ ಅದರ ಸದ್ದನ್ನು ಅಡಗಿಸಲು ಆಗುವುದಿಲ್ಲ. ಅದು ಗಾಳಿಗೆ ಗುದ್ದಿದಂತೆ ಆಗುತ್ತದೆ. ಕೊಡಗಿನ ಚರಿತ್ರೆಯಲ್ಲಿ ಎಷ್ಟೋ ಹೋರಾಟಗಳು ನಡೆದಿದೆ. ಅದರಿಂದ ಜಿಲ್ಲೆಯ ಅಭಿವೃದ್ಧಿಯೂ ಆಗಿದೆ ಎಂದರು.

ಅಧ್ಯಕ್ಷತೆಯನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಡಾ.ದುರ್ಗಾಪ್ರಸಾದ್ ಅವರು ವಹಿಸಿದ್ದರು. ವೇದಿಕೆಯಲ್ಲಿ ಜರಪ್ಪ ಹಾನಗಲ್, ಕು[illegible]ರ ಮುತ್ತಪ್ಪ ವಕೀಲರಾದ ಕೆ.ಆರ್.ವಿದ್ಯಾಧರ್, ಅಲ್ಲಾರಂಡ ವಿಠ್ಠಲ್ ನಂಜಪ್ಪ, ವಕೀಲ ಕುಂಞ ಅಬ್ದುಲ್ಲಾ, ಬಿ.ಟಿ.ಪ್ರದೀಪ್, ಡಿವೈಎಫ್‌ಐನ ರಮೇಶ್ ರೈ, ಬುಡಕಟ್ಟು ಸಂಘದ ಭಾಗ್ಯ ಹೆಚ್.ಎಸ್.ಮುತ್ತಪ್ಪ ಆಟೋ ಚಾಲಕರ ಸಂಘದ ಸಿದ್ದಿಕ್ ವಕೀಲ ಕೆ.ವಿ.ಸುನಿಲ್ ಮೊದಲಾದವರು ಉಪಸ್ಥಿತರಿದ್ದರು.

ಪಿ.ಆರ್.ಭರತ್ ಕಾರ್ಯಕ್ರಮ ನಿರೂಪಿಸಿ, ವಸಂತ್‌ಕುಮಾರ್ ಹೊಸಮನೆ ಸ್ವಾಗತಿಸಿದರು. ಕುಂಞ ಅಬ್ದುಲ್ಲಾ ವಂದಿಸಿದರು.

ಸಾವಿರಾರು ಇರಾಕಿಗಳ ಬುಶ್ ಶೂ ಪ್ರತಿಭಟನೆ

ಅಧ್ಯಕ್ಷ ಬುಶ್ ಗೆ ಪತ್ರಿಕಾ ಗೋಷ್ಠಿಯಲ್ಲಿ ಶೂ-ಪೂಜೆ ಮಾಡಿದ ಪತ್ರಕರ್ತನಿಗೆ ಜೈಲಿನಲ್ಲಿ ಚಿತ್ರಹಿಂಸೆ ಕೊಡಲಾಗುತ್ತಿದೆ. ಆತನನ್ನು ಬಿಡುಗಡೆ ಮಾಡಬೇಕು. ಆತ ಇರಾಕಿನ ಜನತೆಯ ಪರವಾಗಿ ಮಾತನಾಡಿದ್ದಾನೆ. ಆತ ಕ್ಷಮಾಪಣೆ ಕೇಳುವುದಿಲ್ಲ, ಕೇಳಬೇಕಾಗಿಲ್ಲ. ಕ್ಷಮಾಪಣೆ ಕೇಳಬೇಕಾಗಿರುವುದು ಇರಾಕಿ ಸರ್ಕಾರ. ಎಂಬ ಘೋಷಣೆಗಳ ಜತೆಗೆ ಸಾವಿರಾರು ಇರಾಕಿಗಳು ದೊಡ್ಡ ಪ್ರತಿಭಟ'ನಾ ಪ್ರದರ್ಶನ ನಡೆಸಿದರು. ಪ್ರದರ್ಶನದಲ್ಲಿ ಬುಶ್ ಫೋಟೋಗೆ ಶೂ-ಪೂಜೆ ಮಾಡಲಾಯಿತು.

➡

ಸಂಯುಕ್ತ ಸರ್ಕಾರ ಈ ನರಮೇಧ ನಡೆಸಿದೆ ಎನ್ನಲಾಗಿದೆ.

ಇಸ್ರೇಲ್ ಇಂತಹ ಜನಾಂಗವಾದಿ ಅವಮಾನವೀಯ ಹತ್ಯೆ ಮುಂದುವರೆಸಲು ಸಾಧ್ಯವಾಗಿರುವುದು ಅಮೇರಿಕದ ಬೆಂಬಲ ಇದಕ್ಕಿರುವುದರಿಂದ ಮತ್ತು ಈ ಹತ್ಯೆ ನಿಲ್ಲಿಸಲು ಅಂತರಾಷ್ಟ್ರೀಯ ಖಂಡನೆ ಮತ್ತು ಒತ್ತಡ ಬರದಿರುವುದರಿಂದ. ಭದ್ರತಾ ಸಮಿತಿ ಖಂಡನೆ ನಿರ್ಣಯ ತೆಗೆದುಕೊಳ್ಳದಂತೆ ಅಮೇರಿಕ ತನ್ನ ವಿಟೋ ಬಳಸುತ್ತದೆ. ಯುರೋಪಿಯನ್ ಸರ್ಕಾರಗಳು ಈ[illegible] ಕೃತ್ಯಗಳನ್ನು ಒಪ್ಪದಿದ್ದರೂ ಅದನ್ನು ನಿಲ್ಲಿಸಲು ಒತ್ತಡ ಹಾಕಲು ತಯಾರಿಲ್ಲ. ಅಮೇರಿಕದ ಮರ್ಜಿಗೆ ವಿರುದ್ಧ ಉಸಿರೆತ್ತಲು ಧೈರ್ಯವಿಲ್ಲ. ಈ ಕ್ಯಾಂಪಿಗೆ ಹೊಸ ಸೇರ್ಪಡೆ ಭಾರತದ ಮನಮೋಹನ ಸಿಂಗ್ ಪಿಸುಮಾತಿನ ಹೇಳಿಕೆ ಬಿಟ್ಟರೆ ಅದು ಏನೂ ಮಾಡಲೂ ತಯಾರಿಲ್ಲ. ಬದಲಾಗಿ ಈ ನರಹತ್ಯೆ ನಡೆಸುತ್ತಿರುವ ಇಸ್ರೇಲಿ ಮಿಲಿಟರಿ ಯಂತ್ರದ ಜತೆ ಶಾಮೀಲಾಗಿದೆ. ಅದನ್ನು ಬಲಪಡಿಸುವುದರಲ್ಲಿ ತೊಡಗಿದೆ. ಇಸ್ರೇಲೀ ಬೇಹುಗಾರಿಕೆ ಉಪಗ್ರಹ ಹಾರಿಸಿದೆ. ಇಸ್ರೇಲ್ ಜತೆ ಕ್ಷಿಪಣಿ ಉತ್ಪಾದನೆಗೆ ಹೊರಟಿದೆ. ಇಂತಹ ಜನಾಂಗವಾದಿ ಭಯೋತ್ಪಾದನೆಯಲ್ಲಿ ತೊಡಗಿರುವ ಸರ್ಕಾರದ ಹೆಗಲ ಮೆಲೆ ಕೈ ಹಾಕಿ ಭಯೋತ್ಪಾದನೆ ವಿರುದ್ಧ ಹೋರಾಟ ಮಾಡುವ ಹಾಸ್ಯಾಸ್ಪದ ಪ್ರಯತ್ನದಲ್ಲಿ ಸಿಂಗ್ ಸರ್ಕಾರ ತೊಡಗಿದೆ.

ವಿಶ್ವ ಸಂಸ್ಥೆ ಮತ್ತು ಅಂತರಾಷ್ಟ್ರೀಯ ಸಮುದಾಯ ಈ ಬರ್ಬರ ಹತ್ಯೆಯನ್ನು ಬಲವಾಗಿ ಖಂಡಿಸಬೇಕು. ಅದನ್ನು ನಿಲ್ಲಿಸಲು ಕ್ರಮ ಕೈಗೊಳ್ಳಬೇಕು.


ಸಮುದಾಯ ಸಮ್ಮೇಳನ...

ಪುಟ 16ರಿಂದ

ಹಿನ್ನೆಲೆಯಲ್ಲಿ, ಜಾತ್ಯತೀತ ಮೌಲ್ಯಗಳನ್ನು ಕಾಪಾಡುವ ಸಲುವಾಗಿ ಪರಿಣಾಮಕಾರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದ ಅವಶ್ಯಕತೆ ಹಿಂದೆಂದಿಗಿಂತಲೂ ಈಗ ಹೆಚ್ಚಿದೆ. ಆ ನಿಟ್ಟಿನಲ್ಲಿ ಸಮುದಾಯ ತನ್ನನ್ನು ತಾನು ಮಾರ್ಪಾಡುಮಾಡಿಕೊಳ್ಳಬೇಕಾದ ಅಗತ್ಯತೆ ಮತ್ತು ಅನಿವಾರ್ಯತೆ ಇದೆ" ಎಂಬ ಸಂದೇಶ ನೀಡಿದರು.

ಹೆಚ್ಚುತ್ತಿರುವ ಅಸಹನೆ ಸಂಸ್ಕೃತಿ

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಸಮುದಾಯ ಸಮನ್ವಯ ಸಮಿತಿಯ ಅಧ್ಯಕ್ಷರಾಗಿರುವ ಆರ್.ಕೆ.ಹುಡುಗಿಯವರು ತಮ್ಮ ಅಧ್ಯಕ್ಷಭಾಷಣ ಮಾಡುತ್ತಾ "ಅಭಿವ್ಯಕ್ತಿ ಸ್ವಾತಂತ್ರ್ಯ ಮೂಲಭೂತ ಹಕ್ಕಾಗಿದ್ದಾಗ್ಯೂ ಆ ಹಕ್ಕನ್ನು ಮೊಟಕುಗೊಳಿಸುವ ಎಲ್ಲಾ ಪ್ರಯತ್ನಗಳು ನಡೆಯುತ್ತಿವೆ. ಫ್ಯಾಸಿಸ್ಟ್ ಮನೋಭಾವ



ಬೆಳೆಯುತ್ತಿದೆ. ಅಸಹನೆಯ ಪ್ರವೃತ್ತಿ ಮಿತಿ ಮೀರುತ್ತಿದೆ. ಉಳ್ಳವರು ಮತ್ತು ಬಡವರ ನಡುವಿನ ಕಂದರ ಹೆಚ್ಚಾಗುತ್ತಿದೆ" ಎಂದು ಕಳವಳ ವ್ಯಕ್ತಪಡಿಸಿದರು. ಸಾಮಾಜಿಕ ಬದಲಾವಣೆಯನ್ನು ತನ್ನ ಗುರಿಯನ್ನಾಗಿ ಇಟ್ಟುಕೊಂಡಿರುವ ಸಮುದಾಯ ದೇಶದಲ್ಲಿ ಆ ಮೂಲಕ ರಾಜ್ಯದಲ್ಲೂ ಪ್ರಜಾಸತ್ತೆ ಉಳಿಸಲು ಮತಾಂಧರ ವಿರುದ್ಧ ನಿರಂತರ ಸಮರ ಸಾರಬೇಕೆಂದು ಹುಡುಗಿ ಕಳಕಳಿಯ ಮನವಿ ಮಾಡಿದರು.

ಪ್ರಾರಂಭದಲ್ಲಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ವೆಂಕಟೇಶಮೂರ್ತಿಯವರು ಸ್ವಾಗತ ಭಾಷಣ ಮಾಡಿದರು. ನಂತರದಲ್ಲಿ

ಸಮುದಾಯ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಸುರೇಂದ್ರ ರಾವ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಬೆಂಗಳೂರು ಸಮುದಾಯದ ಕಾರ್ಯದರ್ಶಿ ಹಾಗೂ ಸ್ವಾಗತ ಸಮಿತಿಯ ಸಂಚಾಲಕರೂ ಆಗಿರುವ ಶಶಿಧರ್ ಜೆ.ಸಿ. ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

ಅತ್ತ ಉತ್ತರದ ಗುಲ್ಬರ್ಗಾದಿಂದ ದಕ್ಷಿಣದ ಕುಂದಾಪುರದವರೆಗೆ, ಇತ್ತ ಪಶ್ಚಿಮದ ರಾಮದುರ್ಗದಿಂದ ಪೂರ್ವದ ಕೆ.ಜಿ.ಎಫ್ ನವರೆಗೆ ಒಟ್ಟು 18 ಘಟಕಗಳಿಂದ ಒಟ್ಟು 123 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಪ್ರತಿನಿಧಿಗಳ ಒಟ್ಟು ಸಂಖ್ಯೆಯ ಐದನೇ ಒಂದರಷ್ಟು ಭಾಗ ಮಹಿಳೆಯರು ಭಾಗವಹಿಸಿದ್ದರು. 35 ವರ್ಷ ವಯಸ್ಸಿಗಿಂತ ಕಡಿಮೆ ಇರುವವರು 42 ಮಂದಿ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಹೊಸ ಚಿಗುರು ಹಳೆ ಬೇರು ಜತೆಗೂಡಿ ಸಮುದಾಯ ಕಟ್ಟಿಬೆಳೆಸುವ ಸೂಚನೆಯನ್ನು ಸಮ್ಮೇಳನ ಸ್ಪಷ್ಟವಾಗಿ ನೀಡಿದೆ.

ನಿರ್ಣಯಗಳು

- ಕನ್ನಡವನ್ನು ರಾಷ್ಟ್ರೀಯ ಭಾಷೆಯಾಗಿ, ಆಡಳಿತ ಭಾಷೆಯಾಗಿ ಮತ್ತು ಶಿಕ್ಷಣದ ಮಾಧ್ಯಮ ಭಾಷೆಯಾಗಿ ಕಡ್ಡಾಯಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಬೇಕು.
- ಕರ್ನಾಟಕದ ಎಲ್ಲಾ ಕಲಾವಿದರಿಗೂ ವೈದ್ಯಕೀಯ ವಿಮಾಸೌಲಭ್ಯ ಕಲ್ಪಿಸಲು ಸರ್ಕಾರ ಕ್ರಮ ಕೈಗೊಳ್ಳಬೇಕು ;
- ಕಲಾವಿದರ ಸಂಭಾವನೆಯನ್ನು ಮಾಸಿಕ ರೂ.1500 ರಿಂದ ಮಾಸಿಕ ರೂ.5000 ಗೆ ಹೆಚ್ಚಿಸಬೇಕೆಂದು ರಾಜ್ಯ ಸಮ್ಮೇಳನ ಸರ್ಕಾರವನ್ನು ಒತ್ತಾಯಿಸುತ್ತದೆ; ಕಲಾವಿದರಿಗೆ ಗೌರವಧನ ಮಂಜೂರಿಮಾಡಲು ಈಗಿರುವ 50 ವರ್ಷ ವಯಸ್ಸಿನ ಮಿತಿಯನ್ನು 25 ವರ್ಷ ವಯಸ್ಸಿಗೆ ಇಳಿಸಬೇಕು:

ಸಮ್ಮೇಳನ ಸರ್ವಾನುಮತದಿಂದ ಆಯ್ಕೆ ಮಾಡಿದ ನೂತನ ಪದಾಧಿಕಾರಿಗಳು ಮತ್ತು ರಾಜ್ಯ ಸಮಿತಿ

ಅಧ್ಯಕ್ಷ: ಆರ್.ಕೆ.ಹುಡುಗಿ ಗುಲ್ಬರ್ಗಾ, **ಪ್ರಧಾನ ಕಾರ್ಯದರ್ಶಿ:** ಟಿ.ಸುರೇಂದ್ರ ರಾವ್ ಬೆಂಗಳೂರು, **ಉಪಾಧ್ಯಕ್ಷರು:** ಅಚ್ಯುತ ಕೆ.ಜಿ.ಎಫ್, **ಸಹ ಕಾರ್ಯದರ್ಶಿಗಳು:** ಶ್ರೀಪಾದ ಭಟ್ ಹಾವೇರಿ, ಶಶಿಧರ್ ಭಾರಿಘಾಟ್ ಬೆಂಗಳೂರು, ವೇಣುಗೋಪಾಲ್ ಬೆಂಗಳೂರು, ಡಿ.ಬಿ.ಬಡಿಗೇರ್ ಹರಪನಹಳ್ಳಿ, ಶ್ರೀಮತಿ ಕೆ.ಎಸ್.ವಿಮಲ ಬೆಂಗಳೂರು, **ಖಜಾಂಚಿ:** ರವೀಂದ್ರನಾಥ್ ಸಿರಿವರ ಬೆಂಗಳೂರು

ವಲಯ ಕಾರ್ಯದರ್ಶಿಗಳು: ಗುಲ್ಬರ್ಗಾ ವಲಯ ಶಂಕ್ರಯ್ಯಾ ಆರ್ ಘಂಟಿ

ಧಾರವಾಡ ವಲಯ ಬಿ.ಐ.ಈಳಿಗೇರಾ

ಮಂಗಳೂರು ವಲಯ ವಾಸುದೇವ ಉಚ್ಚಿಲ್

ಬೆಂಗಳೂರು ವಲಯ ಶಶಿಧರ್ ಜೆ.ಸಿ.

ಸಾಂಸ್ಕೃತಿಕ ಸವಾಲುಗಳಿಗೆ ಎದುರಾದ

ಸಮುದಾಯ ಸಮ್ಮೇಳನ

- ಕರ್ನಾಟಕದ ಸೌಹಾರ್ದ ಪರಂಪರೆ ರಕ್ಷಿಸಲು ಪಣ
- ಪ್ರಜಾಸತ್ತಾತ್ಮಕ ಸಂಸ್ಕೃತಿ ಕಾಪಾಡಲು ತೀರ್ಮಾನ
- ರಾಜ್ಯವ್ಯಾಪೀ ವಿಸ್ತರಿಸಲು ನಿರ್ಧಾರ

ನಗರ ಕ್ಯಾಂಪಸ್‌ನಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸಭಾಂಗಣ ಕಿಕ್ಕಿರಿದು ತುಂಬಿತ್ತು. ಪ್ರತಿನಿಧಿಗಳು ನಿಗದಿತ ಸಮಯಕ್ಕೆ ಮೊದಲೇ ಸಭೆಯಲ್ಲಿ ಹಾಜರಿದ್ದು ಉದ್ಘಾಟನೆಗಾಗಿ ಕಾತುರದಿಂದ ನಿರೀಕ್ಷಿಸುತ್ತಾ ಕುಳಿತಿದ್ದರು. ಸಮುದಾಯದ ರಾಜ್ಯ ಸಮ್ಮೇಳನ ಆಗುತ್ತಿರುವ ಸುದ್ದಿ ಕೇಳಿಯೇ ಸಂಭ್ರಮಪಟ್ಟಿದ್ದ ಹಿತೈಷಿಗಳು ಸಂತೋಷ ಹಾಗೂ ಸಡಗರದಿಂದ ಅಲ್ಲಿಗೆ ಆಗಮಿಸಿ ಕುತೂಹಲದ ಕಣ್ಣುಗಳಿಂದ ಸಭೆಯ ಪ್ರಾರಂಭಕ್ಕಾಗಿ ಕಾಯುತ್ತಿದ್ದರು. ಆಗ ಸಮುದಾಯದ ಗೆಳತಿ ಶಾಂತಾ ಕುಲಕರ್ಣಿ ಮತ್ತು ಗೆಳೆಯ ಮಹಂತೇಶ ಹಾಗೂ ಸಮುದಾಯದ ಇತರೆ ಗೆಳೆಯರಿಂದ ತೇಲಿಬಂದ 'ಸಮುದಾಯ ಗೀತೆ' . . . .

ಎಲ್ಲಿಂದ ಬಂದಿರೆಂದು ಕೇಳಬಹುದು ನೀವು
ಜನರ ನಡುವಿನಿಂದ ಎಂದು ಹೇಳುತೇವೆ ನಾವು
ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದು ನೀವು
ತಿರುಗಿ ಮತ್ತೆ ಜನರ ಬಳಿಗೆ ಹೋಗುತೇವೆ ನಾವು...

ಇಡೀ ಸಭೆಯನ್ನು ರೋಮಾಂಚನಗೊಳಿಸಿತು. 'ಸಮುದಾಯ' ಜನಸಮುದಾಯಕ್ಕೆ ಬದ್ಧವಾಗಿತ್ತು, ಈಗಲೂ ಬದ್ಧವಾಗಿದೆ ಮತ್ತೆ ಮುಂದೆಯೂ ಬದ್ಧವಾಗಿರುತ್ತದೆ ಎನ್ನುವ ಸಂದೇಶವನ್ನು ಎತ್ತರದ ಕಂಠದಲ್ಲಿ ಮತ್ತೆ ಬಿತ್ತರಿಸಿತು ಆ ಗೀತೆ.

ಉದ್ಘಾಟನೆ

ಸಮ್ಮೇಳನಕ್ಕೆ ಕೆಲವೇ ದಿನಗಳ ಹಿಂದೆ ಮುಂಬಯಿ ನಗರ ಭಯೋತ್ಪಾನೆಯಿಂದ ನಲುಗಿತ್ತು. ಭಯೋತ್ಪಾಕರ ಹುಚ್ಚು ರಕ್ತದೋಕುಳಿ ಇಡೀ ದೇಶದಲ್ಲಿ ಆತಂಕದ ಛಾಯೆ ಮೂಡಿಸಿತ್ತು. ಅಮಾಯಕರ ಹತ್ಯೆ ಎಲ್ಲರ ಮನದಲ್ಲಿ ದುಃಖ ಮಡುಗಟ್ಟುವಂತೆ ಮಾಡಿತ್ತು. ಈ ಹಿನ್ನೆಲೆಯಲ್ಲಿ ಸಮುದಾಯ ರಾಜ್ಯ ಸಮ್ಮೇಳನವನ್ನು ಡಿಸೆಂಬರ್ 7, 2008 ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಹಿರಿಯ ಪತ್ರಕರ್ತ ಹಾಗೂ 'ದಿ ಹಿಂದು' ಇಂಗ್ಲಿಷ್ ದೈನಿಕದ ಪ್ರಧಾನ ಸಂಪಾದಕ ಶ್ರೀ ಎನ್.ರಾಮ್ ಉದ್ಘಾಟಿಸಿದರು. (ಉದ್ಘಾಟನಾ ಭಾಷಣವನ್ನು ಈಗಾಗಲೇ ಜನಶಕ್ತಿ, ಜನವರಿ 4, 2009 ರ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ)

ಈ ಸಂದರ್ಭದಲ್ಲಿ ಸಾಂಸ್ಕೃತಿಕ ಸಂಘಟನೆಯಾದ 'ಸಮುದಾಯ'ದ ಮೇಲೆ ದೊಡ್ಡ ಜವಾಬ್ದಾರಿ ಇದೆ. ಜಾತ್ಯತೀತ ಮೌಲ್ಯಗಳನ್ನು ಎತ್ತಿಹಿಡಿದು ದೇಶದ ಪ್ರಜಾಪ್ರಭುತ್ವವನ್ನು ರಕ್ಷಿಸುವ ನಿಟ್ಟಿನಲ್ಲಿ 'ಸಮುದಾಯ' ತನ್ನೆಲ್ಲಾ ಶಕ್ತಿಯನ್ನು ಬಳಸಬೇಕು ಎಂದು ಎನ್.ರಾಮ್ ಅವರು ತಾಕೀತು ಮಾಡಿದರು.

ಸಾಂಸ್ಕೃತಿಕ ದಿವಾಳಿತನ

ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಕರ್ನಾಟಕ ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಮೂರ್ತಿಗಳಾದ ಹೆಚ್.ಎನ್. ನಾಗಮೋಹನ್ ದಾಸ್‌ರವರು "ಸಮಾಜದಲ್ಲಿನ ಒಂದು ವಿಭಾಗದ ಜನರ ಸಾಂಸ್ಕೃತಿಕ ದಿವಾಳಿತನ ಮತ್ತು ಬಡಬಗ್ಗರ ಬಗ್ಗೆ ಅವರ ನಿಷ್ಕಾಳಜಿ ಇಂದಿನ ದುಸ್ಥಿತಿಗೆ ಕಾರಣ" ಎಂದು ಹೇಳಿದರು. ಮತಧರ್ಮ ಪ್ರಜಾಪ್ರಭುತ್ವದಿಂದ ದೂರ ಸರಿದಾಗ ಮೂಲಭೂತವಾದ ಹುಟ್ಟುತ್ತದೆ. ರಾಜಕೀಯದಲ್ಲಿ ಧರ್ಮ ಬೆರೆತಾಗ ಕೋಮುವಾದ ಜನ್ಮ ತಳೆಯುತ್ತದೆ. ಇಂತದ್ದಕ್ಕೆ ಗಳಿಗೆ ಪ್ರಜ್ಞಾವಂತರು ಅವಕಾಶ ನೀಡಬಾರದೆಂದು ಅವರು ಮನವಿ ಮಾಡಿದರು.

ಭಯೋತ್ಪಾದನೆಗಿಂತಲೂ ಅಪಾಯ ಕಾರಿ

"ಬಂದೂಕಿನ ಭಯೋತ್ಪಾದನೆಗಿಂತ ಲೇಖನಿಯ ಭಯೋತ್ಪಾದನೆ ಹೆಚ್ಚು ಅಪಾಯಕಾರಿ. ಮುಂಬಯಿಯಲ್ಲಿ ನಡೆದ ಭಯೋತ್ಪಾದನೆ ಒಂದು ರೀತಿಯದಾದರೆ ಇನ್ನೂ ಅನೇಕ ಭಯೋತ್ಪಾದನೆಗಳು ನಮ್ಮ ನಡುವೆ ಇವೆ. ವ್ಯಾಪಾರೀಕರಣಕ್ಕೆ ಶರಣಾಗಿರುವ ಮಾಧ್ಯಮಗಳು- ಮುಖ್ಯವಾಗಿ ಟಿ.ವಿ.ಮಾಧ್ಯಮ - ಜನಮಾನಸದಲ್ಲಿ ಭೀತಿಯನ್ನು ಉಂಟುಮಾಡುವ ಕಾರ್ಯಕ್ರಮಗಳನ್ನು ದಿನನಿತ್ಯ ಬಿತ್ತರಿಸುತ್ತಿವೆ. ಜನರು ಸದಾ ಆತಂಕದಲ್ಲಿ ಬದುಕು ಸವೆಸುವಂತಾಗಿದೆ. ಅದರ ಬದಲು ಮಾಧ್ಯಮಗಳು ಜನರೊಡನೆ ನೇರವಾಗಿ ಮಾತಾಡುವಂತಾಗಬೇಕು. ಅವರ ಸಮಸ್ಯೆಗಳಿಗೆ ಸ್ಪಂದಿಸಿ ಪರಿಹಾರ ದೊರಕಿಸಿ ಕೊಡುವಲ್ಲಿ ಮಾಧ್ಯಮಗಳು ಮುಂದಾಗಬೇಕು" ಎಂದು ಕರೆ ನೀಡಿದರು.

ಸಾಂಸ್ಕೃತಿಕ ಲೋಕದ ಹೊಣೆ

ಸಾಹಿತ್ಯ, ಕಲೆ, ಸಂಗೀತ ಮತ್ತು ಮಾಧ್ಯಮಗಳಂತಹ ಸಾಂಸ್ಕೃತಿಕ ಲೋಕದಲ್ಲಿರುವವರು ಬೆಳಕನ್ನು ಸೂಸಬೇಕೇ ಹೊರತು ಬೆಂಕಿಯನ್ನಲ್ಲ. ಕತ್ತಲೆಯಲ್ಲಿರುವ ಜನರನ್ನು ಬೆಳಕಿನೆಡೆ[illegible] ಕೊಂಡೊಯ್ಯುವ ಕಾರ್ಯದಲ್ಲಿ ಅವರು ನಿರತರಾದರೆ, ಖಂಡಿತವಾಗಿಯೂ ಆರೋಗ್ಯವಂ[illegible] ಸಮಾಜ ನಿರ್ಮಾಣಕ್ಕೆ ವಾಂದಿ ಹಾಕಿದಂ[illegible] ಆಗುತ್ತದೆ ಎಂದು ನ್ಯಾಯಮೂರ್ತಿಗಳ[illegible] ಅಭಿಪ್ರಾಯಪಟ್ಟರು.

ಸಮುದಾಯ ಬದಲಾಗಬೇಕು

ಕಾರಣಾಂತರಗಳಿಂದ ಉದ್ಘಾಟನ[illegible] ಸಮಾರಂಭಕ್ಕೆ ಆಗಮಿಸಲು ಆಗುತ್ತಿಲ್ಲ ಎಂದ[illegible] ಲಿಖಿತವಾಗಿ ತಮ್ಮ ಭಾಷಣವನ್ನು ಕಳಿಸಿ[illegible] ಸಮುದಾಯದ ಸಂಸ್ಥಾಪಕ ಮುಖಂಡ ಹಾಗ[illegible] ಪ್ರಖ್ಯಾತ ರಂಗ ನಿರ್ದೇಶಕರೂ ಆಗಿರು[illegible] ಪ್ರಸನ್ನರವರು "ನಮ್ಮ ಸುತ್ತಮುತ್ತಲಿ[illegible] ಸಮಾಜದಲ್ಲಿಂದು ಮೂಲಭೂತವಾದಿಗ[illegible] ದಾಂಧಲೆ ಹೆಚ್ಚಾಗುತ್ತಿದೆ. ಹಿಂಸೆ, ಕ್ರೌರ್ಯ[illegible] ಅಶಾಂತಿಯ ವಾತಾವರಣ ಸೃಷ್ಟಿಯಾಗುತ್ತಿದೆ. [illegible]

ಪುಟ 15



ಕವಿತೆ

ಸೈಜು 10ರ ಬೂಟು

ಬೇಡಿ ನಿಂತ ಖಾಲಿ ಡಬರಿಗಳಿಗೆ
ಮದ್ದು ಗುಂಡು ತುಂಬಿ
ಚಾಚಿದ ಕೈಗಳಲಿ ಬಂದೂಕುಗಳನ್ನಿಟ್ಟು
ದುಡಿವ ಕೈಗಳನೆ ಕಟ್ಟಿ ಹಾಕಿದವನೆಡೆಗೆ
ತೂರಿ ಬಂದ ಬೂಟು
ಬರಿ ಬೂಟಾಟಿಕೆಯದಲ್ಲ ॥

ಜತೆಗೂಡಿ ಆಡಿದ ಅಣ್ಣನ ಕರೆದು
ಕೈಯಲ್ಲಿ ಬಂದೂಕನ್ನಿಟ್ಟು ಕಳಿಸಿ
ತಾಲಿಬಾನು-ಖಾಲಿಬಾನು
ಮಾಡಿದವನೆಡೆಗೆ
ತೂರಿ ಬರುತಿವೆ ಬುರ್ಖಾದೊಳಗಿನ
ನೋವಿನುಂಡೆಗಳು, ಬೆಂಕಿಯುಂಡೆ ಗಳಾಗಿ॥

ದೇವ-ಧರ್ಮದ ನೆಪದಿ
ಭಯದ ನೆರಳ ಕೆಳಗೆ
ಏಸು-ವಾಸು-ಅಲ್ಲಾಹನ
ನಿದ್ದೆಗೆಡಿಸಿದವನೆಡೆಗೆ
ಬೂಟು ಎಸೆದ ಮುಂತಾದೀರ್‌ನ
ಕೈಗಳಲ್ಲಿ ಕೋಟಿ ಕೋಟಿ
ಜನರ ಶಕುತಿ

ಅಲ್ಲಿ ಇರಾಕಿನ
ಯುದ್ಧ ನಿಂತ ಮಸಣದಲ್ಲಿ
ವಿಧವೆಯರು
ನಟಿಕೆ ಮುರಿದ ಸದ್ದು
ಅಮೇರಿಕಾದ ಮನೆಗಳಲ್ಲಿ
ಯುದ್ಧಕ್ಕೆಂದು ಹೋದ ಸೈನಿಕರು
ಸೈತಾನರಾದ ಸುದ್ದಿಯಿತ್ತು.

ತೂರಿ ಬಂದ ಬೂಟಿನಲ್ಲಿ
ಸತ್ತ ಲಕ್ಷೋಪಲಕ್ಷ ಜನರ ಕಾಲುಗಳಿದ್ದವು
ಕೋಟಿ ಕೋಟಿ ಯುದ್ಧ
ವಿಕಲಾಂಗರ ಕಾಲುಗಳಿಗೆ ಝಾಡಿಸಿ
ಒದೆವ ಶಕುತಿ ಬಂದಿತ್ತು.

ಸೈಜು ಯಾವುದಾದರೇನು
ತೂರಿ ಬಂದ ಬೂಟಿನಲ್ಲಿ
ಚರಿತ್ರೆಯ ಕಿವಿಯ ಹಿಂಡಿ
ಪಾಠ ಹೇಳಿದ ವರ್ತಮಾನವಿತ್ತು

ತೂರಿ ಬಂದ ಬೂಟಿನಲ್ಲಿ
ಪಾರಿವಾಳ ಹಾರುವ ತವಕವಿತ್ತು
ಗುಬ್ಬಿಗೂಡು ಕಟ್ಟುವ ಅವಸರವಿತ್ತು
ಚರಿತ್ರೆ ಹೇಳಿದರೂ
ಯುದ್ಧ ನಿಂತಿಲ್ಲ
ವರ್ತಮಾನ ಕೂಗಿ ಹೇಳುತ್ತಿದೆ
ಇದೀಗ ಶುರುವಾಗಿದೆ
ಯುದ್ಧ ಶಾಂತಿಗಾಗಿ

'ಸೈಜು ಹತ್ತು' ಎಂದ
ಸಾವಿನ ವ್ಯಾಪಾರಿಯ ಮೊಗದಲ್ಲಿ
ಸಾವಿನ ಕಳೆ
ನಗು ನಗುತ್ತಲೇ ನೇಣುಗಂಬವೇರಿದ
ಸದ್ದಾಂ ಇನ್ನೂ
ನಗುತ್ತಲೇ ಇದ್ದಾನೆ ॥

■ ಬಿ.ಶ್ರೀನಿವಾ[illegible]

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH